**ನೀನಾಸಮ್ ಸಂಸ್ಕೃತಿ ಶಿಬಿರ**

ಅಕ್ಟೋಬರ್ ೨೦೧೨

ಕಳೆದ ೨ ದಶಕಗಳಿಗೂ ಮಿಕ್ಕು ನೀನಾಸಮ್ ಪ್ರತಿ ಅಕ್ಟೋಬರ್‌ನಲ್ಲಿ ಚಲನಚಿತ್ರ-ಸಂಸ್ಕೃತಿ ಶಿಬಿರಗಳನ್ನು ನಡೆಸುತ್ತ ಬಂದಿದೆ. ಈ ವರ್ಷದ ಸಂಸ್ಕೃತಿ ಶಿಬಿರವೂ ಅದೇ ಮಾದರಿಯಲ್ಲಿ ಯೋಜಿತವಾಗಿದ್ದು, **ಅಕ್ಟೋಬರ್ ೭ರಿಂದ ೧೩ರವರೆಗೆ** — ಏಳುದಿನ — ನಡೆಯುತ್ತದೆ.

ಈ ಶಿಬಿರದಲ್ಲಿ ರಂಗಭೂಮಿ, ಸಾಹಿತ್ಯ, ಸಂಗೀತ, ನೃತ್ಯ, ಚಲನಚಿತ್ರ ಮುಂತಾದ ಸಾಂಸ್ಕೃತಿಕ ಮಾಧ್ಯಮಗಳ ಸ್ವರೂಪ, ವೈವಿಧ್ಯ, ಮೀಮಾಂಸೆ, ವಿಮರ್ಶೆ, ಈ ಮಾಧ್ಯಮಗಳ ಪರಸ್ಪರ ಸಂಬಂಧ ಹಾಗೂ ಒಟ್ಟೂ ಸಮಾಜದೊಂದಿಗೆ ಸಂಸ್ಕೃತಿಯ ಸಂಪರ್ಕ — ಈ ವಿಷಯಗಳ ಬಗ್ಗೆ ಅಭ್ಯಾಸ, ಚರ್ಚೆ, ವಿಚಾರವಿನಿಮಯ ನಡೆಯುತ್ತದೆ. ಜತೆಗೆ ಪ್ರತಿದಿನ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳ ಉತ್ಸವ ನಡೆಯುತ್ತದೆ. ಶಿಬಿರದಲ್ಲಿ ರಂಗಭೂಮಿಯ ಬಗ್ಗೆ, ಸಂಗೀತ-ನೃತ್ಯ ಮಾಧ್ಯಮಗಳ ಬಗ್ಗೆ, ಸಾಹಿತ್ಯದ ವಿವಿಧ ಪ್ರಕಾರಗಳ ಬಗ್ಗೆ, ಚಲನಚಿತ್ರ ಸಹೃದಯತೆಯ ಬಗ್ಗೆ ಮತ್ತು ಒಟ್ಟೂ ಸಂಸ್ಕೃತಿ- ಸಂವಹನದ ಪ್ರಕ್ರಿಯೆಯ ಬಗ್ಗೆ ಉಪನ್ಯಾಸ ಪ್ರಾತ್ಯಕ್ಷಿಕೆ-ಚರ್ಚೆಗಳು ನಡೆಯುತ್ತವೆ. ಪ್ರತಿಯೊಂದು ವಿಷಯದ ಬಗ್ಗೆ ಶಿಬಿರ ನಡೆಯುವಾಗಲೂ ಆಯಾ ಮಾಧ್ಯಮದ ಆಯ್ದ ಕೃತಿಗಳನ್ನು ಪ್ರಾಯೋಗಿಕವಾಗಿ ಬಳಸಿಕೊಳ್ಳಲಾಗುತ್ತದೆ. ಶಿಬಿರ ಪ್ರತಿನಿತ್ಯ ಬೆಳಿಗ್ಗೆ ೯ ಗಂಟೆಯಿಂದ ೧ ಗಂಟೆ ಹಾಗೂ ಮಧ್ಯಾಹ್ನ ೨-೩೦ರಿಂದ ೬ರತನಕ ನಡೆಯುತ್ತದೆ. ಇದಲ್ಲದೆ ಪ್ರತಿದಿನ ಸಂಜೆ ರಂಗ ಪ್ರದರ್ಶನಗಳು (ತಿರುಗಾಟ ೨೦೧೨ರ ಪ್ರಥಮ ಪ್ರದರ್ಶನಗಳು), ಸಂಗೀತ, ನೃತ್ಯ ಇತ್ಯಾದಿ ಕಾರ್ಯಕ್ರಮಗಳು — ಶಿಬಿರಾರ್ಥಿಗಳು ಮತ್ತು ಸಾರ್ವಜನಿಕರಿಗಾಗಿ ನಡೆಯುತ್ತವೆ.

ಶಿಬಿರಾರ್ಥಿಗಳ ಊಟೋಪಚಾರಗಳಿಗಾಗಿ ನಿಗದಿಪಡಿಸಿದ ಶುಲ್ಕ ರೂ. ೨೦೦೦ (ಶಿಕ್ಷಣ ಸಂಸ್ಥೆಯ ಮುಖ್ಯಸ್ಥರಿಂದ ದೃಢೀಕರಣ ಪತ್ರ ಸಲ್ಲಿಸುವ ವಿದ್ಯಾರ್ಥಿಗಳಿಗೆ ರೂ. ೧೫೦೦).

ಆಸಕ್ತ ಅಭ್ಯರ್ಥಿಗಳು ಕೆಳಗಿನ ವಿಳಾಸಕ್ಕೆ

**೨೦೧೨ ಸೆಪ್ಟೆಂಬರ್ ೨೫ರೊಳಗೆ ಅಭ್ಯರ್ಥಿಪತ್ರ ಕಳಿಸಬೇಕು.**

ನೀನಾಸಮ್ ಸಂಸ್ಕೃತಿ ಶಿಬಿರ, ಹೆಗ್ಗೋಡು, ಸಾಗರ ಕರ್ನಾಟಕ ೫೭೭೪೧೭

ನೀನಾಸಮ್‌ನ ಅಂತರ್ಜಾಲತಾಣ www.ninasam.org ದಲ್ಲಿ

ಅಭ್ಯರ್ಥಿಪತ್ರ ಲಭ್ಯವಿದೆ; ಅಂತರ್ಜಾಲದಲ್ಲೇ ಅರ್ಜಿ ಸಲ್ಲಿಸಲೂ ಅವಕಾಶವಿದೆ.

# ಕುಮಾರವ್ಯಾಸನ ಕೃಷ್ಣ: ಒಂದು ಪ್ರತಿಕ್ರಿಯೆ

ಡಾ। ಯು.ಆರ್. ಅನಂತಮೂರ್ತಿ

*ಹದಿನೇಳು ವರ್ಷಗಳ ಹಿಂದೆ, ೧೯೯೫ರ ನೀನಾಸಮ್ ಸಂಸ್ಕೃತಿ ಶಿಬಿರದಲ್ಲಿ ದಿ। ಕಿ.ರಂ. ನಾಗರಾಜ್ ಅವರು ಕನ್ನಡ ಕಾವ್ಯಲೋಕದ ದೇವ-ದೇವಿಯರ ಕುರಿತು ಒಂದು ಉಪನ್ಯಾಸ ನೀಡಿದ್ದರು. ಆ ಉಪನ್ಯಾಸದ ಬಳಿಕ ಡಾ। ಅನಂತಮೂರ್ತಿಯವರು ಅದಕ್ಕೆ ತಮ್ಮ ಪ್ರತಿಸ್ಪಂದನೆಯಾಗಿ ಆಡಿದ ಮಾತುಗಳು ದಾಖಲೆಯಾಗಿ ನೀನಾಸಮ್ ಕಡತದಲ್ಲಿ ಉಳಿದು ಕೊಂಡಿದ್ದವು. ಅದನ್ನೀಗ ಇಲ್ಲಿ ಬರಹರೂಪಕ್ಕಿಳಿಸಿ ಕೊಡಲಾಗಿದೆ.*

ನಾನಿಲ್ಲಿ ಒಂದೆರಡು ಮಾತು ಹೇಳಬಯಸುತ್ತೇನೆ. ಈ ಮಾತುಗಳು ಇಂದು ಕಿ.ರಂ. ನೀಡಿದ ಪ್ರವಚನದಿಂದಲೇ ಹುಟ್ಟಿದವು. ಬೆಳಿಗ್ಗೆ ಡಿ.ಆರ್. ಮತ್ತು ಕಿ.ರಂ. ಸಿಕ್ಕಾಗ ನನಗೆ ಥಟ್ಟನೆ ಬೇಂದ್ರೆಯವರ ಒಂದು ಕವಿತೆ ನೆನಪಾಯಿತು. ಆ ಕವಿತೆಯ ಹೆಸರು 'ಕನಸಿನೊಳಗೊಂದು ಕಣಸು' ಅಂತ. ಆ ಕವಿತೆಯಲ್ಲಿ ಏನಾಗತ್ತೆ ಅಂದರೆ — ಒಂದು ಕನಸು ಅದು. ಬೇಂದ್ರೆ ಹೋಗತಾ ಇದ್ದಾರೆ. ಎದುರುಗಡೆ ಒಬ್ಬಳು ಹೆಂಗಸು ಕಾಣಿಸುತ್ತಾಳೆ. ಕವಿ ಸಾಮಾನ್ಯವಾಗಿ ಕೇಳುವಂತೆ ಸಹಜವಾಗಿ ಕೇಳತಾರೆ: 'ಯಾರು ನಿಂದವರಲ್ಲಿ ತಾಯೆ ಎಂದೆ'. ಅವಳೂ ಸಹಜವಾಗಿಯೇ ಮೊದಲೊಂದು ಉತ್ತರ ಕೊಡುತ್ತಾಳೆ. ಆದರೆ ಅವಳ ಉತ್ತರದಲ್ಲಿ ಏನೋ ಒಂಚೂರು ಕೊಂಕು ಇರುತ್ತೆ. ಇವರಿಗೆ ಕುತೂಹಲ ಹೆಚ್ಚಾಗತ್ತೆ. ಯಾರು ಅಂತ ಅವಳನ್ನ ಬೆದಕುತ್ತಾ ಪ್ರಶ್ನಿಸುತ್ತಾ ಹೋದಹಾಗೆ ಅವಳು — ಸಹಜವಾಗಿ ಕಾಣತಾ ಇದ್ದವಳು — ಕವಿಯ ಮನಸ್ಸಿನಲ್ಲಿ ಬೆಳೀತಾ ಹೋಗತಾಳೆ. ಬೆಳೀತಾ ಬೆಳೀತಾ ಅವಳು ಇನ್ಯಾರೂ ಅಲ್ಲ, ಕರ್ನಾಟಕದ ದೇವಿ, ಕನ್ನಡಮಾತೆ, ನಾಡದೇವಿ ಅಂತ ಹೊಳಿಯುತ್ತೆ. ಕರ್ನಾಟಕದ ದೇವಿ ಇರಬಹುದು ಎಂದು ಕವಿಯ ಮನಸ್ಸಿನಲ್ಲಿ ಬೆಳೆಬೆಳೆದ ಹಾಗೆ ಅವಳೂ ಬೆಳೆಯುತ್ತಾ ಹೋಗುತ್ತಾಳೆ. ಕೇಳುವವನ ಮನಸ್ಸು ಬೆಳೆದ ಹಾಗೆ ಅವಳು ಬೆಳೆಯೋದು. ಕಾಗ್ನಿಶನ್

ಇದೆಯಲ್ಲ, ಅವನ ಅರಿಯುವಿಕೆಯ ಬೆಳವಣಿಗೆಯಲ್ಲಿ ಅವಳು ಬೆಳೀತಾಳೆ. ಹೀಗೆ ಬೆಳೀತಾ ಹೋದಾಗ ಇವನನ್ನ ಸರ್ವತ್ಯಾಗಕ್ಕೂ ಕೇಳುವ ಉತ್ತೇಜಿಸುವ ಸ್ಥಿತಿಯನ್ನು ಅವಳು ಮುಟ್ಟುತಾಳೆ. ಮೊದಲು ಅವಳನ್ನ ಕಂಡಾಗ 'ಯಾರು ನಿಂದವರಲ್ಲಿ ತಾಯೆ ?' ಅಂದರೆ, 'ಏನವ್ವಾ' 'ಯಾರವ್ವಾ ನೀನು ?' ಎಂಬಂತೆ ಕೇಳಿದವನು, ಈಗ ಗಾಬರಿಯಿಂದ ಹಿಂಜರಿಕೆಯಿಂದ ಕೇಳಬೇಕಾಗತ್ತೆ. 'ಇಲ್ಲೆನ್ನಲಾರೆ ನಾನಹುದೆನ್ನಲಮ್ಮೆ' ಅಂತಂದವನು ಕೊನೆಗೆ ಧೈರ್ಯಮಾಡಿ, 'ಚಂಡಿ ಚಾಮುಂಡಿ ಪೇಳ್ ಬೇಕಾದುದೇನು ?' ಎಂದು ಕೇಳತಾನೆ. ಅವಳು ತನಗಾಗಿ 'ಗಂಡುಸಾದರೆ ನಿನ್ನ ಬಲಿ ಕೊಡುವೆಯೇನು ?' ಅಂತ ಕೇಳತಾಳೆ. ಅದೊಂದು ಅದ್ಭುತವಾದ ಪದ್ಯ. ಅದು ಅರಿಯುವಿಕೆಯ ಬಗ್ಗೇನೆ ಇರುವ ಪದ್ಯ. ಅವಳ ಬೆಳವಣಿಗೆ ಮತ್ತು ಇವನ ಮನಸ್ಸಿನ ಬೆಳವಣಿಗೆ – ಇದು ತಾತ್ವಿಕವಾಗಿ ತುಂಬಾ ಆಸಕ್ತಿ ಹುಟ್ಟಿಸುವಂಥದ್ದು.

ಹಿಂದೊಮ್ಮೆ ನಾನು ಈ ಪದ್ಯದ ಜೊತೆಗೆ ಬಿ.ಎಂ.ಶ್ರೀಯವರ 'ಕನ್ನಡ ತಾಯ ನೋಟ' ಎಂಬ ಪದ್ಯವನ್ನ ಇಟ್ಟು ಹೋಲಿಸಿದ್ದೆ. ಅದರಲ್ಲಿ ಕನ್ನಡ ತಾಯಿಯ ಬಗ್ಗೆ ಹೇಳತಾ ಅವರು – ತೆಲುಗಿನವರು ಮುಂದುವರೀತಾ ಇದ್ದಾರೆ, ತಮಿಳಿನವರು ಮತ್ತು ಮರಾಠಿಯವರು ಮುಂದುವರೀತಾ ಇದ್ದಾರೆ, ಅವ್ವಾ ನೀನು ಯಾತಕ್ಕೆ ಮುಂದುವರಿದಿಲ್ಲ – ಅಂತ ಕೇಳುವ ಪದ್ಯವದು. ಅದು ಬರೀ ಕರ್ನಾಟಕದ ಮಟ್ಟಿಗೆ ಆಗುವಂತಹ ಪದ್ಯ. ಆದರೆ ಬೇಂದ್ರೆಯವರ ಈ ಕವಿತೆ ಮಾತ್ರ ಐರ್ಲೆಂಡಿನವರು ಐರಿಷ್ ತನ್ನತನಕ್ಕಾಗಿ ಹೋರಾಡೋದಕ್ಕೂ ಅಥವಾ ಇನ್ನಾವುದೇ ಭಾಷೆಯವರು ತಮ್ಮ ಅಸ್ತಿತ್ವಕ್ಕಾಗಿ ಹೋರಾಡೋದಕ್ಕೂ ಬಳಸಬಹುದಾದ ಕವಿತೆ ಇದು. ಬರಿಯ ಕನ್ನಡ ತಾಯಿಯ ಬಗೆಗಿನ ಪದ್ಯ ಅಲ್ಲ. ಯಾಕೆಂದರೆ, ಇದು ಅರಿವಿನ ಏಳಿಕೆಯನ್ನೇ ಕುರಿತ ಕವಿತೆಯಾದ್ದರಿಂದ ಅದು ಐರಿಷ್ ಜನರಿಗೂ ಆಗಬಹುದು, ಹಂಗೇರಿಯನ್ನರಿಗೂ ಆಗಬಹುದು, ಪ್ಯಾಲಿಸ್ತೇನಿಯನ್ನರಿಗೂ ಆಗಬಹುದು. ತನ್ನತನದ ಹುಡುಕಾಟದಲ್ಲಿ ಮಗ್ನರಾಗಿರುವ ಯಾರಿಗೆ ಬೇಕಾದರೂ ಅನ್ವಯಿಸಬಹುದು. ಹೀಗೆ ಯಾರು ಬೇಕಾದರೂ ತಮ್ಮದನ್ನಾಗಿ ಬಳಸಬಹುದಾದ ಒಂದು ವಿಶೇಷ ಕವಿತೆ ಬೇಂದ್ರೆಯವರದು.

ಇದರಲ್ಲಿ ಒಂದು ಸಮಸ್ಯೆ ಇದೆ. ಅದು ಎಲ್ಲಾ ಕಾಲದಲ್ಲೂ ಮನುಷ್ಯನನ್ನ ಬಾಧಿಸಿರೋವಂಥ ಸಮಸ್ಯೆ. ನಮ್ಮ ನಡುವೆ ಒಬ್ಬ ದೇವರು ಇದ್ದಾನೆಯೆ ? ಒಬ್ಬ ದೇವರೇ ಇದ್ದಾನೆಯೆ ? ಅವನು ದೇವರು ಹೌದೋ ಅಲ್ಲವೋ ? ಅನ್ನುವಂತಹ ಒಂದು ಪ್ರಶ್ನೆ ಇರತ್ತೆ ಅನ್ನೋದರಿಂದಲೇ ಪುರಾಣಗಳು ಹುಟ್ಟಿರೋದು. ಕುಮಾರವ್ಯಾಸನ ಭಾರತದಲ್ಲಿ, ಇವತ್ತು ಇವರು ಓದತಾ ಇದ್ದ ಹಾಗೇ, ನೋಡಿ – ಕೃಷ್ಣ ಗೊಲ್ಲ.



ಕಪ್ಪಾಗಿದ್ದಾನೆ. ಮೀಸೆ ಬಿಟ್ಟಿದ್ದಾನೆ. ಅವನು ಹುಡುಗನಾಗಿದ್ದಾಗ ತನ್ನ ಮನೆಯಲ್ಲೇ ಇರಲಿಕ್ಕಾಗಲಿಲ್ಲ, ಇನ್ಯಾರದೋ ಮನೆಯಲ್ಲಿ ಬೆಳೆಯಬೇಕಾಗಿ ಬಂತು. ಅಲ್ಲಿ ದನಗಳನ್ನು ಕಾದುಕೊಂಡು ಇರಬೇಕಾಗಿ ಬಂತು. ಅಲ್ಲಿ ಕೆಲವು ಅದ್ಭುತಗಳನ್ನೆಲ್ಲ ಮಾಡಿದ್ದಾನೆ. ಹಾಗೆ ಮಾಡಿದ್ದಾನೆ ಅಂತ ನಾವು ಕೇಳಿದ್ದೀವಿ. ಆದರೂ ಅವನು ದೇವರು ಹೌದೋ ಅಲ್ಲವೋ ಅನ್ನುವಂತಹ ಸಮಸ್ಯೆ ಇದ್ದೇ ಇದೆ. ಅಷ್ಟೇ ಅಲ್ಲ, ಅವನು ದೇವರು ಅಂತ ಗೊತ್ತಾದ ಮೇಲೆ ಕೂಡ ಅವನು ಹೇಳಿದ ಹಾಗೆ ನಡೆದುಕೊಳ್ಳಬೇಕೋ ಬೇಡವೋ ಅನ್ನುವುದೂ ಸಮಸ್ಯೆಯಾಗಿ ಉಳೀತದೆ. ದುರ್ಯೋಧನನಿಗೆ ಅವನ ಮನಸ್ಸಿನಲ್ಲಿಯೇ ಅನ್ನಿಸತ್ತೆ – 'ಇವನು ನನ್ನ ಮನಸ್ಸಿನಲ್ಲೇ ನಿಂತು ಸಂಧಿಯನ್ನು ಮುರಿಯುವ ಹಾಗೆ ಮಾಡುತಿದ್ದಾನಲ್ಲ!' – ಅಂತ. ಅಲ್ಲಿ ಇನ್ನೊಂದು ಸಂಗತೀನೂ ಬರತ್ತೆ ಅಂತ ಕಾಣತ್ತೆ. ಅವನು ಸಂಧಿಗೆ ಅಂತಲೇ ಹೊರಟ ಹಾಗೆ ಹೊರಟಿದ್ದಾನೆ. ಸಂಧಿ ಮಾಡೋ ಬಗ್ಗೆ ಬಹಳ ಸಿನ್ಸಿಯರ್, ಬಹಳ ಪ್ರಾಮಾಣಿಕ ಇರೋ ಹಾಗೆ ಕಾಣತಾನವನು. ಹಾಗೆಯೆ ಅತ್ತ ದ್ರೌಪದಿಗೆ, 'ನಾನು ನಿನ್ನ ಹಿತವನ್ನೂ ನೋಡಿಕೋತೀನಿ' ಅಂತ ಮಾತು ಬೇರೆ ಕೊಟ್ಟಿರತಾನೆ. ಅವನು ಕಳ್ಳನೂ ಕೂಡ! ಖದೀಮನೂ! ಅಲ್ಲವೆ ?

ನಿಜವಾಗಿಯೂ ನಮ್ಮ ದೇಶ, ನಮ್ಮ ಗ್ರಹಿಕೆ, ಭಾರತದ ಗ್ರಹಿಕೆ ಬಹಳ ದೊಡ್ಡ ಸಮಸ್ಯೆಯನ್ನ ಎದುರಿಸಿರೋದು ಕೃಷ್ಣನಲ್ಲಿಯೆ. ಯಾಕೆಂದರೆ, ಅವನು ಕಳ್ಳ, ಖದೀಮ! ದುರ್ಯೋಧನನ ಪರವಾಗಿಯೂ ಬೇಕಾದಷ್ಟು ವಾದ ಇದೆಯಲ್ಲ. ಯಾಕೆಂದರೆ, ಪಾಂಡವರು ಕೌಂತೇಯರು. ನಿಜವಾಗಿಯೂ ನಾವು ಆಗಿನ ಕಾಲದ ಕ್ರಮಗಳನ್ನ, ಶಾಸ್ತ್ರಗಳನ್ನ ಎಲ್ಲ ನೋಡಿದರೆ – ಅವರು ತಂದೆಗೆ ಹುಟ್ಟಿದ ಮಕ್ಕಳಲ್ಲ, ತಂದೆಗೆ ಹುಟ್ಟಿದ ಮಕ್ಕಳಲ್ಲದಿರೋದರಿಂದಲೇ ಅವರಿಗೆ ರಾಜ್ಯಭಾರದ ಹಕ್ಕು ಸಿಗಬಾರದು ಅನ್ನೋದಕ್ಕೆ ಅವರ ಕಾಲದ ಸ್ಮೃತಿ-ಶಾಸ್ತ್ರ-ಸಂವಿಧಾನಗಳಲ್ಲಿ ಏನಾದರೂ ಕಾನೂನು ಇದ್ದಿರಬಹುದು. ಸರಿ, ಕೋರ್ಟಿಗೆ ಹೋಗಿದ್ದರೆ, ಸುಪ್ರೀಂ ಕೋರ್ಟಿನಲ್ಲಿ ಪಾಂಡವರು ಖಂಡಿತಾ ಸೋಲುತಿದ್ದರು – ಅವರು ತಂದೆಯ ಮಕ್ಕಳಲ್ಲ, ಕೇವಲ ಕೌಂತೇಯರು ಅನ್ನುವ ಕಾರಣಕ್ಕಾಗಿ. ಅವರನ್ನು ಹಂಗಿಸುವಾಗಲೆಲ್ಲ ಕೌರವ ಅವರನ್ನು 'ಕೌಂತೇಯರು' ಅಂತಲೇ ಹೇಳತಾನೆ. (ಧೃತರಾಷ್ಟ್ರ ಕೂಡ ಹಾಗೆಯೆ ಅಲ್ಲವಾ ಅಂತಂದರೆ, ಅದು ಕೋರ್ಟಿನಲ್ಲಿ ಇನ್ನೊಬ್ಬರು ಮಾಡುವ ವಾದವಾಗುತ್ತದೆ.) ಅಂದರೆ ಇಲ್ಲಿನ ವಾದ, ಇಲ್ಲಿನ ಪ್ರಶ್ನೆ ಏನಂದರೆ, ಇಲ್ಲಿ ಎಲ್ಲವೂ ಸಮಸ್ಯಾತ್ಮಕವೇ ಅನ್ನುವುದು. ಪ್ರತಿಯೊಂದು ಸಂಗತಿಯನ್ನೂ ಸಮಸ್ಯಾತ್ಮಕಗೊಳಿಸಲಾಗಿದೆ. ನಾವು ಅದನ್ನ ಸಮಸ್ಯಾತ್ಮಕ, ಪ್ರೋಬ್ಲೆಮಟೈಸ್ಡ್ ಅಂತ ಈಗ ಇತ್ತೀಚೆಗೆ ಹೇಳತೊಡಗಿದ್ದೇವೆ. ಪ್ರತಿಯೊಂದೂ

ಸಮಸ್ಯಾತ್ಮಕ. ರಾಜತ್ವವೂ ಸಮಸ್ಯಾತ್ಮಕ. ರಾಜ್ಯ ಯಾರಿಗೆ ಸೇರಬೇಕು ಅನ್ನುವುದೂ ಸಮಸ್ಯಾತ್ಮಕ. ಇವನು ಈ ಕೃಷ್ಣ ಇಷ್ಟೆಲ್ಲ ಮಾಡಿದರೂ – 'ಮುರಾರಿ' ಅಂತ ಕರೆಸಿಕೊಳ್ಳತಾನೆ, ಗೋವರ್ಧನಗಿರಿಯನ್ನ ಎತ್ತತಾನೆ, ಎಲ್ಲ ಸರಿ; ಏನು ಮಾಡಿದರೂ – ಇವನು 'ದೇವರು' ಅನ್ನೋದು ಸಮಸ್ಯಾತ್ಮಕ. ದೇವರು ಹೌದು ಅಂತ ಗೊತ್ತಾದ ಮೇಲೆ ಕೂಡ ಅವನು ಹೇಳಿದ ಹಾಗೆ ತಾನು ನಡೀಬೇಕು ಅಂತನ್ನೋದು ಸಮಸ್ಯಾತ್ಮಕ. ಯಾಕೆಂದರೆ, ಈ ಪ್ರಪಂಚ ಹೀಗೆಯೇ ನಡೀಬೇಕು ಅನ್ನೋದಾದರೆ ದುರ್ಯೋಧನ ನಂಥವರೂ ನಡೀಬೇಕು, ಪಾಂಡವರಂಥವರೂ ನಡೀಬೇಕು. ಎಲ್ಲರೂ ನಡೀಬೇಕಲ್ಲಪ್ಪಾ! ಅದೂ ಕೂಡ ಸಮಸ್ಯಾತ್ಮಕ. ಹೀಗೆ ಇಲ್ಲಿ ಪ್ರತಿಯೊಂದೂ ಸಮಸ್ಯಾತ್ಮಕ.

ನಾವು ಒಬ್ಬ ದೇವರನ್ನ 'ದೇವರು' ಅಂತ ಹೇಗೆ ಗುರುತಿಸತೇವೆ? ಹೇಗೆ ರೆಕಗ್ನೈಸ್ ಮಾಡತೇವೆ? ಇದು ಸಮಸ್ಯಾತ್ಮಕ ಅಲ್ಲ ಅಂದರೆ, ಅಲ್ಲಿಯೂ ಅದೇ. ಇಸ್ಲಾಂನಲ್ಲಿಯೂ ಇದು ಸಮಸ್ಯಾತ್ಮಕವೇ. ಯಾಕೆಂದರೆ, ಮಹಮ್ಮದನಿಗೆ ಎಲ್ಲರನ್ನೂ ಸೋಲಿಸಿ ಒಂದು ದೇವರನ್ನ ಸ್ಥಾಪಿಸಬೇಕು ಅನ್ನುವ ಹಠ. ಅವನು ಮಹಾ ದೊಡ್ಡ ಸಂತ, ಪ್ರವಾದಿ. ಒಬ್ಬ ದೇವರು ಅನ್ನೋ ಒಂದು ಕಲ್ಪನೆಯನ್ನ ಇಡೀ ಜಗತ್ತಿನಲ್ಲಿ ಸ್ಥಾಪಿಸಬೇಕು ಅಂತ ಹೊರಟವನು. ಆದರೆ ಅವನು ಕೆಲವು ಸಲ ಸೋಲಬೇಕಾಗತದೆ. ಆವಾಗ, ಮೂರು ದೇವತೆಗಳನ್ನ – 'ಇವರೂ ನನ್ನ ದೇವರ ಕಡೆಗೇ ಒಯ್ಯುವ ವಾಹಕಗಳು ಅಂತ ಒಪ್ಪಿಕೊಳ್ಳಬಹುದು' – ಅಂತ ಕೊರಾನಿನಲ್ಲಿ ಬರೆದುಬಿಡತಾನೆ. ನಂತರ ಅವನಿಗೆ – ನಾನು ಹಾಗೆ ಬರೆದದ್ದೇ ತಪ್ಪು, ನನ್ನ ಹತ್ತಿರ ನುರಿತವನು ದೇವರಲ್ಲ, ದೆವ್ವ, ಸೇಟನ್ – ಅಂತ ಅನ್ನಿಸತ್ತೆ. ಅಂದರೆ, ದೇವರೇ ಬಂದು ನಿಮ್ಮ ಹತ್ತಿರ ಮಾತನಾಡಿದಾಗಲೂ ಹಾಗೆ ಬಂದು ಮಾತಾಡಿದವನು ದೇವರೋ ಅಥವಾ ದೆವ್ವವೋ ಅನ್ನೋ ಸಮಸ್ಯೆ ಇರುತ್ತೆ. ಈ ಮನುಷ್ಯ ಲೋಕದಲ್ಲಿ ಯಾವುದೂ ಸರ್ವಥಾ ಮೊದಲೇ ಸಿದ್ಧವಾದುದಲ್ಲ.

ಮಹಮ್ಮದನಿಗೆ ಅಂತಹ ಸಮಸ್ಯೆಗಳಿದ್ದಾವೆ. ಅದಕ್ಕೇ ಅವನ ಕಥೆ, ಕೊರಾನಿನ ಕಥೆ ದೊಡ್ಡ ಕಥೆ. ಅವನಿಗೆ ಹೆಜ್ಜೆಹೆಜ್ಜೆಗೆ ಮತ್ತೆ ಮತ್ತೆ ಆ ಸಮಸ್ಯೆ ಎದುರಾಗತ್ತೆ – ದೇವರು ಮಾತಾಡಿದ್ದೋ ಅಥವಾ ದೆವ್ವ ಮಾತಾಡಿದ್ದೋ ಅಂತ. ನೀವು ಕೇಳಿರಬಹುದು – 'ಏಂಜಲ್ಸ್, ಅಂದರೆ ದೇವದೂತರು ಬಂದು ನನ್ನಿಂದ ಪದ್ಯಗಳನ್ನ ಬರೆಸತಾರೆ, ಆಮೇಲೆ ಅದನ್ನ ಸ್ವಲ್ಪ ತಿದ್ದತಾ ಇದ್ದರು' – ಅಂತ ಬ್ಲೇಕ್ ಹೇಳತಿದ್ದ. ದೇವದೂತರು ಬಂದು ತನ್ನ ಪದ್ಯಗಳನ್ನ ಬರೆದು ತಿದ್ದತಾ ಇದ್ದರು ಅಂತ ಅವನಿಗೆ ಅನ್ನಿಸಿತ್ತು. ಮನುಷ್ಯನಾಗಿ ಹುಟ್ಟಿದವನಿಗೆ ಯಾವಾಗಲೂ ಅವನ ಕ್ರಿಯೆಗಿಂತ ಮುಂಚೆ



ಈ ಸಮಸ್ಯೆ ಇರತ್ತೆ. ಹಾಗೆಯೆ ಮಹಮ್ಮದನಿಗೆ ಸಮಸ್ಯೆ ಇತ್ತು. ಆದರೆ, ದೇವರು ಈ ಪ್ರಪಂಚಕ್ಕೆ ಹೊರತಾಗಿ ಇರುವವನು – ಅಂದರೆ ಅವನು ಟ್ರಾನ್ಸೆಂಡೆಂಟರಿ – ಅಂತ ತಿಳಿದುಕೊಂಡಿರುವ ಧರ್ಮಗಳಿದ್ದಾವಲ್ಲ – ಕ್ರಿಸ್ತಧರ್ಮದ ಹಾಗೆ – ಅವರಿಗೆ ಈ ಪ್ರಪಂಚ ದೇವರಲ್ಲ. ಕ್ರಿಶ್ಚಿಯನರಿಗೆ ಕಾಣುವ ಈ ಪ್ರಪಂಚ ದೇವರಲ್ಲ; ಅವನು ಅದರಾಚೆಯವನು. ವರ್ಡ್ಸ್‌ವರ್ತ್‌ನಿಗೆ ಅದೊಂದು ದೊಡ್ಡ ಸಮಸ್ಯೆಯಾಗಿಬಿಡತದೆ. ಅವನು, ತನ್ನೆಲ್ಲ ತಿಳುವಳಿಕೆ ವಿವೇಕ ವಿಸ್ಮಯಗಳನ್ನು ತನ್ನೆಲ್ಲ ಗುಣಗಳನ್ನು ಈ ಪ್ರಕೃತಿಯಿಂದಲೇ ಪಡೆದುಕೊಂಡೆ; ಆಕೆಯೇ ದೇವರು; ಆಕೆಯೇ 'ತಾಯಿ' ಅನ್ನುತ್ತಿದ್ದವನು, ವಯಸ್ಸಾದ ನಂತರ, ಕ್ರಿಶ್ಚಿಯನ್ ಧರ್ಮಕ್ಕೆ ಹೆಚ್ಚೆಚ್ಚು ಹತ್ತಿರವಾದ ನಂತರ, ಆಕೆಯನ್ನು 'ಸಾಕುತಾಯಿ' ಅನ್ನತೊಡಗಿದ. ಮೊದಲು ತಾಯಿಯಾಗಿದ್ದ ಪ್ರಕೃತಿ ಬರುಬರುತ್ತ ಸಾಕುತಾಯಿ ಯಾದಳು. ಈಗ ನಿಸರ್ಗ ಆ ದೇವರ ಸೃಷ್ಟಿ ಅಷ್ಟೇ. ಯಾಕಂದರೆ, ಕ್ರಿಶ್ಚಿಯನ್ ಧರ್ಮಕ್ಕೆ ಅನ್ವಯಿಸಿ ಹೇಳುವಾಗ ದೇವರು ಈ ಪ್ರಪಂಚದಲ್ಲಿಯೇ ಇಲ್ಲ; ಪ್ರಪಂಚಕ್ಕೆ ಹೊರತಾಗಿ ಇದ್ದಾನೆ. ದೇವರ ಕುರಿತು ಹೇಳುವಾಗ ಎರಡು ತರಹ ಇದೆ: ಟ್ರಾನ್ಸೆಂಡೆಂಟ್, ಅತೀತ ಅಂತ ಒಂದು ಮತ್ತು ಎಮೆನೆಂಟ್, ಅಂತರ್ಗತ ಅಂತ ಇನ್ನೊಂದು. ಅತೀತವಾಗಿರು ವಂತೆಯೆ ಅದು ಇಲ್ಲಿ ಅಂತರ್ಗತವಾಗಿಯೂ ಇದೆಯೆಂಬ ನಂಬಿಕೆ.

ಭಾರತೀಯ ಮನಸ್ಸು ಈ ಪ್ರಪಂಚವೆಲ್ಲ ದೇವರ ಲೀಲೆ, ಅದು ಈ ಪ್ರಪಂಚದಲ್ಲಿ ಅಂತರ್ಗತವಾಗಿದೆ ಅಂತ ತಿಳಿಯುವುದರಿಂದ ಈ ಮೂರ್ತಿಗಳೆಲ್ಲ ಹುಟ್ಟುವುದು ಸಾಧ್ಯವಾಯಿತು. ಇಲ್ಲವಾದರೆ ಇಷ್ಟೊಂದು ದೇವರುಗಳು ಇಷ್ಟೊಂದು ಮೂರ್ತಿಗಳು ಇರಲು ಸಾಧ್ಯವಾಗುತ್ತಿರಲಿಲ್ಲ. ದೇವರು ಈ ಪ್ರಪಂಚದಲ್ಲಿಯೇ ಇರೋದು ಸಾಧ್ಯ ಅಂತ ತಿಳಿಯುವುದರಿಂದಲೇ ಕೃಷ್ಣನು ದೇವರೇ ಇರಬಹುದೋ ಅಲ್ಲವೋ ಅಂತನ್ನುವ ಪ್ರಶ್ನೆ ಹುಟ್ಟೋದು ಸಾಧ್ಯವಾಗತದೆ.

ರಾಮನಲ್ಲಿಯೂ ಈ ಸಮಸ್ಯೆ ಬರುತ್ತದೆ. ಆ ಕುರಿತು ನನ್ನ ಸ್ನೇಹಿತರೊಬ್ಬರು ದೊಡ್ಡ ವ್ಯಾಖ್ಯಾನ ಮಾಡಿದ್ದಾರೆ. ರಾಮ ಮನುಷ್ಯ ಅಂತ ಒಂದು ಕಲ್ಪನೆ ಇದೆ. ಮನುಷ್ಯ ಹೌದು ಆದರೂ ಅವನು ದೇವರು ಅಂತ ವಾಲ್ಮೀಕಿ, ತುಲಸೀದಾಸ ಎಲ್ಲ ಹೇಳತಾರೆ. ಆದರೆ ಅಲ್ಲಿಯೇ ಅವನನ್ನ ದೇವರಂತ ಒಪ್ಪಿಕೊಳ್ಳೋದಕ್ಕೆ ಕೆಲವು ಸಮಸ್ಯೆಗಳು ಎದುರಾಗತಾವೆ. ಅವನು ಮರದ ಮರೆಯಲ್ಲಿ ನಿಂತು ವಾಲಿಯನ್ನು ಕೊಲ್ಲತಾನೆ, ಸೀತೆಯ ಬಗ್ಗೆ ಅವಳು ಪವಿತ್ರಳೋ ಅಲ್ಲವೋ ಅಂತ ಅನುಮಾನಪಟ್ಟು ಬೆಂಕಿಯ ಮೇಲೆ ನಡೆಸತಾನೆ, ಆಮೇಲೆ – ಇದನ್ನ ಪ್ರಕ್ಷಿಪ್ತ ಅಂತಲೂ ಹೇಳತಾರೆ – ಸೀತೆಯನ್ನ ಮತ್ತೆ ವನವಾಸಕ್ಕೆ ಕಳಿಸತಾನೆ, ಇತ್ಯಾದಿ. ಹಾಗಾದರೆ ಅವನು ಹೇಗೆ ದೇವರು? ಶಾಸ್ತ್ರದ

ಪ್ರಕಾರ ಅವನು ದೇವರು ಆಗಿರಲೇಬೇಕು. ಯಾಕೆಂದರೆ, ರಾಕ್ಷಸರ ಸಂಹಾರ ಆಗಬೇಕಲ್ಲ -- ರಾಕ್ಷಸನಾದ ರಾವಣ ದೇವತೆಗಳಾಗಲೀ ಯಕ್ಷ ರಾಕ್ಷಸ ಗಂಧರ್ವರಾಗಲೀ ಯಾರೂ ತನ್ನನ್ನ ಕೊಲ್ಲೋಹಾಗಿಲ್ಲ ಅಂತ ವರ ತಗೊಂಡು ಬಿಟ್ಟಿದ್ದಾನೆ. ಮನುಷ್ಯ ತನ್ನನ್ನ ಕೊಲ್ಲೋಹಾಗಿಲ್ಲ ಅಂತ ಅವನು ಕೇಳಿರಲಿಲ್ಲ – ಮನುಷ್ಯ ತನ್ನನ್ನ ಏನು ಮಾಡಿಯಾನು, ಹೇಗೆ ಕೊಲ್ಲತಾನೆ ಅಂತ ಅಂದುಕೊಂಡಿದ್ದ. ಹಾಗಾಗಿ ದೇವರು ಮನುಷ್ಯನಾಗಿ ಹುಟ್ಟಿದ ಅಂತ ಒಬ್ಬ ಅಮೆರಿಕನ್ ಶಾಸ್ತ್ರಿಗಳು ಈ ವಾದ ಮಂಡಿಸಿದ್ದಾರೆ. ಅಲ್ಲೂ ಇದು ಸಮಸ್ಯಾತ್ಮಕವೇ – ಅವನನ್ನ ದೇವರು ಅನ್ನಬೇಕೋ ಮನುಷ್ಯ ಅನ್ನಬೇಕೋ ? ಆದ್ದರಿಂದ ಒಬ್ಬ ದೇವರು ಹೌದೋ ಅಲ್ಲವೋ ಅನ್ನೋದು ಯಾವಾಗಲೂ ಸಮಸ್ಯಾತ್ಮಕ.

ಸಮಸ್ಯಾತ್ಮಕವಾದ ಈ ಪ್ರಶ್ನೆ ಇರೋದರಿಂದಲೇ ಈ ಕೃಷ್ಣ, ಅದರಲ್ಲೂ ನಮ್ಮ ಕತೆಗಳ ಕೃಷ್ಣ ಹೇಗಿದ್ದಾನೆ ನೋಡಿ – ಅವನಿಗೆ ಹೆಂಗಸರು ಬಹಳ ಇಷ್ಟ, ಸಾವಿರಾರು ಮಂದಿ ಗೋಪಿಕೆಯರ ಜೊತೆ ಇದ್ದಾನೆ – ಹಾಗಾದರೆ ಅವನು ದೇವರು ಹೇಗಾಗತಾನೆ ? ಅವನು ಇಷ್ಟು ವಿಪರೀತ ವ್ಯಾಮೋಹಿ ಅಂತ ಕಾಣತಾನೆ. ಇಷ್ಟು ವ್ಯಾಮೋಹಿ ಆಗಿರೋವನು ದೇವರಾಗಲಿಕ್ಕೆ ಸಾಧ್ಯವೆ ? ಇಷ್ಟು ಉಪಾಯಗಾರ ಆಗಿರೋವನು ದೇವರಾಗಲಿಕ್ಕೆ ಸಾಧ್ಯವೆ ? ಆದರೂ ಎಲ್ಲರಿಗೂ ದೇವರು ಅಂತಲೇ ಕಾಣಿಸತಾನಲ್ಲ. ನಮ್ಮ ಜೊತೆಗೆ ಮನುಷ್ಯನಾಗಿಯೇ ಇದ್ದರೂ ದೇವರು ಅಂತಲೂ ಅನ್ನಿಸತಾನಲ್ಲ. ಅರ್ಜುನ ಅವನನ್ನ ಸಖ ಅಂತಲೂ ತಿಳಿದಿರತಾನೆ, ದೇವರು ಅಂತಲೂ ತಿಳಿದಿರತಾನೆ. ಎಂಥಾ ಸಮಸ್ಯೆ ನೋಡಿ. ಭಗವದ್ಗೀತೆಯಲ್ಲಿ ಅವನಿಗೆ ತರ್ಕ ವಾದ ಎಲ್ಲ ಹೂಡಿ ತೋರಿಸತಾನೆ, ಯಾಕೆ ನೀನು ಯುದ್ಧ ಮಾಡೋದು ಅನಿವಾರ್ಯ ಅಂತ ಹೇಳತಾನೆ. ಯುದ್ಧ ಅನ್ನೋದನ್ನ ತರ್ಕದ ಮುಖಾಂತರವೇ ಹೇಳತಾನೆ. ಅರ್ಜುನ ಒಬ್ಬ ರಾಶನಲಿಸ್ಟ್ ಆಗಿದ್ದರೆ ಇದರಿಂದ ಕನ್ವಿನ್ಸ್ ಆಗಿರಬೇಕಿತ್ತು. ಅವನೂ ಒಂಥರಾ ರಾಶನಲಿಸ್ಟೇ, ಕನ್ವಿನ್ಸ್ ಆಗಿರಬೇಕು. ಆದರೂ ಆಗಿರೋದಿಲ್ಲ! ಅವನ ಮನಸ್ಸು ಒಪ್ಪಿರೋದಿಲ್ಲ. ಆಗ ಕೃಷ್ಣ ವಿಶ್ವರೂಪದರ್ಶನ ಮಾಡಿಸತಾನೆ. ಅಂದರೆ ಅವನನ್ನ ಬೆಚ್ಚಿಸಿಬಿಡತಾನೆ – 'ನೋಡು, ನಾನು ಯಾರು !' ಎಲ್ಲ ನೋಡಿದ ನಂತರ ಅರ್ಜುನ, 'ಇಂಥಾದ್ದನ್ನೆಲ್ಲ ನನಗೆ ನೋಡೋಕೆ ಸಾಧ್ಯವಿಲ್ಲಪ್ಪ, ನಿನ್ನ ಆ ಸೌಮ್ಯ ರೂಪವನ್ನೇ ತೋರಿಸು' ಅಂತಾನೆ. ಅಷ್ಟಕ್ಕಾದರೂ ಕನ್ವಿನ್ಸ್ ಆಗಿರಬೇಕಾ ? ಆದರೆ, 'ಯಥೇಚ್ಛಸಿ ತಥಾ ಕುರು' – ನಿನಗೆ ಹೇಗೆ ಇಚ್ಛೆ ಬರತದೋ ಹಾಗೆ ಮಾಡು – ಅನ್ನತಾನೆ. ಅಂದರೆ ಇಷ್ಟೆಲ್ಲ ಆದಮೇಲೆ ಕೂಡ ನಾನು ಏನು ಮಾಡಬೇಕು ಅನ್ನೋದು ಸಮಸ್ಯಾತ್ಮಕವೇ.



ಇದು ಕೃಷ್ಣನ ಕಥೆಯಲ್ಲಂತೂ ಅದ್ಭುತವಾದ ರೀತಿಯಲ್ಲಿದೆ. ಆದ್ದರಿಂದ ಅವನನ್ನ ದೇವರು ಅಂತ ಒಪ್ಪಿಕೊಳ್ಳುವುದೂ ಸಮಸ್ಯಾತ್ಮಕ, ಒಪ್ಪಿಕೊಂಡ ಮೇಲೆ ಅವನು ಹೇಳಿದಂತೆಯೆ ನಡೆಯಬೇಕು ಅನ್ನುವುದೂ ಸಮಸ್ಯಾತ್ಮಕ. ಒಂದು ಕ್ಷಣದಲ್ಲಿ ಅವನನ್ನ ದೇವರು ಅಂತ ಒಪ್ಪಿಕೊಂಡರೂ ಇನ್ನೊಂದು ಕ್ಷಣದಲ್ಲಿ ಅವನು ದೇವರಂತ ಅನ್ನಿಸದೆ ಇರಬಹುದಾದ ಸಮಸ್ಯೆ. ಇವಿಷ್ಟೂ ಬಗೆಯ ಬಿಕ್ಕಟ್ಟುಗಳು ನಮ್ಮ ಪುರಾಣಗಳಲ್ಲಿಯೆ ಇದ್ದಾವೆ. ಈ ಎಲ್ಲ ಸಮಸ್ಯೆಗಳಿಗೆ ಪರಿಹಾರವಾಗಿ ಹೇಗೆ ಯೋಚನೆ ಮಾಡತಿದ್ದರು ಅಂದರೆ – ಕೃಷ್ಣ ನಮಗೆ ಹೀಗೆ ಸಮಸ್ಯಾತ್ಮಕನಾಗಬೇಕಾಗಿಲ್ಲ, ದೇವರು ಈ ಪ್ರಪಂಚದಲ್ಲಿ ಎಲ್ಲ ಕಡೆಯಲ್ಲೂ ಇದ್ದಾನೆ, ಅವನು ಮರದಲ್ಲಿದ್ದಾನೆ, ಗಿಡದಲ್ಲಿದ್ದಾನೆ, ಪ್ರಾಣಿ-ಪಕ್ಷಿಗಳಲ್ಲಿದ್ದಾನೆ, ಹುಲ್ಲಿನ ದಳದಲ್ಲೂ ಇದ್ದಾನೆ, ಯಃಕಶ್ಚಿತ್ ಆದವುಗಳಲ್ಲೂ ಇದ್ದಾನೆ. ಅವನು ಸರ್ವಾಂತರ್ಯಾಮಿ. ಚರ-ಅಚರ, ಜಡ-ಚೇತನ ಎಲ್ಲವುಗಳಲ್ಲಿಯೂ ಒಳಗಿನಿಂದ ವ್ಯಾಪಿಸಿ ಇದ್ದಾನೆ – ಅಂತ. ಅವನು ಟ್ರಾನ್ಸೆಂಡೆಂಟ್, ಅತೀತ, ಆಚೆ ಹೊರಗೆ ಇವುವವನು ಅಂತ ತಿಳಿಯದೇ ಇದ್ದರೆ ಸರ್ವಾಂತರ್ಯಾಮಿ ತಾನೆ! ಜ್ಯೂಯಿಶ್ ಮತ್ತು ಕ್ರಿಶ್ಚಿಯನ್ ಧರ್ಮಗಳಲ್ಲಾದರೆ ಅವನು ಟ್ರಾನ್ಸೆಂಡೆಂಟ್. ಅವುಗಳ ಪ್ರಕಾರ ಅವನು ಇಲ್ಲಿರೋದಿಲ್ಲ. ಇದಕ್ಕಿಂತ ಹೊರತಾಗಿರತಾನೆ, ಬೇರೆಯಾಗಿರತಾನೆ. ಅದಕ್ಕೇ ಅದು ಸಗುಣ, ಆದರೆ ನಿರಾಕಾರ. ಶಂಕರಾಚಾರ್ಯರಿಗೂ ಈ ಸಮಸ್ಯೆ ಇರಲಿಕ್ಕಿಲ್ಲ. ಅವರಿಗೆ ಅದು ನಿರ್ಗುಣ ನಿರಾಕಾರವಾದದ್ದು. ಹೀಗೆ ಕೃಷ್ಣನ ಜೊತೆ ಗುದ್ದಾಡುವ ಮನಸ್ಸಲ್ಲ ಅವರದು. ಅದು ಜ್ಞಾನದ ಹಾದಿಯಲ್ಲಿ ಹೊರಟಿರೋ ಮನಸ್ಸು. ಬುದ್ಧನಿಗೂ ಅದರ ಅಗತ್ಯವಿಲ್ಲ. ಅದು ಬೇರೆಯೆ ರೀತಿಯದು. ಇವರಿಗೆ ಆ ಅಗತ್ಯ ಬಂದ ಕೂಡಲೆ ಅವನು ಸಗುಣ ಸಾಕಾರ ಆಗತಾನೆ. ಕುಮಾರವ್ಯಾಸ ಅವನನ್ನ ಖಂಡಿತ ಸಗುಣ ಸಾಕಾರ ಮಾಡುತ್ತಲೇ ನಿರ್ಗುಣ ನಿರಾಕಾರದ ಇನ್ನೊಂದು ಆಯಾಮ ಅವನಿಗೆ ಇರೋಹಾಗೆ ಬರೀತಾನೆ ಅನ್ನಿಸುತ್ತೆ. ಅವನು ಭಾಷೆಯಲ್ಲಿ ಇಷ್ಟೆಲ್ಲ ಹೇಳುತ್ತ ಏನೆಲ್ಲ ಕಟ್ಟುತ್ತ ಈ ರೀತಿಯ ಕೆಲಸಗಳನ್ನೆಲ್ಲ ಮಾಡೋದು ಯಾಕೆ ಅಂದರೆ, ಇವರು ಹೇಳಿದಂತೆ, ಅವನಲ್ಲಿ ಲೌಕಿಕವನ್ನೂ ಅಲೌಕಿಕವನ್ನೂ ಎರಡನ್ನೂ ಒಟ್ಟಿಗೇ ಕಾಣುವ ಪ್ರಯತ್ನ ಅದು. ಅವನು ಆ ಎರಡನ್ನೂ ಹಿಡಿದು ತೋರಿಸತಾನೆ. ಆದರೆ, ಕಾವ್ಯದಲ್ಲಿ ಅದು ಮುಖ್ಯವಾಗಿ ಸಗುಣ ಸಾಕಾರವಾಗಿಯೇ ಬರುತ್ತದೆ.

ಸಗುಣ ಸಾಕಾರವಾಗಿರುವುದರಲ್ಲಿ ನಿರ್ಗುಣ ನಿರಾಕಾರವನ್ನು ತೋರಿಸೋದು ಅಲ್ಲಮನ ಮಾರ್ಗ. ಅವನ ಮಾತಿನಲ್ಲಿ ಪರಸ್ಪರ ವಿರೋಧವಾಗಿರುವ ಸಂಗತಿಗಳು ಒಟ್ಟೊಟ್ಟಿಗೇ ಬರುತ್ತವೆ. ಪದೇ ಪದೇ ವೈರುದ್ಧ್ಯಗಳನ್ನ ಬಳಸತಾನೆ. ಅಲ್ಲಮ

ಭಾಷೆಯನ್ನ ಯಾಕೆ ಹಾಗೆ ಉಪಯೋಗಿಸತಾನೆ ಅಂದರೆ, ಅದು ಸಗುಣ ಅಂತ ತೋರಿಸಿದಾಗ ನಮ್ಮ ಮನಸ್ಸು ಅಲ್ಲಿಯೇ ನಿಂತುಬಿಡದಿರಲಿ ಅಂತ. ಅದೊಂದನ್ನೇ ಗ್ರಹಿಸದಿರಲಿ ಅಂತ. ಭಾಷೆಯಲ್ಲಿ ನಾವು ಯಾವಾಗಲೂ ಒಂದೊಂದನ್ನೇ ಗ್ರಹಿಸತಾ ಇರತೇವೆ. ಆದರೆ ಭಾಷೆಯ ಶಕ್ತಿ ತನ್ನ ಮಿತಿಯನ್ನ ಮೀರಬೇಕು. ಅದಕ್ಕೆ ಭಾಷೆಯನ್ನು ಮುರಿದು ಕಟ್ಟಬೇಕಾಗತದೆ. ಭಾಷೆಯನ್ನ ಮುರಿಯಲಿಕ್ಕಾಗಿಯೆ ಭಾಷೆ ನಿರ್ಮಿಸೋದು. ಭಾಷೆಯನ್ನ ಮುರಿಯೋದು ಹೇಗೆಂದರೆ, ಹೇಳಿದ್ದಕ್ಕೆ ವಿರೋಧವಾಗಿ ಕೂಡಲೇ ಇನ್ನೊಂದನ್ನ ಹೇಳಿಬಿಡೋದು. ಅದರಿಂದ ನಮ್ಮ ಮನಸ್ಸು ಸಲೀಸಾಗಿ ಮುಂದೆ ಹೋಗದಿರೋ ಹಾಗೆ ನೋಡಿಕೊಳ್ಳೋದು. ಮನಸ್ಸು ಸಲೀಸಾಗಿ ಮುಂದೆ ಹೋದಾಗ ನಾವು ಒಂದನ್ನು ಮಾತ್ರ ಗಮನಿಸತಾ ಇರತೇವೆ, ಇತರ ವಿಷಯಗಳು ಬದಿಗೆ ಸರಿದುಬಿಡತಾವೆ. ಇದಕ್ಕೆ ನಾನು ಯಾವಾಗಲೂ ಕೊಡುವ ಉದಾಹರಣೆಯಿದೆ – ಸ್ವಿಚ್ ಆರಿಸಿ ಎನ್ನಲು, 'ಪುಟೌಟ್ ದಿ ಲೈಟ್' ಅಂದರೆ ನೀವು ಹೋಗಿ ಲೈಟ್ ಆರಿಸಿ ಬರತೀರಿ. ಅದನ್ನೇ ಶೇಕ್ಸ್‌ಪಿಯರ್ ಹೇಳಿದಾಗ ಹಾಗಾಗದೇ ಇರೋಹಾಗೆ ಮಾಡತಾನೆ, ಒಥೆಲ್ಲೋದಲ್ಲಿ. ಡೆಸ್ಡಿಮೋನ ಮಲಗಿದ್ದಾಳೆ. ಒಥೆಲ್ಲೋಗೆ ಅವಳು ಬೇರೆ ಒಬ್ಬನನ್ನ ಮೋಹಿಸಿರಬಹುದು ಅಂತ ಗುಮಾನಿ. ತುಂಬಾ ಹೊಟ್ಟೆಕಿಚ್ಚು ಆಗಿಬಿಟ್ಟಿದೆ. ಅವಳನ್ನ ಕೊಲ್ಲಬೇಕು ಅಂತ ಹೋಗತಾನೆ. ಅಲ್ಲಿ ಒಂದು ಮೋಂಬತ್ತಿ ಉರೀತಾ ಇದೆ. ಅವನು ಅವಳನ್ನ ತುಂಬಾ ಪ್ರೀತಿಸಿದ್ದಾನೆ. ಅವಳಿಂದ ಮೋಹಿತನಾಗಿದ್ದಾನೆ. ಆದ್ದರಿಂದ ಆ ಮೋಂಬತ್ತಿಯ ಬೆಳಕಿನಲ್ಲಿ ಅವಳನ್ನ ಕೊಲ್ಲೋದು ಅವನಿಗೆ ಸಾಧ್ಯವಾಗುತ್ತಿಲ್ಲ. ಅದಕ್ಕವನು, 'ಪುಟ್ ಔಟ್ ದಿ ಲೈಟ್, ದೆನ್ ಪುಟ್ ಔಟ್ ದಿ ಲೈಟ್' ಅನ್ನತಾನೆ. ಹೇಳಿದ್ದನ್ನೇ ಪುನಃ ಹೇಳತಾನೆ. 'ದೆನ್ ಪುಟ್ ಔಟ್ ದಿ ಲೈಟ್' ಅಂದಕೂಡಲೇ ಅದಕ್ಕೆ ಬೇರೆ ವಿಶೇಷವಾದ ಅರ್ಥಗಳೆಲ್ಲ ಬಂದುಬಿಡತಾವೆ. ಅದು ಯಾವ ಲೈಟು? ಯಾವ ಬೆಳಕು? ತನ್ನ ಜೀವನದ ಬೆಳಕನ್ನ ಕಳೆಯಬೇಕು ಅಥವಾ ಅವಳ ಒಳಗೇನೆ ಇರುವ ಬೆಳಕನ್ನ ಕಳೆಯಬೇಕು. ಯೋಚನೆ ಮಾಡತಾ ಹೋದ ಹಾಗೆ ಹಲವು ಅರ್ಥಗಳು ಹೊರಡಲು ಪ್ರಾರಂಭವಾಗತದೆ. ಅಂದರೆ, ಅದಕ್ಕೆ ಭಾಷೆಯನ್ನ ಒಡೀಬೇಕಾಗತದೆ. ಅದು ಇರೋದನ್ನು ಹೇಳುತ್ತಾ ಇಲ್ಲದಿರೋ ದನ್ನೂ ಹೇಳುವಂತಾಗಬೇಕು ಅನ್ನಿಸಿದಾಗ ಭಾಷೆಯಲ್ಲಿ ಈ ಪ್ರಯೋಗ ಮಾಡತೇವೆ. ಆಗ ಅದು ಕಾವ್ಯ ಆಗಿಬಿಡತ್ತೆ. ಇರುವುದನ್ನ ಮಾತ್ರ ಹೇಳುವಾಗ 'ಪುಟ್ ಔಟ್ ದಿ ಲೈಟ್' – ದೀಪ ಆರಿಸು – ಅಷ್ಟೇ. ಆಗ ನೀವು ಹೋಗಿ ಆ ಕೆಲಸ ಮಾಡಿ ಮುಗಿಸುತ್ತೀರಿ. ಅಲ್ಲಿಗೆ ಮುಗೀತು. ಆದರೆ, ನಾನು ಹೇಳಿದ್ದನ್ನ ನೀವು ಕೂಡಲೇ ಮಾಡದೇ ಇರಬೇಕಾದರೆ ನಾನದನ್ನ ಕಾವ್ಯದ ಭಾಷೆಯಲ್ಲಿ ಹೇಳಬೇಕು. ಅಂದರೆ, ಅದನ್ನೊಂದು



ಧ್ಯಾನದ ಸ್ಥಿತಿಗೆ ತರಬೇಕು. ಕ್ರಿಯಾಸ್ಥಿತಿಯಲ್ಲಿರುವ ಮನಸ್ಸನ್ನ ಧ್ಯಾನಸ್ಥಿತಿಗೆ ತರಬೇಕು. ಕ್ರಿಯಾಸ್ಥಿತಿಯಿಂದ ಧ್ಯಾನಸ್ಥಿತಿಗೆ ತರೋದಕ್ಕಾಗಿ ಇದನ್ನೆಲ್ಲ ಮಾಡತಾರೆ. ಕುಮಾರವ್ಯಾಸ ಅದ್ಭುತವಾಗಿ ಕೃಷ್ಣನನ್ನ ಒಬ್ಬ ಉಪಾಯಗಾರ, ಕಳ್ಳ, ಗೊಲ್ಲ, ಮೀಸೆ ಬಿಟ್ಟವನು, ಕಪ್ಪು ಮೈಯವನು ಅಂತೆಲ್ಲ ವರ್ಣಿಸುತ್ತಲೇ ಹಾಗಲ್ಲ ಅಂತಲೂ ಹೇಳತಿರತಾನೆ. ಕೃಷ್ಣ ಒಂದು ಮದುವೆಗೆ ಹೋಗತಾನೆ; ಯಾಕೆ ಬಂದೆ ಅಂತ ಕೇಳಿದರೆ ಮದುವೆಗೆ ಬಂದೆ ಅಂತಾನೆ – ಹೀಗೆ ಅವನನ್ನ ನಿತ್ಯದ ವ್ಯವಹಾರದಲ್ಲಿ ತೋರಿಸುತ್ತಲೇ 'ಅಲ್ಲ', 'ಅಷ್ಟೇ ಅಲ್ಲ' ಅಂತಲೂ ಸೂಚಿಸತಾನೆ. ಅಲ್ಲ ಅಂದರೂ ನಂಬೋದು ಕಷ್ಟ; ನಂಬಿದವರಿಗೂ ನಂಬೋದು ಕಷ್ಟ. ಇವೆಲ್ಲ ಗೊಂದಲಗಳನ್ನು ಪುರಾಣದಲ್ಲಿ ಸೃಷ್ಟಿಸತಾನೆ, ಕಾವ್ಯದಲ್ಲಿ ಸೃಷ್ಟಿಸತಾನೆ.

ಮೊನ್ನೆ ಸಂಜೆ ಆಶೀಶ್ ನಂದಿಯವರ ಜೊತೆ ಮಾತಾಡತಾ ಇದ್ದಾಗ ಒಂದು ಮಾತು ಹೇಳಿದರು. ಅದಕ್ಕೂ ಇದಕ್ಕೂ ಸಂಬಂಧ ಹೊಳೀತು, ಅದಕ್ಕಾಗಿ ಹೇಳತೀನಿ. ಗಾಂಧಿ ಸತ್ತಾಗ ಎಲ್ಲರೂ ಬೇಕಾದಷ್ಟು ಮಾತುಗಳನ್ನು ಹೇಳಿದ್ದಾರೆ. ಐನ್‌ಸ್ಟೈನ್ ಅಲ್ಲದೆ, ಬ್ರಿಟಿಷ್ ಇತಿಹಾಸಕಾರ ಟಾಯ್ನ್‌ಬೀ ಏನು ಹೇಳಿದ ಅಂದರೆ, 'ಇನ್ನು ಮುಂದೆ ನಮಗಾಗುವ ಆಶ್ಚರ್ಯವೆಂದರೆ – ಒಬ್ಬ ಸಂತ ಕೂಡ ಒಂದು ರಾಜಕೀಯದ ಕೊಳೆಗೇರಿಯಲ್ಲಿ ಬದುಕುವ ಅಚ್ಚರಿಯನ್ನು ನಾವಿನ್ನು ನೋಡಬಹುದೆ?' ಅಂತ. ಆಶೀಶ್ ನಂದಿಯವರು ಹೇಳುವ ಪ್ರಕಾರ, ಇನ್ನು ಮುಂದೆ ಮನುಜಕುಲ ತನ್ನ ಪ್ರವಾದಿಗಳನ್ನು ಕೇಳುತ್ತದೆ – 'ರಾಜಕಾರಣದ ಕೊಳೆಗೇರಿಯಲ್ಲಿ ಬದುಕಲು ನೀವು ಸಿದ್ಧರಿದ್ದೀರೋ?' – ಎಂದು. ಗಾಂಧಿ ಆ ರೀತಿ ಬದುಕಲು, ಬಲಿಯಾಗಲು ಸಿದ್ಧರಾದ ಸಂತರಾಗಿದ್ದರು. ರಾಜಕೀಯದ ಸ್ಲಮ್‌ನಲ್ಲಿ! ಇವತ್ತಿಗೂ ನಮಗೆ ರಾಜಕೀಯ ಸ್ಲಮ್ ಅಂತಲೇ ಅನ್ನಿಸತದೆ. ಅದು ಹೌದು. ಆದರೆ, ಸಂತನಿಗೆ ಇರೋ ಅಗತ್ಯ ಈ ಸ್ಲಮ್ಮಿನಲ್ಲಿರೋದು. ಕೃಷ್ಣನ ಬಗ್ಗೆ ಕೂಡ ಹಾಗೆಯೆ ಅನ್ನಿಸುತ್ತದೆ – ಇವನೂ ಒಬ್ಬ ರಾಜಕೀಯದ ಸ್ಲಮ್‌ನಲ್ಲಿಯೇ ಬದುಕಿದವನು ಅಂತ. ಆದರೆ, ಸ್ವಲ್ಪ ಬೇರೆ ರೀತಿಯಲ್ಲಿ, ಗಾಂಧಿಯ ರೀತಿಯಲ್ಲಲ್ಲ. ಆ ಮಹಾಭಾರತದ ಕಾಲದ ರಾಜಕೀಯ ಸ್ಲಮ್ ಇತ್ತಲ್ಲ, ಅಲ್ಲಿ ಯಾರು ಯಾರು ಏನು ಅಂತ ಗೊತ್ತಾಗೋದು ಬಹಳ ಕಷ್ಟ. ಕೃಷ್ಣ ದೇವರು ಅಂತ ಭೀಷ್ಮನಿಗೆ ಗೊತ್ತಿಲ್ಲವೆ? ಗೊತ್ತಿದ್ದೂ ಮೂರುಕಾಸಿನ ಪ್ರಯೋಜನ ಆಗಲಿಲ್ಲ ಅವನಿಗೆ. ಏನಾಯಿತು? ದೇವರು ಅಂತ ಗೊತ್ತಿದ್ದೂ ಅವನು ಯಾರ ಜೊತೆಗೆ ಇದ್ದ? ದುರ್ಯೋಧನನ ಜೊತೆಗೆ. 'ದೇವರು' ಅಂತ ಗೊತ್ತಿದ್ದೂ ದುರ್ಯೋಧನ ಏನು ಮಾಡಿದ? ದ್ರೋಣ ಏನು ಮಾಡಿದ? ಅಥವಾ ಪಾಂಡವರು ಏನು ಮಾಡಿದರು? ಗೊತ್ತಿದ್ದು ಯಾರೇನು ಮಾಡಿದರು?

ಏನು ಪ್ರಯೋಜನ ವಾಯಿತು ? ಇದು ಸಮಸ್ಯೆ. ಇದೇ ಸಮಸ್ಯೆ. ಮಹಾಭಾರತ ಹೇಳೋದು ಇದನ್ನೇ.

ಹಾಗೆಯೆ ಒಂದು ಮೂರ್ತಿಯನ್ನು ಸೃಷ್ಟಿಸುವಾಗ ಕೂಡ. ನಿನ್ನೆ ರಾಜಾರಾಮ್ ಮೂರ್ತಿಗಳ ಕುರಿತು ಮಾತನಾಡುತ್ತಿದ್ದಾಗ, ನನ್ನ ಮನಸ್ಸಿನಲ್ಲಿ ಒಂದು ರೀತಿಯ ಅತೃಪ್ತಿ ಮೂಡುತಿತ್ತು – ಇವರು ಇದರ ಒಳಗೆ ಆಳಕ್ಕೆ ಇಳಿಯೋದಿಲ್ಲವಲ್ಲ – ಅಂತ. ಮೂರ್ತಿ ನಿರ್ಮಾಣದಲ್ಲಿ ಏನು ಸಮಸ್ಯೆ ಇತ್ತು ? ಆನಂದಕುಮಾರಸ್ವಾಮಿ ಬರೋದಕ್ಕೆ ಮುಂಚೆ ನಮ್ಮ ಭಾರತದ ಮೂರ್ತಿಗಳನ್ನ ಯುರೋಪಿನಲ್ಲಿ ಯಾರಿಗಾದರೂ ತೋರಿಸಿದ್ದರೆ, ಅವರು ಇದನ್ನ ಭಯಾನಕವಾದ, ಕೊಳಕಾದ, ವಿಕೃತವಾದ ಅಗ್ಲೀ ಚಿತ್ರಗಳು ಅಂತ ತಿಳಿದುಕೊಳ್ಳತಿದ್ದರು; ಇದರಲ್ಲಿ ಯಾವುದೇ ರೀತಿಯ ಪ್ರಜ್ಞೆಯಾಗಲೀ ಸೌಂದರ್ಯ ವಾಗಲೀ ಕೆಲಸಮಾಡಿರಲಿಲ್ಲ ಅಂತ ತಿಳೀತಿದ್ದರು. ಅವರು ಭಗವದ್ಗೀತೆಯನ್ನು ಒಪ್ಪಿಕೊಳ್ಳತಾರೆ ಅಥವಾ ಕಾಲಿದಾಸನನ್ನ ಒಪ್ಪಿಕೊಳ್ಳತಾರೆ; ಉದಾಹರಣೆಗೆ ಗಯಟೆಯಂಥವರು. ಆದರೆ ಇದನ್ನ ಒಪ್ಪಿಕೊಳ್ಳೋಕೆ ಅವರಿಂದ ಆಗತಿರಲಿಲ್ಲ.

ದೇವರು ಈ ಮನುಷ್ಯನ ಚರಿತ್ರೆಯಲ್ಲಿಯೇ ಹುಟ್ಟತಾನೆ ಎಂದು ನಮ್ಮ ನಂಬಿಕೆ. ಈ ಮನುಷ್ಯನ ಚರಿತ್ರೆಯಲ್ಲಿಯೇ ದೈವತ್ವ ಅನ್ನೋದು ಕೆಲಸ ಮಾಡತಿರತ್ತೆ. ಇದು ಭಾರತದ ಸಂಸ್ಕೃತಿಯಲ್ಲಿರುವ ನಂಬಿಕೆ. ಆದರೆ ಅದು ಹೇಗೆ ಕೆಲಸ ಮಾಡತ್ತೆ ಅನ್ನೋದು ಗೊತ್ತಿಲ್ಲ. ಕೆಲವರ ಪ್ರಕಾರ ಅದು ಕೆಲವರ ಮೂಲಕ ಕೆಲಸ ಮಾಡಬಹುದು. ಅದು ಕೃಷ್ಣನ ಮೂಲಕ ಕೆಲಸ ಮಾಡಬಹುದು, ಗಾಂಧಿ ಮೂಲಕ ಕೆಲಸ ಮಾಡಬಹುದು. ಹಾಗೆಯೆ, ಇನ್ನೊಬ್ಬರ ಮೂಲಕ ಅದಕ್ಕೆ ವಿರುದ್ಧ ವಾಗಿಯೂ ಕೆಲಸ ಮಾಡಬಹುದು. ವಿರುದ್ಧವಾಗಿ ಕೆಲಸ ಮಾಡೋದು ಕೂಡ ಚರಿತ್ರೆಯ ಯಾವುದೋ ಒಂದು ಆಶಯವನ್ನು ಪೂರ್ಣಗೊಳಿಸುವ ಕ್ರಮ ವಾಗಿರಬಹುದು. ಇದೆಲ್ಲ ಲೀಲಾತ್ಮಕ ವಾದದ್ದು. ಈ ಲೀಲೆ ಅನ್ನುವ ಶಬ್ದ ಇದೆಯಲ್ಲ ಅದು ಬಹು ವಿಚಿತ್ರವಾದ ಶಬ್ದ. ಅದೊಂದು ಆಟ. ಆ ಲೀಲಾತ್ಮಕತೆ ಯಲ್ಲಿ ಎಲ್ಲವೂ ಇರುತ್ತದೆ, ಎಲ್ಲವೂ ಆಗುತ್ತದೆ. ಇದನ್ನ ಈ ನಾನು ಪ್ರತಿನಿಧಿಸಿ ನೋಡಬೇಕು. ಯಾಕೆಂದರೆ, ಇದು ಪ್ರಪಂಚದಲ್ಲಿರೋದು, ಕಣ್ಣಿಗೆ ಕಾಣು ವಂಥದ್ದು. ಕಾಣಬಲ್ಲಂಥದ್ದು ಅಂದಕೂಡಲೇ ಒಬ್ಬ ಮನುಷ್ಯನ ಚಿತ್ರವನ್ನೇ ಬರೆದರೆ ಆಗೋದಿಲ್ಲ. ಅದಕ್ಕೆ ಪ್ರಭಾವಳಿಯ ಕಿರೀಟ ಇಡತಾರೆ, ಹತ್ತು ಕೈ, ನಾಲ್ಕು ತಲೆ, ಮೂರು ಕಣ್ಣು, ಡೊಳ್ಳು ಹೊಟ್ಟೆ ಎಲ್ಲ ಕೊಡತಾರೆ. ಸರ್ರಿಯಲಿಸಮ್‌ಗೆ ಇದಕ್ಕಿಂತ ದೊಡ್ಡ ಉದಾಹರಣೆ



ಬೇರೆ ಬೇಡ. ಭಾವನೆಗೆ ಒಂದು ರೂಪ ಕೊಡಬೇಕು ಅನ್ನೋ ಹಠದಲ್ಲಿ ಇವೆಲ್ಲ ಬಂದವು.

ಭಾರತದಲ್ಲಿ ಕೃಷ್ಣ ಅಂಥಾ ಒಂದು ರೂಪ. ರಾಮನದು ಇನ್ನೂ ಸ್ವಲ್ಪ ಸರಳ. ಸರಳವಾದರೂ ಸರಳವಲ್ಲ. ಯಾಕೆಂದರೆ, ಅವನು ವಾಲಿಯನ್ನ ಕೊಲ್ಲಬೇಕಲ್ಲ. ಕೊಲ್ಲುವುದಕ್ಕೆ ಹೋದ ಕೂಡಲೇ ಕವಿಗೆ ಕಷ್ಟಗಳು ಎದುರಾಗತವೆ. ಇಂಥಾ ಕಷ್ಟಗಳ ನಡುವೆ, ಲೌಕಿಕದ ನಡುವೆ ಅಲೌಕಿಕವನ್ನು ಮಾಡಿಸೋದು ಅಂದರೆ ರಾಜಕೀಯದ ಕೊಳೆಗೇರಿಯಲ್ಲಿ ಗಾಂಧಿ ಕೆಲಸ ಮಾಡಿದ ಹಾಗೆ. ಅದು ಪರಮಹಂಸರಿಗೂ ಸಮಸ್ಯೆಯಾಗಿತ್ತು. ಕ್ಯಾನ್ಸರ್ ಬಂದಾಗ ಅವರು ದೇವಿಯನ್ನ ಕೇಳಿದರಂತೆ – ‘ಏನಮ್ಮಾ, ನಿನಗೆ ಎಷ್ಟು ಬೇಕಾದವನು ನಾನು, ನನಗೆ ಕ್ಯಾನ್ಸರ್ ಕೊಟ್ಟುಬಿಟ್ಟೆಯಲ್ಲ, ಏನನ್ನೂ ನುಂಗಲಾರದಂತಹ ನೋವು ಕೊಟ್ಟೆಯಲ್ಲ !’ – ಅಂತ. ಅದಕ್ಕೆ ದೇವಿಯಿಂದ ಹೀಗೆ ಉತ್ತರ ಬರತ್ತೆ – ‘ನಾನು ಸಾವಿರ ಕೊರಳಿನಿಂದ ನನ್ನ ಆಹಾರ ತಗೊಂಡಿದ್ದೀನಿ, ನಿನ್ನದೊಂದೇ ಏನು ಮಹಾ ಅಂತ ತಿಳಕೊಂಡಿದ್ದಿ ನೀನು ?’ ಆ ಮಾತಿನಿಂದ ಅವರು ಉತ್ತರ ಪಡೆದರು ಅಂತ ಹೇಳತಾರೆ. ನಾನಿದನ್ನ ಅನುಮಾನಿಸಿದ್ದೆ. ನನ್ನದೊಂದು ಲೇಖನದಲ್ಲಿ – ಇಷ್ಟು ಸುಲಭವಾಗಿ ಅದು ಉತ್ತರ ಆಗೋದಿಲ್ಲ, ಇದೊಬ್ಬ ಕಿರ್ಕೆಗಾರ್ಡ್‌ನಿಗಾಗಿದ್ದರೆ ಮಹಾ ತರಲೆ ಆಗಿರೋದು, ಉತ್ತರ ಕೇಳಿದ ನಂತರವೂ ಅವನು ಒದ್ದಾಡತಿದ್ದ – ಅಂತ ಹೇಳಿದ್ದೆ. ಪರಮಹಂಸರು ಹಾಗೆ ಒದ್ದಾಡಿದರೋ ಇಲ್ಲವೋ ಗೊತ್ತಿಲ್ಲ. ಭಾರತೀಯ ಸಂಸ್ಕೃತಿಯ ಇಂತಹ ಕೆಲವು ಆಯಾಮಗಳ ಬಗ್ಗೆ ನನ್ನ ಕೆಲವು ಪ್ರಶ್ನೆಗಳು ಈಗಲೂ ಹಾಗೆಯೆ ಉಳಿದಿದ್ದಾವೆ. ಈ ಇದನ್ನೆಲ್ಲ ಕೇಳಿಸಿಕೊಳ್ಳುತ್ತಲೇ ನಾನು ಯೋಚನೆ ಮಾಡತೇನೆ. ನಮಗ್ಯಾರಿಗೂ ಸಮಸ್ಯೆಗಳಿಲ್ಲ ಅಂತಲ್ಲ. ಇದು ಸಮಸ್ಯಾತ್ಮಕವಾದದ್ದೇ. ಆದ್ದರಿಂದಲೇ ಅವರಿಗೆ ಉತ್ತರ ಸಿಕ್ಕಿತು. ಯುದ್ಧ ಮಾಡಬಹುದು ಅಂತ ಅರ್ಜುನನಿಗೆ ಉತ್ತರ ಸಿಕ್ಕಿತೆ ? ಸಿಕ್ಕಿತು; ಮತ್ತು ಸಿಗಲಿಲ್ಲ.

ಮೂರ್ತಿಗಳು ಹುಟ್ಟೋದು ಇವುಗಳ ನಡುವೆ. ಪುರಾಣಗಳು ಹುಟ್ಟೋದು ಇವುಗಳ ನಡುವೆ. ನಮ್ಮ ನಮ್ಮ ವ್ಯಾಖ್ಯಾನ ನಡಿಯೋದು ಕೂಡಾ ಇವುಗಳ ನಡುವೆಯೇ. ಕೀರ್ತಿ ಮತ್ತು ಕಿ.ರಂ. ಕೃಷ್ಣನನ್ನ ತೋರಿಸಿದ ಕ್ರಮದಲ್ಲಿ ಇದು ಸ್ಪಷ್ಟವಾಗುತ್ತದೆ. ನನಗೆ ಈ ಹೊಳಹನ್ನು ನೀಡಿದ್ದಕ್ಕೆ ನಾನು ಅವರಿಗೆ ಕೃತಜ್ಞ.

# ಭಾರತೀಯ ದರ್ಶನಗಳು ಮತ್ತು ಭಾಷೆ

ಎಂ.ಎ. ಹೆಗಡೆ

ಅಕ್ಷರ ಪ್ರಕಾಶನದಿಂದ ಸದ್ಯವೇ ಪ್ರಕಟವಾಗಲಿರುವ ಈ ತಲೆಬರಹದ್ದೇ ಹೆಸರಿನ ಪುಸ್ತಕವು ಭಾರತೀಯ ದರ್ಶನಗಳಲ್ಲಿ ಭಾಷೆಯನ್ನು ಕುರಿತ ಪರಿಕಲ್ಪನೆಗಳನ್ನೂ ಚರ್ಚೆಗಳನ್ನೂ ವಿದ್ಯಾರ್ಥಿಗಳಿಗೆ ಮತ್ತು ಅಧ್ಯಯನಕಾರರಿಬ್ಬರಿಗೂ ಅನುಕೂಲವಾಗುವಂತೆ ಸರಳವಾಗಿ ವಿವರಿಸುವಂಥದು. ಅದರ ಪ್ರಾಸ್ತಾವಿಕ ಅಧ್ಯಾಯ ಇಲ್ಲಿದೆ.

ಭಾರತೀಯ ದರ್ಶನಗಳು ಆರಂಭಕಾಲದಿಂದಲೂ ಇತರ ದಾರ್ಶನಿಕ ವಿಚಾರಗಳನ್ನು ಚರ್ಚಿಸುವಂತೆ ಭಾಷೆಯ ಕುರಿತೂ ಚರ್ಚಿಸುವುದನ್ನು ಕಾಣಬಹುದು. ಪಾಶ್ಚಾತ್ಯ ತತ್ತ್ವಶಾಸ್ತ್ರದಲ್ಲಿ ಭಾಷೆಯನ್ನು ಕುರಿತು ಚರ್ಚಿಸುವುದು ಕೂಡ ಮಹತ್ತ್ವದ್ದೆಂಬ ವಾದವು ಈಚೆಗಿನದು. ಈಚಿನವರಲ್ಲಿ ಕೆಲವರು ಭಾಷೆಯ ಕುರಿತಾದ ಚರ್ಚೆಯು ತತ್ತ್ವಶಾಸ್ತ್ರದ ಪ್ರಮುಖ ಅಂಗವಾಗಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದಾರೆ. ಭಾರತೀಯ ದರ್ಶನಗಳಲ್ಲಿ ಅಂಥ ಚರ್ಚೆಯು ಸಾಕಷ್ಟು ಪ್ರಮಾಣದಲ್ಲಿ ನಡೆದಿದೆಯಾದರೂ ಭಾರತೀಯ ತತ್ತ್ವಶಾಸ್ತ್ರವನ್ನು ಕುರಿತು ಗ್ರಂಥಗಳನ್ನು ರಚಿಸುವಾಗ ಅಧನ್ನು ಪರಿಗಣಿಸಿದ್ದು ಕಡಿಮೆಯೇ. ಭಾರತೀಯ ದರ್ಶನಗಳು ಸೌಂದರ್ಯ ಮೀಮಾಂಸೆಯನ್ನು ದರ್ಶನದ ಅಂಗವಾಗಿ ಪರಿಗಣಿಸುವುದಿಲ್ಲ ವೆಂಬುದನ್ನು ಹೇಳಲಾಗುತ್ತದೆಯೇ ಹೊರತು ಭಾಷೆಯನ್ನು ತತ್ತ್ವಶಾಸ್ತ್ರದ ಅಂಗವೆಂದು ಪರಿಗಣಿಸಿದ್ದವೆಂಬುದನ್ನು ಹೇಳಲು ಸಂಕೋಚಪಡುತ್ತೇವೆ. ದಾರ್ಶನಿಕರ ಇತರ ಚಿಂತನೆಗಳಷ್ಟೇ ಭಾಷಿಕ ಚಿಂತನೆಗಳಿಗೂ ಮಹತ್ತ್ವದೊರೆಯುವಂತಾಗಬೇಕೆಂಬುದು ನನ್ನ ಅಭಿಪ್ರಾಯ. ಇಲ್ಲಿ ಸಂಗ್ರಹಿಸಿದ ವಿಚಾರಗಳಿಂದ ನನ್ನ ಅಭಿಮತಕ್ಕೆ ಪುಷ್ಟಿ ದೊರೆತೀತೆಂದು ತಿಳಿದಿದ್ದೇನೆ.

ಭಾರತೀಯ ದಾರ್ಶನಿಕರು ಭಾಷೆಯನ್ನು ಕುರಿತು ಅಷ್ಟೊಂದು ಮಹತ್ತ್ವವನ್ನು



ಕೊಡಲು ಕಾರಣವೇನಿರಬಹುದೆಂಬುದು ಜಿಜ್ಞಾಸೆಯ ವಿಷಯ. ಭಾಷೆಯನ್ನು ಕುರಿತಾದ ಆಕರ್ಷಣೆ, ಆರಾಧನೆಗಳನ್ನು ವೈದಿಕಯುಗದಲ್ಲಿಯೇ ಕಾಣಬಹುದು. ವಾಕ್ಕು ಒಂದು ಅದ್ಭುತವೆನ್ನುವುದನ್ನು ವೈದಿಕ ಋಷಿಗಳು ಕಂಡುಕೊಂಡರು. ಅದನ್ನು ದೈವಸೃಷ್ಟಿಯೆಂದು ಕೊಂಡಾಡಿದರು. ವಾಕ್ಕಿಗೆ ದೇವತೆಯ ಸ್ಥಾನವನ್ನು ಕೊಟ್ಟು ಆರಾಧಿಸಿದರು. ಮಾತಿನ ಮೂಲವನ್ನು ಕುರಿತು ಚಿಂತಿಸಿದರು. ಅದು ಶಬ್ದವಷ್ಟೇ ಅಲ್ಲ, ನಿಶ್ಶಬ್ದದಲ್ಲಿಯೂ ಅಡಗಿದೆಯೆಂಬುದನ್ನು ಗುರುತಿಸಿದರು. ಪರಾ, ಪಶ್ಯಂತೀ, ಮಧ್ಯಮಾ ಮತ್ತು ವೈಖರೀ ಎಂದು ನಾಲ್ಕು ವಿಧವಾಗಿದೆಯೆಂಬುದನ್ನು ಹೇಳಿದವರು ಅವರೇ. ವೇದೋಪನಿಷತ್ತುಗಳಲ್ಲಿ ಭಾಷೆಯ ಕುರಿತಾಗಿ ಸಾಕಷ್ಟು ಚಿಂತನೆಗಳು ನಡೆದಿದ್ದವೆಂಬುದನ್ನು ಗುರುತಿಸಬಹುದು. ವೇದಾಂಗಗಳೆನಿಸಿದ ವ್ಯಾಕರಣ ಮತ್ತು ನಿರುಕ್ತಗಳಲ್ಲಿ ಭಾಷೆಯನ್ನು ಕುರಿತು ಚಿಂತಿಸುವ ಎರಡು ಶಾಸ್ತ್ರಗಳೆಂಬುದನ್ನು ಇಲ್ಲಿ ಗಮನಿಸಬಹುದು.

ವೇದಕಾಲದಿಂದಲೂ ಭಾಷೆಗೆ ಕೊಟ್ಟ ಮಹತ್ತ್ವವು ಅಧ್ಯಯನ ಕ್ರಮದಲ್ಲಿಯೂ ಮುಂದುವರಿಯಿತು. 'ಕಾಣಾದಂ ಪಾಣಿನೀಯಂ ಚ ಸರ್ವಶಾಸ್ತ್ರೋಪಕಾರಕಮ್' ಎಂಬುದು ಪ್ರಸಿದ್ಧವಾದ ಮಾತು. ಅಧ್ಯಯನಕ್ಕೆ ತಳಹದಿಯೆಂದರೆ ಈ ಎರಡು ಶಾಸ್ತ್ರಗಳು. ಅವುಗಳಲ್ಲಿ ಕಾಣಾದವೆಂಬುದು ಕಣಾದನಿಂದ ಪ್ರಣೀತವಾದ ವೈಶೇಷಿಕ ದರ್ಶನವನ್ನು ಸೂಚಿಸುತ್ತದೆ. ಪಾಣಿನೀಯವೆನ್ನುವುದು ಪಾಣಿನಿಯಿಂದ ಪ್ರಣೀತವಾದ ವ್ಯಾಕರಣಶಾಸ್ತ್ರವನ್ನು ಸೂಚಿಸುತ್ತದೆ. ಯಾವುದೇ ಶಾಸ್ತ್ರವನ್ನು ಗಂಭೀರವಾಗಿ ಅಧ್ಯಯನ ಮಾಡುವುದಕ್ಕೆ ಪೂರ್ವಭಾವಿಯಾಗಿ ವೈಶೇಷಿಕ ಮತ್ತು ವ್ಯಾಕರಣ ಶಾಸ್ತ್ರಗಳನ್ನು ಅಧ್ಯಯನ ಮಾಡಬೇಕೆಂಬುದು ಈ ಮಾತಿನ ಅರ್ಥ.

ಕಣಾದಪ್ರಣೀತವಾದ ವೈಶೇಷಿಕದರ್ಶನವು ಪ್ರಪಂಚದಲ್ಲಿರುವ ವಸ್ತುಗಳನ್ನೆಲ್ಲ ಏಳು ಪದಾರ್ಥಗಳನ್ನಾಗಿ ವಿಂಗಡಿಸಿ ಅವುಗಳ ಸ್ವರೂಪವನ್ನು ತಿಳಿಸಿಕೊಡುತ್ತದೆ. ದ್ರವ್ಯ, ಗುಣ, ಕರ್ಮ, ಸಾಮಾನ್ಯ, ವಿಶೇಷ ಸಮವಾಯ ಮತ್ತು ಅಭಾವಗಳೇ ಸಪ್ತ ಪದಾರ್ಥಗಳು. ಈ ಪದಾರ್ಥಗಳನ್ನು ಒಂದೊಂದಾಗಿ ವಿಶ್ಲೇಷಿಸುವ ಬಗೆಯು ವಿಶಿಷ್ಟವಾದುದು. ಆಧುನಿಕ ಯುಗದ ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರಗಳನ್ನು ಒಳಗೊಂಡ ಶಾಸ್ತ್ರ ಈ ಪದಾರ್ಥವಿಜ್ಞಾನ. ಅದಕ್ಕೇ ಉಪಯುಕ್ತವಾದ ವೈಶೇಷಿಕದರ್ಶನವು ಅಧ್ಯಯನ ಕ್ರಮದಲ್ಲಿ ಸೇರಬೇಕಾದುದು ಅಗತ್ಯವೆಂದು ಭಾವಿಸಿರಬೇಕು.

ಪಾಣಿನಿಯ ವ್ಯಾಕರಣದ ಅಧ್ಯಯನವು ಭಾಷಾಜ್ಞಾನವನ್ನು ಹೆಚ್ಚಿಸಿಕೊಳ್ಳಲು ಸಹಕಾರಿ. ಭಾಷೆಯನ್ನು ಬಳಸುವವನಿಗೆ ವ್ಯಾಕರಣದ ನಿಯಮಗಳ ಜ್ಞಾನವು

ಅವಶ್ಯವೆಂಬುದು ತಿಳಿದಿರುವ ಸಂಗತಿಯೇ. ಅನೇಕರು ತಿಳಿಯುವಂತೆ ಭಾಷೆ ಮೊದಲು, ವ್ಯಾಕರಣ ನಂತರವೆಂಬುದು ಸಲ್ಲ. ವ್ಯಾಕರಣವು ಮೊದಲು ಭಾಷೆಯು ನಂತರವೆಂಬುದೇ ಸರಿ. ವ್ಯಾಕರಣದ ನಿಯಮಗಳು ಮೊದಲೇ ಇದ್ದವು. ಅವು ನಮ್ಮ ಗಮನಕ್ಕೆ ಬಂದುದು ಅನಂತರ. ಗಮನಕ್ಕೆ ಬಂದ ಮೇಲೆ ದಾಖಲೆ. ಹಾಗಾಗಿ ವ್ಯಾಕರಣದ ರಚನೆ ನಂತರದ ಕಾಲದಲ್ಲಾಗುತ್ತದೆ. ಆದರೆ ವ್ಯಾಕರಣವಿಲ್ಲದೆ ಭಾಷೆ ಇರಲಾರದು. ಅದು ವ್ಯಾಕರಣದ ಮಹತ್ವ. ಪಾಣಿನಿಯ ವ್ಯಾಕರಣವು ಕೇವಲ ನಿಯಮಗಳ ಸಂಕಲನವಲ್ಲ. ಅದು ಭಾಷೆಯ ಶೋಧನೆ. ನಿಯಮಗಳನ್ನು ಹೇಳುವುದರ ಜೊತೆಗೆ ಅದರ ಹಿಂದಿನ ತಾತ್ವಿಕತೆಯ ಬಗೆಗೂ ಅಲ್ಲಿ ಚರ್ಚೆಯಿದೆ. ಪಾಣಿನಿಯ ಅಷ್ಟಾಧ್ಯಾಯಿಯು ಸೂತ್ರರೂಪದ್ದು. ಅದರ ಮೇಲೆ ಕಾತ್ಯಾಯನನ ವಾರ್ತಿಕವಿದೆ. ಅದು ಸಾಕಷ್ಟು ತಿದ್ದುಪಡಿಗಳನ್ನು ಮಾಡಿದೆ. ಇವೆರಡನ್ನು ಮೀರಿಸಿದ್ದು ಪತಂಜಲಿಯ ಮಹಾಭಾಷ್ಯ. ಪಾಣಿನಿಯ ಒಂದೊಂದು ಸೂತ್ರವನ್ನೂ ಅವನು ವಿವರಿಸುವ ಬಗೆಯು ಬೆರಗು ಹುಟ್ಟಿಸುತ್ತದೆ. ಸೂತ್ರಗಳನ್ನು ಕುರಿತು ಚರ್ಚಿಸುವಾಗ ಅದರ ಹಲವಾರು ಮಗ್ಗುಲುಗಳನ್ನು ತೆರೆದು ತೋರುತ್ತ ನಡೆದಂತೆ ಭಾಷಾ ಪ್ರಪಂಚದ ವಿಸ್ತಾರ. ವೈವಿಧ್ಯಗಳ ದರ್ಶನವಾಗುತ್ತದೆ. ನಿಯಮಗಳ ಹಿಂದಿನ ತಾತ್ವಿಕ ನೆಲೆಗಳನ್ನು ಪತಂಜಲಿಯ ಬೆನ್ನುಹತ್ತಿ ಕಂಡುಕೊಳ್ಳುತ್ತ ಹೋದಂತೆ ಭಾಷೆಯ ಬಗೆಗಿನ ಗೌರವ ಹೆಚ್ಚುತ್ತ ಹೋಗುತ್ತದೆ. ವ್ಯಾಕರಣಕ್ಕೆ ಶಾಸ್ತ್ರವೆಂಬ ಗೌರವ ಸಿಕ್ಕಿರುವುದು ಪತಂಜಲಿಯ ಮಹಾಭಾಷ್ಯದ ಕಾರಣದಿಂದಲೆಂದರೆ ತಪ್ಪಲ್ಲ.

ವ್ಯಾಕರಣವನ್ನು ಶಾಸ್ತ್ರದ ಮಟ್ಟದಿಂದ ಮೇಲಕ್ಕೇರಿಸಿ ಅದನ್ನು ದರ್ಶನಗಳ ವರ್ಗಕ್ಕೆ ಸೇರಿಸುವಂತೆ ಮಾಡಿದವನು ಭರ್ತೃಹರಿ. ಅವನ ವಾಕ್ಯಪದೀಯವು ಭಾಷಾತತ್ವಶಾಸ್ತ್ರಕ್ಕೆ ನಾಂದಿ ಹಾಡಿತು. ಪತಂಜಲಿಯು ಒಂದು ಶಬ್ದವನ್ನು ಚೆನ್ನಾಗಿ ಅರಿತು, ಅದನ್ನು ಪ್ರಯೋಗಿಸಿದರೆ, ಅದು ಸ್ವರ್ಗಲೋಕದಲ್ಲಿ ಕಾಮಧೇನುವಿನಂತೆ ಇಷ್ಟಾರ್ಥಗಳನ್ನು ಕೊಡುತ್ತದೆಯೆಂದರೆ ಭರ್ತೃಹರಿಯು ಇನ್ನೂ ಮುಂದಕ್ಕೆ ಹೋಗಿ ಶಬ್ದವೇ ವಿಶ್ವವನ್ನು ಸೃಜಿಸುವ ಚೈತನ್ಯವಾದ ಬ್ರಹ್ಮವೆನ್ನುತ್ತಾನೆ. ಅವನ ದೃಷ್ಟಿಯಲ್ಲಿ ಪ್ರಪಂಚವೆನ್ನುವುದು ವಾಸ್ತವವಲ್ಲ. ಇದು ತೋರಿಕೆ ಮಾತ್ರ. ನಿಜವಾದುದೆಂದರೆ ಶಬ್ದ. ಅದೇ ಅಕ್ಷರತತ್ವ; ಬ್ರಹ್ಮ. ಅದೇ ಪ್ರಪಂಚವಾಗಿ ಬೇರೆರೂಪವನ್ನು ತಳೆದು ತೋರುತ್ತದೆ. ಆ ಶಬ್ದ ತತ್ವದ ಸಾಕ್ಷಾತ್ಕಾರವೇ ಮೋಕ್ಷವಾಗುತ್ತದೆ. ಶಬ್ದಾದ್ವೈತವೆಂದು ಪ್ರಸಿದ್ಧವಾದ ಈ ದರ್ಶನವು ಭಾಷಾಶಾಸ್ತ್ರದ ಸಮಸ್ಯೆಗಳನ್ನೆಲ್ಲ ಚರ್ಚಿಸುತ್ತದೆ.

ಅಷ್ಟಾಧ್ಯಾಯಿಯ ಅಧ್ಯಯನವು ಕಡ್ಡಾಯವಾಗಿದ್ದ ಕಾಲ ಅದು. ಹಿಂದೆಯೇ ಹೇಳಿದಂತೆ ಶಾಸ್ತ್ರಾಧ್ಯಯನದ ಬಾಗಿಲು ಅದು. ಆ ಬಾಗಿಲನ್ನು ತೆರೆದು ಒಳಗೆ



ಪ್ರವೇಶಿಸುವಾಗ ಅದರ ಪ್ರಭಾವಕ್ಕೊಳಗಾದವರು ಬಹಳ. ಭಾರತೀಯ ದಾರ್ಶನಿಕರ ಚಿಂತನೆಗಳ ಮೇಲೆಲ್ಲ ಪಾಣಿನಿಯ ಪ್ರಭಾವವಿದ್ದೇ ಇದೆ. ಕಾಲಾನುಕ್ರಮದಲ್ಲಿಯೂ ಅವನು ದರ್ಶನಗಳ ಪ್ರವರ್ತಕರಾದ ಗೌತಮ, ಕಣಾದ, ಜೈಮಿನಿ ಮುಂತಾದವರಿಗಿಂತ ಪ್ರಾಚೀನವೆನ್ನುವುದನ್ನೂ ನೆನೆಯಬಹುದು. ಪಾಣಿನಿಯನ್ನು ಭಾರತದ ಯೂಕ್ಲಿಡ್ ಎಂದು ವರ್ಣಿಸಲಾಗುತ್ತಿದೆ. ಅಂದರೆ ಯುರೋಪಿನ ಚಿಂತಕರ ಮೇಲೆ ಯೂಕ್ಲಿಡ್ ಪ್ರಭಾವ ಬೀರಿದಂತೆ ಭಾರತೀಯ ಚಿಂತಕರ ಮೇಲೆ ಪಾಣಿನಿಯ ಪ್ರಭಾವವಿದೆಯೆಂದು ಅರ್ಥ. ಅಷ್ಟೇ ಅಲ್ಲ. ಆಧುನಿಕ ಭಾಷಾಶಾಸ್ತ್ರವು ಕೂಡ ಪಾಣಿನಿಯ ಪರೋಕ್ಷ ಪ್ರಭಾವದಿಂದ ಆವಿರ್ಭವಿಸಿದೆಯೆಂಬುದನ್ನೂ ಇಲ್ಲಿ ನೆನೆಯಬಹುದು. ವೈಯಾಕರಣರ ಚಿಂತನೆಗಳು ಇತರ ದಾರ್ಶನಿಕರು ಭಾಷೆಯನ್ನು ಗಂಭೀರವಾಗಿ ಪರಿಗಣಿಸುವಂತೆ ಮಾಡಿದವು.

ಹಾಗಿದ್ದರೂ ದರ್ಶನಗಳಲ್ಲಿ ಭಾಷಾ ವಿಷಯಕವಾದ ಚರ್ಚೆಗೆ ಇದನ್ನು ನೇರವಾದ ಕಾರಣವೆಂದು ಪರಿಗಣಿಸುವಂತಿಲ್ಲ. ಅದೇನಿದ್ದರೂ ಭಾಷೆಯ ಬಗೆಗೆ ಗೌರವ-ಪ್ರೀತಿಗಳನ್ನು ಹುಟ್ಟುಹಾಕುವುದಕ್ಕೆ ಕಾರಣವಾದ ಸಂಗತಿ. ಭಾಷಾ ವಿಷಯಕವಾದ ಚರ್ಚೆಗೆ ನೇರವಾಗಿ ಕಾರಣವಾದದ್ದು ಭಾರತೀಯ ದರ್ಶನಗಳ ವಿಶಿಷ್ಟವಾದ ಸ್ವರೂಪ. ಭಾರತೀಯ ದರ್ಶನಗಳಲ್ಲಿ ಯಾವ ದರ್ಶನವೂ ತಾನು ಸ್ವತಂತ್ರವೆಂದು ಹೇಳಿಕೊಳ್ಳುವುದಿಲ್ಲ. ಆಸ್ತಿಕದರ್ಶನಗಳೆಲ್ಲವೂ ತಾವು ವೇದಮೂಲದವುಗಳೆಂದು ಹೇಳಲು ಇಷ್ಟಪಡುತ್ತವೆ ಅಥವಾ ವೇದವು ಪ್ರಮಾಣ ವಾಗಿದೆಯೆಂದು ಹೇಳಿಕೊಳ್ಳುವ ಮೂಲಕ ಅದಕ್ಕೆ ಗೌರವವನ್ನು ಸಲ್ಲಿಸುತ್ತವೆ. ನಾಸ್ತಿಕ ದರ್ಶನಗಳಿಗೂ ತಮ್ಮವೇ ಆದ ಆಗಮಗಳಿವೆ. ಬೌದ್ಧರಿಗೆ ಬುದ್ಧನ ವಚನಗಳು, ಜೈನರಿಗೆ ಮಹಾವೀರನ ಬೋಧನೆಗಳು ಪ್ರಮಾಣವಾಗಿವೆ. ಚಾರ್ವಾಕರು ಕೂಡ ಬೃಹಸ್ಪತಿಯ ಸೂತ್ರಗಳನ್ನು ಆಧಾರವಾಗಿಟ್ಟುಕೊಂಡೇ ಹೊರಡುತ್ತಾರೆ. ಹಾಗಾಗಿ ದಾರ್ಶನಿಕರು ತಮ್ಮ ವಿಚಾರಗಳು ನೂತನವಾದವುಗಳಾಗಿದ್ದರೂ ಅವುಗಳ ಬೀಜವು ಮೂಲದಲ್ಲಿಯೇ ಇದೆಯೆಂಬುದನ್ನು ತೋರಿಸಲು ಹವಣಿಸುತ್ತಾರೆ.

ವೇದಾಂತದರ್ಶನದ ಪ್ರಸಿದ್ಧವಾದ ಮೂರು ಪಂಥಗಳನ್ನು ನೋಡಿ. ಅದ್ವೈತ, ವಿಶಿಷ್ಟಾದ್ವೈತ ಮತ್ತು ದ್ವೈತಗಳಿಗೆಲ್ಲ ಉಪನಿಷತ್ತಿನ 'ತತ್ವಮಸಿ' ಎಂಬ ವಾಕ್ಯವೇ ಪ್ರಮಾಣ. ಆದರೆ ಈ ಪಂಥಗಳು ತಮ್ಮ ನಿಲುವಿಗೆ ತಕ್ಕಂತೆ ವಾಕ್ಯಕ್ಕೆ ಅರ್ಥವನ್ನು ಹೇಳುತ್ತವೆ. ಶಂಕರಾಚಾರ್ಯರು 'ತತ್ + ತ್ವಂ + ಅಸಿ' ಎಂದು ವಿಗ್ರಹಿಸಿ 'ಅದು ಎಂದರೆ ಬ್ರಹ್ಮವು ನೀನು ಅಂದರೆ ಜೀವನು ಆಗಿರುವೆ' ಎಂದು ಹೇಳಿ ಬ್ರಹ್ಮ ಮತ್ತು ಜೀವಗಳೆರಡೂ ಒಂದೇ ಎಂದು ಸಾರಿ ಅದ್ವೈತವೇ ವಾಕ್ಯದ ಅರ್ಥವೆನ್ನುತ್ತಾರೆ.

ಮುಂದೆ ಈ ವಾಕ್ಯವನ್ನು ಸಮರ್ಪಕವಾಗಿ ವಿವರಿಸಲು 'ಜಹದಜಹಲ್ಲಕ್ಷಣೆ'ಯೆಂಬ ಲಕ್ಷಣೆಯನ್ನೂ ಹೇಳಿದ್ದಾರೆ. ಅದನ್ನು ಭಾಷಾಶಾಸ್ತ್ರಕ್ಕೆ ವೇದಾಂತದ ಕೊಡುಗೆಯೆನ್ನಬಹುದು. ರಾಮಾನುಜರು ವ್ಯಾಕರಣದ ಬಲದ ಮೇಲೆ 'ತತ್' ಎಂಬ ಪದವು 'ತಸ್ಯ' (ಅವನ) ಎಂಬ ಅರ್ಥದ್ದಾಗಿದೆಯೆಂಬುದನ್ನು ಸಾಧಿಸಿ ತಮ್ಮ ವಿಶಿಷ್ಟಾದ್ವೈತದ ನಿಲುವೆುಯನ್ನೇ ಆ ವಾಕ್ಯವು ಹೇಳುವುದೆನ್ನುತ್ತಾರೆ. ಮಧ್ವಾಚಾರ್ಯರು ಆ ಮಾತನ್ನು ಪೂರ್ತಿಯಾಗಿ ತೆಗೆದುಕೊಂಡು ಅಂದರೆ 'ಶ್ವೇತಕೇತೋ ತತ್ತ್ವಮಸಿ' ಎಂದಿಟ್ಟುಕೊಂಡು 'ಅತತ್ತ್ವಮಸಿ' – 'ಅದು (ಬ್ರಹ್ಮವು) ನೀನು (ಜೀವನು) ಅಲ್ಲ' ಎಂಬ ಅರ್ಥದಲ್ಲಿ ವಾಕ್ಯವನ್ನು ಅರ್ಥಮಾಡಿಕೊಳ್ಳಬೇಕೆಂದು ಯುಕ್ತಿಯುಕ್ತವಾಗಿ ವಾದಿಸಿ ದ್ವೈತವನ್ನು ಸಮರ್ಥಿಸಿ ಕೊಂಡಿದ್ದಾರೆ. ಇದಕ್ಕೆ ಕಾರಣವೆಂದರೆ ತಾನು ಹೇಳುವ ಸಿದ್ಧಾಂತವು ಹೊಸದಲ್ಲ; ಅದು ಈಗಾಗಲೇ ಪ್ರಾಚೀನ ಗ್ರಂಥಗಳಲ್ಲಿದೆಯೆಂಬುದನ್ನು ಹೇಳಬೇಕಾಗಿತ್ತು. ಅದು ಆ ಕಾಲ. ಅವರು ತಮ್ಮದೆಂಬುದನ್ನು ಮರೆಸಿ ಅದು ಬೇರೆಯವರದೆಂದು ಹೇಳುತ್ತಿದ್ದರು. ಈಗ ಕಾಲ ಬದಲಾಯಿಸಿದೆ. ಬೇರೆಯವರದೆಂಬುದನ್ನು ಮುಚ್ಚಿಟ್ಟು ಅದು ನಮ್ಮದೆಂದು ಹೇಳಿಕೊಂಡು ಗೌರವ ಪಡೆಯುತ್ತೇವೆ. ಮುಂದಿನ ಕಾಲ ಯಾವುದೋ?

ವೇದ, ಆಗಮಗಳೆಲ್ಲ ಭಾಷಿಕ ರಚನೆಗಳಾದುದರಿಂದ ಅವುಗಳನ್ನು ವಿಶ್ಲೇಷಿಸುವುದಕ್ಕೆ ಭಾಷೆಯ ನೆರವು ಅವಶ್ಯವಾಯಿತು. ಅಷ್ಟೇ ಅಲ್ಲ, ಅವುಗಳನ್ನು ಜ್ಞಾನದ ಸಾಧನಗಳಲ್ಲಿ ಸೇರಿಸಬೇಕಾದ ಅಗತ್ಯವುಂಟಾಯಿತು. ಜ್ಞಾನದ ಸಾಧನ ಅಥವಾ ಪ್ರಮಾಣಗಳಾದ ಪ್ರತ್ಯಕ್ಷ ಮತ್ತು ಅನುಮಾನಗಳಂತೆ ಶಬ್ದವೂ ಪ್ರಮಾಣವೆನಿಸಿತು. ಪ್ರಮಾಣಗಳ ವರ್ಗಕ್ಕೆ ಶಬ್ದ ಅಥವಾ ಭಾಷೆಯನ್ನು ಸೇರಿಸಿದ ಮೇಲೆ ಭಾಷೆಗೆ ಸಂಬಂಧಿಸಿದ ವಿಚಾರಗಳನ್ನು ಚರ್ಚಿಸುವುದು ಸಹಜವಾಯಿತು. ಯಾಕೆಂದರೆ ಜ್ಞಾನಮೀಮಾಂಸೆ ಅಥವಾ ಪ್ರಮಾಣಮೀಮಾಂಸೆ (epistemology) ಯನ್ನು ತತ್ತ್ವಶಾಸ್ತ್ರದ ಒಂದು ಪ್ರಮುಖ ವಿಷಯವನ್ನಾಗಿ ಸ್ವೀಕರಿಸಲಾಗಿದೆ. ಜ್ಞಾನವನ್ನು ಒಪ್ಪುವ ಮುನ್ನ ಆ ಜ್ಞಾನವನ್ನೊದಗಿಸಿದ ಸಾಧನದ ಬಗೆಗೆ, ಅದರ ವಿಶ್ವಾಸಾರ್ಹತೆಯ ಬಗೆಗೆ ಚರ್ಚೆ ನಡೆಯುವುದು ಸ್ವಾಭಾವಿಕವೇ ಆಗಿದೆ.

ಹಾಗೆಂದರೆ ಎಲ್ಲ ದಾರ್ಶನಿಕರೂ ಶಬ್ದವನ್ನು ಪ್ರಮಾಣಗಳಲ್ಲಿ ಸೇರಿಸಿದ್ದಾರೆಂದೇನೂ ಅಲ್ಲ. ಆದರೆ ಈ ಬಗೆಗೆ ವಿಶೇಷವಾದ ಆಗ್ರಹವಿದ್ದುದು ಮೀಮಾಂಸಕರಿಗೆ. ಪೂರ್ವ ಮೀಮಾಂಸಾ ಅಥವಾ ಮೀಮಾಂಸಾಶಾಸ್ತ್ರವು ವೇದದ ಅರ್ಥವನ್ನು ತಿಳಿಯಲು ಹೊರಟ ಪ್ರಾಚೀನ ದರ್ಶನ. ಇಲ್ಲಿ ಅರ್ಥವೆಂದರೆ ಕೇವಲ ಶಬ್ದಾರ್ಥವಲ್ಲ; ಪ್ರಯೋಜನ. ವೇದವನ್ನು ನಾವು ಯಾಕೆ ಅಧ್ಯಯನ ಮಾಡಬೇಕು? ಅದರಿಂದ ಪ್ರಯೋಜನವೇನು? ಆ ಪ್ರಯೋಜನವನ್ನು ಪಡೆಯುವುದು ಹೇಗೆ? ಎಂದು ಮುಂತಾಗಿ ಪ್ರಶ್ನೆಗಳನ್ನು ಕೇಳಿಕೊಂಡು ಅದಕ್ಕೆ ಉತ್ತರವನ್ನು ಹುಡುಕ ಹೊರಟ ದರ್ಶನ ಅದು. ಆ ದರ್ಶನವು ಕಂಡುಕೊಂಡು ಸಂಗತಿಗಳನ್ನು ಸಂಕ್ಷಿಪ್ತವಾಗಿಯಾದರೂ ಗಮನಿಸಬೇಕಾಗುತ್ತದೆ.



ವೇದದಲ್ಲಿ ನಾಲ್ಕು ಭಾಗಗಳಿವೆ – ಮಂತ್ರ, ಬ್ರಾಹ್ಮಣ, ಆರಣ್ಯಕ ಮತ್ತು ಉಪನಿಷತ್ತು ಎಂದು. ಈ ನಾಲ್ಕನ್ನೂ ಶ್ರುತಿ ಅಥವಾ ವೇದವೆಂದೇ ಪರಿಗಣಿಸುತ್ತಾರೆ. ಆದರೆ ಮೀಮಾಂಸಕರು ಆರಣ್ಯಕ ಮತ್ತು ಉಪನಿಷತ್ತುಗಳನ್ನು ಗೌಣವೆನ್ನುತ್ತಾರೆ. ಯಾಕೆಂದರೆ ಅಲ್ಲಿನ ತತ್ತ್ವಚಿಂತನೆಗಳು ನಮಗೆ ಕರ್ತವ್ಯವನ್ನು ಬೋಧಿಸುವುದಿಲ್ಲ. ಆದರೆ ಮಂತ್ರ ಹಾಗೂ ಬ್ರಾಹ್ಮಣಗಳು ಹಾಗಲ್ಲ. ಅವು ಕರ್ಮವನ್ನು ಬೋಧಿಸುತ್ತವೆ. ವಿಶೇಷವಾಗಿ ಬ್ರಾಹ್ಮಣ ಗ್ರಂಥಗಳಲ್ಲಿ ನಾವು ಮಾಡಬೇಕಾದ ಯಜ್ಞ-ಯಾಗಾದಿ ಕರ್ಮಗಳ ಬಗೆಗೆ ಹೇಳಲಾಗಿದೆ. ಈ ಕರ್ಮಗಳನ್ನು ಆಚರಿಸುವುದರಿಂದ ಧರ್ಮಪ್ರಾಪ್ತಿಯಾಗಿ ಇಷ್ಟಾರ್ಥವನ್ನು ಪಡೆಯಬಹುದು. ಹಾಗಾಗಿ ಕರ್ಮಾನುಷ್ಠಾನವು ಅತ್ಯಂತ ಮಹತ್ತ್ವದ್ದಾಗುತ್ತದೆ. ಕರ್ಮವು ಫಲದಾಯಕವೆನಿಸುವಾಗ ಅದನ್ನು ಮಾಡುವ ವಿಧಾನವೂ ಅಷ್ಟೇ ಮುಖ್ಯವಾಗುತ್ತದೆ. ಕರ್ಮವನ್ನು ಸರಿಯಾಗಿ ಮಾಡದಿದ್ದರೆ ಇಷ್ಟಾರ್ಥಪ್ರಾಪ್ತಿ ಯಾಗುವುದಿಲ್ಲ. ಅದಕ್ಕಾಗಿ ಯಜ್ಞ-ಯಾಗಾದಿ ಕರ್ಮಗಳನ್ನು ಸರಿಯಾಗಿ ಅಂದರೆ ವೇದೋಕ್ತ ವಿಧಾನದಲ್ಲಿಯೇ ಮಾಡಬೇಕು. ಹೀಗೆ ಮಾಡುವುದಕ್ಕೆ ವೇದವಾಕ್ಯಗಳನ್ನು ಸರಿಯಾಗಿ ತಿಳಿಯುವುದು ಅವಶ್ಯ.

ಅಂದರೆ ಯಜ್ಞ-ಯಾಗಾದಿ ಕರ್ಮಗಳ ವಿಧಿ-ವಿಧಾನಗಳನ್ನು ಚರ್ಚಿಸುವುದೇ ಮೀಮಾಂಸೆಯ ಗುರಿ. ಅಷ್ಟೇ ಆದರೆ ಅದನ್ನು ಶ್ರೌತಸೂತ್ರಗಳೂ ಮಾಡಿವೆ. ಹಾಗೆ ನೋಡಿದರೆ ಶ್ರೌತಸೂತ್ರಗಳ ಮುಂದುವರಿಕೆಯೇ ಮೀಮಾಂಸೆಯಾಗಿದೆಯೆಂದು ಹೇಳಬಹುದು. ಆದರೆ ಮೀಮಾಂಸೆಯು ಕೇವಲ ವಿಧಿ-ವಿಧಾನಗಳ ಚರ್ಚೆಗೆ ತನ್ನನ್ನು ಸೀಮಿತಿಗೊಳಿಸಿಕೊಳ್ಳದೆ ಇತರ ದಾರ್ಶನಿಕ ಸಮಸ್ಯೆಗಳನ್ನು ಕುರಿತೂ ಚರ್ಚಿಸುತ್ತದೆ. ತನ್ನ ನಿಲುವೆುಯನ್ನು ಸಮರ್ಥಿಸಿಕೊಳ್ಳಲು ಎಲ್ಲ ಉಪಾಯಗಳನ್ನೂ ಕಂಡುಕೊಳ್ಳುತ್ತದೆ. ಇತರ ಸಿದ್ಧಾಂತಗಳನ್ನು ಪರಾಮರ್ಶಿಸಿ, ಅವುಗಳ ದೌರ್ಬಲ್ಯವನ್ನು ಎತ್ತಿ ತೋರುತ್ತದೆ. ತನ್ನ ನಿಲುವಿನ ತರ್ಕಬದ್ಧತೆಯನ್ನು ಸ್ಥಾಪಿಸುತ್ತದೆ.

ಈ ಸಂದರ್ಭದಲ್ಲಿ ಅದು ವೇದದ ವಿಶ್ವಾಸಾರ್ಹತೆ ಅಥವಾ ಪ್ರಾಮಾಣ್ಯವನ್ನು ಕುರಿತು ಹಲವಾರು ಪ್ರಶ್ನೆಗಳನ್ನು ಎದುರಿಸಬೇಕಾಯಿತು. ವೇದವನ್ನು ಪ್ರಮಾಣವೆಂದು ಸಾಧಿಸುವುದಕ್ಕಾಗಿ ಅದು ಶಬ್ದ ಅಥವಾ ಭಾಷೆಯನ್ನು ಜ್ಞಾನಸಾಧನವೆಂದು ನಿರೂಪಿಸುತ್ತದೆ. ಪ್ರತ್ಯಕ್ಷ ಮತ್ತು ಅನುಮಾನಗಳು ಒದಗಿಸುವ ಜ್ಞಾನಕ್ಕಿಂತ ಭಿನ್ನವಾದ

ಜ್ಞಾನವನ್ನು ನಾವು ಶಬ್ದದಿಂದ ಪಡೆಯುತ್ತೇವೆ. ಲೌಕಿಕ ವಿಷಯಗಳಲ್ಲಿ ಹಾಗೆ ಪಡೆದ ಜ್ಞಾನವನ್ನು ಇತರ ಪ್ರಮಾಣಗಳಿಂದ ಪರೀಕ್ಷಿಸುವ ಅವಕಾಶಗಳಿವೆಯಾದರೂ ಅಲೌಕಿಕ ವಿಚಾರಗಳಲ್ಲಿ ಅದು ಸಾಧ್ಯವಿಲ್ಲ. ಈ ದೃಷ್ಟಿಯಿಂದ ಅದಕ್ಕೆ ಪ್ರಮಾಣದ ಸ್ಥಾನವನ್ನು ನೀಡಬೇಕೆಂಬುದು ಅದರ ಆಗ್ರಹ.

ಶಬ್ದವನ್ನು ಪ್ರತ್ಯೇಕವಾದ ಪ್ರಮಾಣವೆಂದು ಸಿದ್ಧಪಡಿಸಿದ ನಂತರದಲ್ಲಿ ಆ ಪ್ರಮಾಣದಲ್ಲಿ ಕುರಿತು ಸಾಕಷ್ಟು ವಿಸ್ತಾರವಾಗಿ ಚರ್ಚಿಸಲಾಗಿದೆ. ಶಬ್ದ, ಅರ್ಥ. ಅವುಗಳ ಸಂಬಂಧ, ವಾಕ್ಯ, ವಾಕ್ಯದ ಅರ್ಥ, ಅರ್ಥದ ಪ್ರಕಾರಗಳು, ಅರ್ಥವನ್ನು ಗ್ರಹಿಸುವ ಬಗೆ - ಹೀಗೆ ಭಾಷೆಗೆ ಸಂಬಂಧಿಸಿದ ಹಲವಾರು ವಿಚಾರಗಳನ್ನು ಅದು ಚರ್ಚಿಸುವುದು. ಅರ್ಥವಿಜ್ಞಾನಕ್ಕೆ ಮೀಮಾಂಸಾಶಾಸ್ತ್ರದ ಕೊಡುಗೆಯು ಮಹತ್ತರ. ಶಬ್ದಪ್ರಮಾಣವೇ ಮೀಮಾಂಸೆಗೆ ಆಧಾರ. ಅದನ್ನು ರಕ್ಷಿಸಿಕೊಳ್ಳಲೇ ಬೇಕಾದುದು ಅನಿವಾರ್ಯವಾಗಿತ್ತಾದುದರಿಂದ ಇತರ ದಾರ್ಶನಿಕರಿಗಿಂತ ಹೆಚ್ಚು ಕಾಳಜಿಯಿಂದ ಶಬ್ದಪ್ರಮಾಣವನ್ನು ವಿವೇಚಿಸಿದ್ದಾರೆ.

ಮೀಮಾಂಸಾದರ್ಶನದಂತೆಯೇ ಶಬ್ದವನ್ನು ಪ್ರಮಾಣವೆಂದು ಸ್ವೀಕರಿಸಿದ್ದು ನ್ಯಾಯದರ್ಶನ. ನ್ಯಾಯದರ್ಶನವು ಮುಖ್ಯವಾಗಿ ಪ್ರಮಾಣಶಾಸ್ತ್ರ. ಜ್ಞಾನದ ಸಾಧನಗಳ ನಿರೂಪಣೆಯು ಯಥಾರ್ಥಜ್ಞಾನಪ್ರಾಪ್ತಿ ಮತ್ತು ಅಯಥಾರ್ಥಜ್ಞಾನದಿಂದ ತಪ್ಪಿಸಿಕೊಳ್ಳಲಿಕ್ಕಾಗಿ. ಇದು ಭಾರತೀಯ ತರ್ಕಶಾಸ್ತ್ರವೆನಿಸಿದೆ. ಪ್ರಪಂಚವನ್ನು ವಿವೇಚಿಸುವಾಗ ಅದು ವೈಶೇಷಿಕದ ನೆರವನ್ನು ಪಡೆಯುತ್ತದೆ. ಶಬ್ದವನ್ನು ಪ್ರಮಾಣವೆಂದು ಸ್ವೀಕರಿಸುವುದು ಅವರ ದರ್ಶನಕ್ಕೆ ಅಗತ್ಯವಾಗಿರಲಿಲ್ಲ. ಆದರೆ ಶಬ್ದವನ್ನು ಜ್ಞಾನದ ಸಾಧನವಲ್ಲವೆಂದು ತಿರಸ್ಕರಿಸಲು ಮನಸ್ಸು ಒಪ್ಪಲಿಲ್ಲ. ಶಬ್ದದಿಂದ ಅಥವಾ ಭಾಷೆಯಿಂದ ನಾವು ಗಳಿಸುವ ಜ್ಞಾನವು ಅಪಾರ. ಪ್ರತ್ಯಕ್ಷ ಮತ್ತು ಅನುಮಾನಗಳ ಕ್ಷೇತ್ರವು ಮಿತವಾದದ್ದು. ಶಬ್ದವನ್ನು ಒಪ್ಪಿಕೊಂಡರೆ ಜ್ಞಾನದ ಕ್ಷೇತ್ರವು ವಿಸ್ತರಿಸುತ್ತದೆಯೆಂಬುದು ಅವರ ಅಭಿಪ್ರಾಯ. ಅವರು ವೇದವನ್ನು ಮಾತ್ರ ಶಬ್ದ ಪ್ರಮಾಣದೊಳಗೆ ಸೇರಿಸಲಿಲ್ಲ. ಲೌಕಿಕವಾದ ಮಾತುಗಳನ್ನು ಸೇರಿಸಿದರು. ಅವರ ಪ್ರಕಾರ ಆಪ್ತವಾಕ್ಯವು ಶಬ್ದ. ಆಪ್ತರು ಯಾರು? ಆಪ್ತನೆಂದರೆ ಯಥಾರ್ಥವನ್ನು ಹೇಳುವವನು ಎಂದು ವಿವರಿಸಿದ್ದಾರೆ. ನಮ್ಮ ನಂಬಿಗೆಗೆ ಯೋಗ್ಯನಾದ ವ್ಯಕ್ತಿಯು ಆಪ್ತನೆನಿಸುತ್ತಾನೆ. ಅವನು ಸತ್ಯವನ್ನು ನುಡಿಯುವವನು ಅಂದರೆ ಆಪ್ತತೆಯು ತೀರ್ಮಾನವಾಗುವುದು ಅವನ ಮಾತಿನ ಸತ್ಯತೆಯನ್ನು ಆಧರಿಸಿಯೇ ಹೊರತು ಇತರ ಅಂಶಗಳಿಂದಲ್ಲ. ಅವನು ದೇವನೂ ಆಗಬಹುದು, ಸಾಮಾನ್ಯ ಮನುಷ್ಯನೂ ಆಗಬಹುದು. ಅಂಥವನ ಮಾತನ್ನು ಪ್ರಮಾಣವೆಂದು ಸ್ವೀಕರಿಸಬಹುದು.



ನ್ಯಾಯದರ್ಶನವು ವೇದವನ್ನು ಪ್ರಮಾಣವೆಂದು ಸ್ವೀಕರಿಸುತ್ತದೆ. ಆದರೆ ಮೀಮಾಂಸಕರಂತೆ ಅದು ವೇದವಾಗಿದೆಯೆಂದಲ್ಲ. ಬದಲಿಗೆ ಅದು ಈಶ್ವರನ ರಚನೆ. ಈಶ್ವರನ ಸರ್ವಜ್ಞ; ಅವನ ಮಾತುಗಳಾದ್ದರಿಂದ ಅವು ಸ್ವೀಕಾರ್ಯ. ಇದು ವ್ಯವಹಾರಕ್ಕೆ. ಪ್ರಾಮಾಣ್ಯವನ್ನು ಪರೀಕ್ಷಿಸಿಯೇ ಒಪ್ಪಿಕೊಳ್ಳಬೇಕೆಂಬುದು ನ್ಯಾಯದ ನಿಲುವು. ಪರೀಕ್ಷೆ ಗೊಳಪಡಿಸಿ ಸತ್ಯತೆಯನ್ನು ತಿಳಿಯಬೇಕು. ನಮಗೆ ದೊರೆತ ಜ್ಞಾನವು ತನ್ನಷ್ಟಕ್ಕೆ ತಾನು ಸತ್ಯವೆನಿಸುವುದಿಲ್ಲ. ಪ್ರತ್ಯಕ್ಷ ಕಂಡರೆ ಸಾಲದು, ಪ್ರಮಾಣಿಸಿಯೂ ನೋಡಬೇಕು. ಪ್ರಾಮಾಣ್ಯ ಅಥವಾ ವಿಶ್ವಾಸಾರ್ಹತೆಯನ್ನು ಮತ್ತೊಂದು ವಿಧಾನದಿಂದ ಪರೀಕ್ಷಿಸಬೇಕು ಎಂದು ಅಭಿಪ್ರಾಯ ಪಡುತ್ತಾರೆ. ಇದಕ್ಕೆ ಪರತಃ ಪ್ರಾಮಾಣ್ಯವಾದವೆಂದು ಹೆಸರು. ಉದಾ : ನಮ್ಮೆದುರಿಗೆ ಗ್ಲಾಸಿನಲ್ಲಿದ್ದುದು ನೀರೇ ಹೌದಾದರೆ ಬಾಯಾರಿಕೆಯನ್ನು ಹಿಂಗಿಸುತ್ತದೆ. ಅದು ನೀರು ಎಂಬುದನ್ನು ತಿಳಿಯಲು ಕುಡಿದು ನೋಡಬೇಕಾಗುತ್ತದೆಯೆಂಬುದು ಈ ವಾದದ ಸಾರ. ಇದು ವಿಜ್ಞಾನದ ವಿಧಾನ. ಹಾಗಾಗಿ ವೇದದಲ್ಲಿ ಹೇಳಿದ್ದೆಲ್ಲ ಸತ್ಯವೆಂದು ಅವರು ಹೇಳುವುದಿಲ್ಲ. ಸತ್ಯವಾದುದನ್ನೇ ವೇದದಲ್ಲಿ ಹೇಳಿದೆಯೆನ್ನುತ್ತಾರೆ.

ಭಾಷೆಯ ವಿಚಾರಕ್ಕೆ ಬಂದಾಗ ನೈಯಾಯಿಕರು ಬಹಳಷ್ಟು ವಿಷಯಗಳಲ್ಲಿ ಮೀಮಾಂಸಕರಿಗೆ ಪ್ರತಿಪಕ್ಷದಲ್ಲಿ ನಿಂತಿದ್ದಾರೆ. ಶಬ್ದವನ್ನು ಪ್ರಮಾಣವೆಂದು ಒಪ್ಪಿ ಅದನ್ನು ವಿವೇಚಿಸುವಾಗ ಮೀಮಾಂಸಕರ ಅನೇಕ ಸಿದ್ಧಾಂತಗಳನ್ನು ವಿರೋಧಿಸಿದ್ದಾರೆ. ಭಾಷೆಯನ್ನು ವ್ಯಾವಹಾರಿಕ ಹಾಗೂ ವಾಸ್ತವಿಕ ದೃಷ್ಟಿಕೋನದಿಂದ ನೋಡಿದ್ದಾರೆ. ಭಾರತೀಯ ದರ್ಶನಗಳಲ್ಲಿ ಭಾಷೆಯನ್ನು ಕುರಿತು ಬರೆಯುವಾಗ ಮೀಮಾಂಸಕರು ಹಾಗೂ ನೈಯಾಯಿಕರಲ್ಲಿ ನಡೆದ ವಾದ-ವಿವಾದಗಳೇ ಹೆಚ್ಚು ಸ್ಥಳವನ್ನು ಆಕ್ರಮಿಸುತ್ತವೆ.

ವೇದಾಂತಕ್ಕೆ ಉತ್ತರ ಮೀಮಾಂಸೆಯೆಂಬುದು ಮತ್ತೊಂದು ಹೆಸರು. ವೇದದ ಉತ್ತರ ಭಾಗವೆನಿಸಿದ ಆರಣ್ಯಕ ಮತ್ತು ಉಪನಿಷತ್ತುಗಳನ್ನು ಪ್ರಮಾಣವೆಂದು ಪರಿಗಣಿಸುತ್ತದೆ. ಅಂದರೆ ಪೂರ್ವಮೀಮಾಂಸೆಯಂತೆ ಇದಕ್ಕೂ ಆಗಮವು ಪ್ರಧಾನವಾದುದು. ಹಾಗಾಗಿ ಶಬ್ದವನ್ನು ಪ್ರಮಾಣವೆಂದು ಒಪ್ಪಿದೆ. ಹಾಗಿದ್ದರೂ ಪ್ರಮಾಣಗಳ ಬಗ್ಗೆ ವಿಶೇಷವಾಗಿ ಚರ್ಚಿಸಿದ್ದು ಕಡಿಮೆಯೇ. ಅದ್ವೈತವೇದಾಂತವಂತೂ 'ವ್ಯವಹಾರೇ ಭಾಟ್ಟನಯಃ' ಎಂಬ ಅಭಿಪ್ರಾಯವನ್ನು ಹೊಂದಿತ್ತು. ಮೀಮಾಂಸೆಯ ಅಭಿಪ್ರಾಯವೇ ತಮ್ಮದು ಎಂದು ಹೇಳಿದ ಹಾಗೆ. ವ್ಯಾವಹಾರಿಕ ವಿಷಯಗಳಲ್ಲಿ ಅದು ಸ್ವೀಕಾರ್ಯವೆಂದು ಘೋಷಿಸಿದರು. ಹಾಗಾಗಿ ಅದ್ವೈತ ದರ್ಶನದಲ್ಲಿ ಭಾಷೆಗೆ

ಸಂಬಂಧಿಸಿದ ಚರ್ಚೆಯ ಭಾಗವು ಕಡಿಮೆಯೇ. ಆದರೂ ವಾಕ್ಯಾರ್ಥದ ಸಮಯದಲ್ಲಿ ಭಾಷೆಗೆ ಸಂಬಂಧಿಸಿದ ವಿಚಾರಗಳ ಪ್ರಸ್ತಾವವಿದೆ.

ಆಸ್ತಿಕದರ್ಶನಗಳಲ್ಲಿ ಶಬ್ದಪ್ರಮಾಣವನ್ನು ಒಪ್ಪದವರೆಂದರೆ ವೈಶೇಷಿಕರು. ಅವರು ಪದಾರ್ಥವಿಜ್ಞಾನದ ನಿರೂಪಣೆಗೆ ತೊಡಗಿದವರು. ಕಣ್ಣಿಗೆ ಕಾಣುವ ಪ್ರಪಂಚದ ವಿವೇಚನೆ-ವಿಶ್ಲೇಷಣೆಗಳು ಮುಖ್ಯ. ಇವುಗಳ ವಿವೇಚನೆಗೆ ಪ್ರತ್ಯಕ್ಷ ಮತ್ತು ಅನುಮಾನಗಳು ಸಾಕು. ಬಹುಶಃ ಇದೇ ಕಾರಣದಿಂದ ಅವರು ಶಬ್ದವನ್ನು ಪ್ರಮಾಣವೆಂದು ಸ್ವೀಕರಿಸಲಿಲ್ಲ. ಬದಲಿಗೆ ಅದನ್ನು ಅನುಮಾನದಲ್ಲಿ ಅಂತರ್ಗತಗೊಳಿಸಬಹುದೆನ್ನುತ್ತಾರೆ. ಇದು ಪ್ರಾರಂಭದ ಹಂತದಲ್ಲಿದ್ದುದು. ಅನಂತರ ಕಾಲದಲ್ಲಿ ಸಮಾನತಂತ್ರಗಳೆನಿಸಿದ ನ್ಯಾಯ-ವೈಶೇಷಿಕಗಳು ಒಂದೇ ಶಾಸ್ತ್ರವಾಗಿ ಬೆಳೆದು ಬಂದವು. ಆಗ ಪ್ರಮಾಣದ ವಿಷಯದಲ್ಲಿ ನೈಯಾಯಿಕರ ಮತವನ್ನು ವೈಶೇಷಿಕರು ಸ್ವೀಕರಿಸಿದರೆ ವೈಶೇಷಿರ ಪ್ರಮೇಯ ಭಾಗವನ್ನು ಅಂದರೆ ಪದಾರ್ಥ ವಿಜ್ಞಾನವನ್ನು ನೈಯಾಯಿಕರು ಸ್ವೀಕರಿಸಿದರು. ಅವು ಒಂದಕ್ಕೊಂದು ಪೂರಕವಾದವು. ಹೀಗಾಗಿ ನೈಯಾಯಿಕರ ವಾದಗಳನ್ನೇ ವೈಶೇಷಿಕರೂ ಒಪ್ಪಿದರು.

ಬೌದ್ಧರು ಪ್ರಮಾಣವೆಂದು ಸ್ವೀಕರಿಸುವುದು ಪ್ರತ್ಯಕ್ಷ ಮತ್ತು ಅನುಮಾನಗಳನ್ನು ಮಾತ್ರ. ಶಬ್ದ ಪ್ರಮಾಣವನ್ನು ಸ್ವತಂತ್ರವಾದುದೆಂದು ಒಪ್ಪುವುದಿಲ್ಲ. ಆದರೆ ಈಗಾಗಲೇ ಹೇಳಿದಂತೆ ಅವರ ಪಾಲಿಗೆ ಬುದ್ಧನ ವಚನಗಳು ಪ್ರಮಾಣವೆನಿಸಿದ್ದವು. ಹಾಗಿದ್ದರೂ ಅವರು ತಮ್ಮ ದರ್ಶನವನ್ನು ತರ್ಕದ ಬಲದ ಮೇಲೆ ನಿಲ್ಲಿಸುವುದು ಹೆಚ್ಚು. ಬೌದ್ಧದರ್ಶನವು ಶಬ್ದವನ್ನು ಪ್ರಮಾಣವೆಂದೊಪ್ಪದಿದ್ದರೂ ಭಾಷೆಯ ಕುರಿತಾದ ಚರ್ಚೆಯಲ್ಲಿ ಭಾಗವಹಿಸುತ್ತದೆ. ಅಪೋಹವಾದವನ್ನು ಬೌದ್ಧರು ಭಾಷಾಶಾಸ್ತ್ರಕ್ಕೆ ನೀಡಿದ ಕೊಡುಗೆಯೆಂದು ಮನ್ನಿಸಲಾಗಿದೆ.

ಶಬ್ದವನ್ನು ಪ್ರಮಾಣವೆಂದು ಒಪ್ಪಲಿ, ಒಪ್ಪದಿರಲಿ ಆ ಕುರಿತು ಚರ್ಚೆಯು ಎಲ್ಲ ದರ್ಶನಗಳಲ್ಲಿಯೂ ಇದೆ. ಶಬ್ದವನ್ನು ಪ್ರಮಾಣವೆಂದು ಒಪ್ಪುವವರು ಅದನ್ನು ನಿರೂಪಿಸಲು ಭಾಷೆಯ ಬಗೆಗೆ ಹೇಳುತ್ತಾರೆ. ಒಪ್ಪದಿರುವವರು ಖಂಡಿಸುವ ಸಲುವಾಗಿ ಭಾಷಾ ಸಿದ್ಧಾಂತಗಳನ್ನು ಪ್ರಸ್ತಾಪಿಸುತ್ತಾರೆ. ವೈಯಾಕರಣದರ್ಶನದ ಖಂಡನೆಗಂತೂ ಭಾಷೆಯನ್ನು ಕುರಿತು ಪ್ರಸ್ತಾಪಿಸುವುದು ಅನಿವಾರ್ಯವೇ ಆಗಿ ಬಿಡುತ್ತದೆ. ಹೀಗಾಗಿ ಭಾರತೀಯ ದರ್ಶನಗಳು ಭಾಷಿಕ ಚರ್ಚೆಗಳನ್ನು ದರ್ಶನಕ್ಕೆ ಬಾಹ್ಯವಾದವುಗಳೆಂದು ಭಾವಿಸಲಿಲ್ಲ. ಹಾಗೆಂದರೆ ಎಲ್ಲ ದರ್ಶನಗಳೂ ಭಾಷೆಯನ್ನು



ಕುರಿತು ಗಂಭೀರವಾಗಿ ಚರ್ಚಿಸಿದವೆನ್ನುವಂತಿಲ್ಲ. ಅದನ್ನು ಈಗಾಗಲೇ ಗಮನಿಸಿದ್ದೇವೆ. ಇತರರ ಸಿದ್ಧಾಂತಗಳು ತಮಗೆ ಸಮ್ಮತವೆನಿಸಿದ ಪಕ್ಷದಲ್ಲಿ ಅವನ್ನು ಸ್ವೀಕರಿಸುತ್ತವೆ. ತಮ್ಮ ಸಿದ್ಧಾಂತಕ್ಕೆ ಹೊಂದುವುದಿಲ್ಲವೆಂದಾಗ ವಿರೋಧಿಸತ್ತವೆ. ಅವಶ್ಯವೆನಿಸಿದರೆ ಹೊಸ ಸಿದ್ಧಾಂತವನ್ನು ಪ್ರತಿಪಾದಿಸುತ್ತವೆ.

ದರ್ಶನಗಳಲ್ಲಿ ಪ್ರತಿಪಾದಿಸಲಾದ ಸಿದ್ಧಾಂತಗಳನ್ನು ಗ್ರಹಿಸುವಾಗ ತುಂಬ ಎಚ್ಚರ ಅವಶ್ಯವಾಗುತ್ತದೆ. ಎಷ್ಟೋ ಸಲ ಎರಡು ಸಿದ್ಧಾಂತಗಳಲ್ಲಿ ಸೂಕ್ಷ್ಮವಾದ ಭೇದವಿರುತ್ತದೆ. ಆದರೆ ಆ ಕುರಿತು ದಿಗ್ಭ್ರಮೆ ಹುಟ್ಟಿಸುವಂತೆ ವಾದ-ವಿವಾದಗಳು ನಡೆಯುತ್ತವೆ. ಎಷ್ಟೋ ಸಲ ವಾದದ ಮೂಲಾಂಶವೇ ಮರೆತು ಹೋಗುವ ಸಂಭವವೂ ಉಂಟು. ಗೊಂದಲ ವುಂಟಾಗುವುದಂತೂ ಸಹಜವೇ. ವಾದಕೌಶಲದ ಕಾರಣದಿಂದ ಸರಿ-ತಪ್ಪುಗಳನ್ನು ನಿರ್ಣಯಿಸಲು ಸಾಧ್ಯವಿಲ್ಲ. ಅವರವರ ಸಿದ್ಧಾಂತಗಳ ಸಮರ್ಥನೆಯನ್ನು ಗಮನಿಸುವಾಗ 'ಅದೇ ಸರಿ' ಯೆನಿಸುತ್ತದೆ. ಅಲ್ಲಿನ ದೋಷವೇನೆಂಬುದನ್ನು ತಿಳಿಯಲು ಮತ್ತೊಂದು ವಾದವನ್ನು ಗಮನಿಸಬೇಕಾಗುತ್ತದೆ. ಕೊನೆಗೂ ನಮ್ಮ ತೀರ್ಮಾನವನ್ನು ಅಮಾನತ್ತಿನಲ್ಲಿಟ್ಟು ಕೊಳ್ಳಬೇಕಾಗುತ್ತದೆ.

ಇದಕ್ಕೆ ದರ್ಶನಗಳ ದೃಷ್ಟಿಭೇದವು ಕಾರಣ. ಒಂದೊಂದು ದರ್ಶನವೂ ತನ್ನದೇ ಆದ ಹಲವಾರು ಸಿದ್ಧಾಂತಗಳನ್ನು ಹೊಂದಿರುತ್ತದೆ. ಅವುಗಳನ್ನು ರಕ್ಷಿಸಿಕೊಳ್ಳಲು ಪ್ರಯತ್ನ ನಡೆಯುತ್ತಿರುತ್ತದೆ. ಯಾಕೆಂದರೆ ಈ ಸಿದ್ಧಾಂತಗಳು ಗೋಡೆಯ ಕಲ್ಲುಗಳಿದ್ದಂತೆ. ಅವುಗಳಲ್ಲಿ ಯಾವುದೊಂದನ್ನು ತೆಗೆದರೂ ಅಪಾಯವಾದೀತು. ಹಾಗಾಗಿ ವೀರಾವೇಶದಿಂದ ಹೋರಾಟ ನಡೆಯುತ್ತಿರುತ್ತದೆ. ಇಲ್ಲಿ ಯಾರೂ ಸೋಲುವ ಹಾಗೇ ಇಲ್ಲ. ದಾರ್ಶನಿಕರಿಗೆ ತಮ್ಮ ಸಿದ್ಧಾಂತಗಳ ಬಗ್ಗೆ ಅಂಥ ನಿಷ್ಠೆಯಿಲ್ಲದಿದ್ದರೆ ನಮಗೆ ಅನುಕೂಲವಾಗುತ್ತಿತ್ತೇನೋ! ಆದರೆ ಹಾಗಾಗಲಿಲ್ಲ.

ಈ ವಾದ-ವಿವಾದಗಳು ಪೂರ್ಣವಾಗಿ ಅರ್ಥವಾಗಬೇಕಾದರೆ ದರ್ಶನಗಳ ಹಲವಾರು ಸಿದ್ಧಾಂತಗಳ ಸ್ಪಷ್ಟವಾದ ಕಲ್ಪನೆಯು ಅವಶ್ಯ. ಸ್ಥೂಲವಾದ ಕೆಲವು ಸಂಗತಿಗಳನ್ನು ಮಾತ್ರ ತಿಳಿದರೂ ಪ್ರಯೋಜನವಾಗದು. ಆದರೆ ಮುಖ್ಯಾಂಶವನ್ನು ಗ್ರಹಿಸುವುದಕ್ಕೆ ಅಥವಾ ಪರಿಣತಿಯೇನೂ ಬೇಕಾಗುವುದಿಲ್ಲ. ಆ ದೃಷ್ಟಿಯಿಂದ ಅವಶ್ಯವಿದ್ದಲ್ಲಿ ವಿವರಣೆಯನ್ನು ಕೊಡಲಾಗಿದೆ. ಇದರಿಂದ ವಿಷಯವನ್ನು ಗ್ರಹಿಸಲು ಅನುಕೂಲವಾಗಬಹುದು.

# ಕಮಲಾದೇವಿ, ಒಂದೊಂದೆ ನೆನಪುಗಳು

ವೈದೇಹಿ

*ದಿ। ಕಮಲಾದೇವಿ ಚಟ್ಟೋಪಾಧ್ಯಾಯ ಅವರ ಜೀವನಚರಿತ್ರೆಯನ್ನು ಓದಿ, ಅದರಿಂದ ಪ್ರಭಾವಿತವಾಗಿ ಹುಟ್ಟಿದ ಬರಹದ ಭಾಗ ಇದು.*

ಎಷ್ಟೆಲ್ಲ ಬದುಕುಗಳು ಈ ಭೂಮಿಯ ಮೇಲೆ ಆಗಿ ಹೋದುವು!

ಅದರಲ್ಲೊಂದು ಪುಟ್ಟ ಅಧ್ಯಾಯ ನನ್ನದು.

ಬದುಕೆಂದರೇನೇ ಸೋಲು ಗೆಲುವುಗಳ ಆಟವಾಗಿರುವಾಗ ನನ್ನದೇನು ವಿಶೇಷ?

ಹೇಳಿಯಾದರೂ ಏನು? ಯಾಕಾಗಿ? ಯಾರಿಗಾಗಿ? – ಅಂತನಿಸುತ್ತದೆ... ಹೇಳಬೇಕು ಅಂತಲೂ!

ನೆನಪು ತೋಚಿದ ಹಾಗೆ, ಹೇಳುತ್ತಾ ಹೋಗುತ್ತೇನೆ.

... ನೆನೆಯಲು ಹೊರಟೆನೆಂದರೆ ಕಳೆದ ಬದುಕು ಕಣ್ಣ ಮುಂದೆ ಅಂಕೆಯಿಲ್ಲದೆ ಸಾಗುತ್ತದೆ, ಮುಗಿತವೇ ಇಲ್ಲದ ನಾಟಕದಂತೆ. ಸಾಲಾಗಿ ಬರದೆ ಹಿಂದುಮುಂದಾಗಿಯೇ ಹೊರಡುವ ಅಂಕಗಳು, ಪಾತ್ರಗಳು, ಮಾತುಗಳು, ಸ್ವಗತ ಸಂಭಾಷಣೆ, ಘಟನೆ ದೃಶ್ಯಗಳು ಪ್ರವಾಹದಂತೆ ಬರುತ್ತವೆ...

ಎಂತಲೇ, ನೆನೆಯುವುದೆಂದರೇನೆ ಭಯವೆನಿಸುತ್ತಿದೆ.

... ಅದೋ, ಆ ಮನೆ, ಮಂಗಳೂರು ನಗರದ ನಡುವಿನಲ್ಲಿ ಮುಚ್ಚಟೆಯಾಗಿದ್ದ ನಿಸರ್ಗದ ಮಡಿಲಲ್ಲಿ ನಮ್ಮೂರ ವಿಶಿಷ್ಟ ಸೊಬಗಿನ ಆ ಹಂಚಿನ ಮುಖಾರಿ ಮನೆ... ಈಗಲೂ ಎದುರು ಬಂದು ಹೇಗೆ ನಿಂತಿದೆ! ಇಷ್ಟದೇವರು ಭಕ್ತನ ಮುಂದೆ ನಿಂತಂತೆ...

ಮನೆಯ ವಾಸ್ತುಬಾಗಿಲ ಹೊಸಿಲ ಹಣೆ ಅಲಂಕರಿಸಿದ ಲೇಸಿನ ತೋರಣದಲ್ಲಿ ಹಕ್ಕಿಗಳು – ಎಷ್ಟು ಜೀವಂತವಿದ್ದುವು. ಮನೆ ಮಂದಿಯಲ್ಲಿ ಅವೂ ಒಂದು ಎಂಬಂತೆ.



ಶ್ರಾವಣ ಮಾಸ ಬಂತೂ ಅಂದರೆ ಚೂಡಿ ಕಟ್ಟುವ ಸಂಭ್ರಮ ಬಂತೆಂದೇ.

ಆ ರತ್ನಗಂಧಿ ಹೂವು, ಅದರಲ್ಲೇ ಹಳದಿ, ಹಳದಿಗೆಂಪು, ಗುಲಾಬಿ ವರ್ಣಗಳು, ಕಾಂಪೌಂಡು ಗೋಡೆ ಮೇಲೆ ಬೆಳೆಯುವ 'ಕಾಗೆ ಕಾಲು', 'ಗುಬ್ಬಿ ಕಾಲು', ಜರಿಗಿಡಗಳು... ಅಂದಿನ ಆ ಕಣ್ಣಿಗೆ ಅವು ಅಕ್ಷರಶಃ ಕಾಗೆ-ಗುಬ್ಬಿ ಕಾಲುಗಳಂತೆಯೇ ಕಾಣುತ್ತಿದ್ದವು. ಗರಿಕೆ, ಪಚ್ಚೆತೆನೆ, ಪಂಚಪತ್ರೆ, ದಾಸವಾಳದ ಎಸಳು, ತೇರು ಹೂವಿನ ಪುಟ್ಟ ದಳಗಳು... ಈ ತಿಂಗಳಲ್ಲಿ ಎಲ್ಲಿ ಕಂಡರೂ ತೇರು ಹೂಗಳ ತೇರೇ. ರಸ್ತೆ ಬದಿಗಳಲ್ಲಿ, ಬೇಲಿಯ ಮೇಲೆ, ಹಿತ್ತಿಲ ಮೂಲೆಯಲ್ಲಿ ಜಂಭದಿಂದೆಂಬಂತೆ ತೇರಿನೋಪಾದಿಯಲ್ಲಿ ಪಿರಮಿಡ್ಡಿನಂತೆ, ಪುಷ್ಪಾರತಿಯಂತೆ ನಿಂತು ತೂಗುವ ಹೂಗಳು... ಮತ್ತು ಕತ್ರಿ ದಾಸವಾಳ, ಮಿಟ್ಟೆ ದಾಸವಾಳ... ಪರಿಮಳಗಳನೆಲ್ಲ ಒಗ್ಗೂಡಿಸಿ ಬೀಸುವ ಮಂದಮಾರುತ.

ಆ ಘಮಘಮದ ಚುಮುಚುಮು ಬೆಳಗಲ್ಲಿ ಹೂ ಕೊಯ್ಯುವುದೇ ಖುಶಿ. ತಂದು ರಾಶಿ ಹಾಕಿ ಅಜ್ಜಿ ಅಮ್ಮ ಪಚ್ಚಿ ಎಲ್ಲ ಸೇರಿ ಸಂಭ್ರಮದಲ್ಲಿ ಚೂಡಿ ಕಟ್ಟುವಾಗ ಎಸಳು ಹೆಕ್ಕಿ ಜೋಡಿಸಿಕೊಡುವುದೇ ಖುಶಿ. ಬಿಡಿ ಹೂಗಳ ಜರಿ ಎಲೆಗಳ ಸಂಗಮವದು, ಚೂಡಿ; ಹೂ - ಪತ್ರೆ ಸೇರಿ ತಯಾರಾಗುವ ಪುಟ್ಟ ಹೂಗುಚ್ಛ, ಥೇಟ್ ಈ ದೇಶದ ಸಂಸ್ಕೃತಿಯ ಚಿಕಣಿ ಸಂಕೇತದಂತೆಯೇ; ಹೂಮಾಲೆ ಕಟ್ಟುತಿದ್ದರೆ, ಮಾಲೆಯನ್ನು ಪೂರ್ಣಗೊಳಿಸುವುದೇ ತಕ್ಷಣದ ಮಹತ್ವಾಕಾಂಕ್ಷೆ. ಎಲ್ಲ ಹೂಗಳು ಸೇರಿ ಗುಚ್ಛವಾದಂತೆ ಅಂದಿನ ನಾವೂ ಇದ್ದೆವು.

ಒಂಟಿ ಬಾಲ್ಯವಲ್ಲವದು. ಒಟ್ಟಿಗೆ ಹಾಡುತ್ತ ಹರಟುತ್ತ ಉಣ್ಣುತ್ತ ದುಡಿಯುತ್ತ ಕಳೆದ ಬಾಲ್ಯ. ಎಂತಲೇ ಬಹುಶಃ ಈ ವೃದ್ಧಾಪ್ಯದಲ್ಲೂ, 'ಒಂಟಿ' ಅನಿಸುತ್ತಿಲ್ಲವೇನು? ಭಜನೆ, ಹಾಡುಗಳು... ಅಭಂಗಗಳು... ಝುಣ್ ಝುಣ್ ತಾಳ, ಹಾರ್ಮೋನಿಯಂ ಧ್ವನಿ ಮೇಳೈಸಿಕೊಂಡ ಸಂಜೆಗಳು. 'ಗೇವೂನೀಯಾ' ಪಂಚಾರತೀ... 'ಕೃಷ್ಣಾ ಮೂರ್ತಿ ಕಣ್ಣಮುಂದೆ ನಿಂತಿದಂತಿದೆ'... ದೇವದೇವಿಯರು ದೈವ ಭೂತಕೋಲ ಯಕ್ಷಗಾನ ಪಾತ್ರಿದರ್ಶನ ಪಾಡ್ದನ. ಈ ನೆಲದ ಗಾಳಿಯಲ್ಲಿ ಎಲ್ಲದಕ್ಕೆ ಹಿನ್ನಲೆಯಾಗಿ ನಿರಂತರವಾಗಿ ಮೊರೆವ ಸಮುದ್ರ ಶ್ರುತಿ. ಪ್ರಕೃತಿ, ಕಲೆ, ಹಾಡುಹಸೆ – ಎಲ್ಲವೂ ಜೀವನದೊಂದಿಗೆ ಬೆಸೆದುಕೊಂಡಿದ್ದವು ಆಗ. ಹಬ್ಬ ಹುಣ್ಣಿಮೆ ಹರಿದಿನ ಮಾವಿನೆಲೆ ತೋರಣ ಪಾರಣೆ ಪಾರಾಯಣ, ಮನೆಯಲ್ಲೇ ಮದುವೆ ಮುಂಜಿ, ಬಂದು ಹೋಗುವವರು...ಸಂಭ್ರಮದೆಡೆಯಲ್ಲಿ ರಾದ್ಧಾಂತ, ಕಣ್ಣೀರು, ವೈಷಮ್ಯ. ಜನ ಸೇರುವಲ್ಲಿಯೂ ಏಕಾಂತದಲ್ಲಿಯೂ ಬಿಡದೆ ಜತೆಗಿರುತ್ತಿದ್ದ ನಿಟಿಂಗ್,

ಕ್ರೋಶಾ; ಬಣ್ಣ, ಸೂಜಿದಾರ ಕಸೂತಿ ಟ್ರೇಸ್ ಕಾರ್ಬನ್ ಡಿಸೈನ್ ಬುಕ್ ವಿನಿಮಯ. ಕೈ ಕಸೂತಿ, ಲೇಸು, ಹೇಳಿದೆನಲ್ಲ, ಬಾಗಿಲಿಗೆ ಲೇಸಿದೇ ತೋರಣ... ಕೊನೆಗೆ ನನ್ನನ್ನು ಕ್ರಾಫ್ಟ್ ಕೌನ್ಸಿಲ್ ಕಲ್ಪನೆಯ ಬಾಗಿಲವರೆಗೂ ತಲುಪಿಸಿದ್ದು ಇವೇ. ಇವೇ ಎಲ್ಲ.

ಬೆಳಕಾಗಿ ಉದಯಿಸಿ, ನಡುಮಧ್ಯಾಹ್ನ ಕೆಂಡದ ಮಳೆ ಸುರಿಸಿ, ಹೊತ್ತು ಕಳೆದಂತೆ ತಾಪ ತಣಿದು, ಪಶ್ಚಾತ್ತಾಪದಿಂದ ಪ್ರಾಯಶ್ಚಿತ್ತ ಮಾಡಿಕೊಂಡಂತೆ ಸಮುದ್ರದಲ್ಲಿ ಮುಳುಗಿ ಮಾಯವಾಗುವ ಸೂರ್ಯ.

ಮುಗಿಲಂಚಿನಲ್ಲಿ ಕಣ್ಣಮುಚ್ಚಾಲೆಯಾಡುತ್ತ ಅವುಗಳ ದಾರಿಗಡ್ಡ ನಿಂತು ಒಡಲನ್ನೆಲ್ಲ ಸುರಿಸಿ ಬರಿದು ಮಾಡಿ ಕಳಿಸುವ ಪಶ್ಚಿಮ ಘಟ್ಟಗಳು.

ಸದ್ದಿಲ್ಲದೇ ಹರಿದು ಪಶ್ಚಿಮಾಂಬುಧಿಯಲ್ಲಿ ಲೀನವಾಗಿಯೂ ಮುಕ್ತವಾಗದ, ಮುಕ್ತವಾಗದೆಯೂ ಪರಮಾರ್ಥವನ್ನು ಹೊಳೆಯಿಸುವ ನಮ್ಮೂರ ನದಿಗಳು.

ಕೊಯ್ಲು ಮುಗಿಯಿತೆಂದರೆ ಎಲ್ಲಕ್ಕೂ ಹಿನ್ನೆಲೆಯಾಗಿ ಎಲ್ಲಿಂದಲೋ ತೇಲಿ ಬರುವ ಚಂಡೆ, ಭಾಗವತಿಕೆಯ ದನಿ... ನಮ್ಮೂರಿನ ತಂಪುಕಾಲವೆಂದರೆ ಇದುವೇ. ಆಕಾಶಬುಟ್ಟಿಯಲ್ಲಿ ದೀಪ ಬೆಳಗುತ್ತಿದೆ. ನಾವೇ ಕತ್ತರಿಸಿ ಅಂಟಿಸಿ ಬಣ್ಣ ಕೊಟ್ಟು ಬಾಲವಿರಿಸಿ ಹಾರಿ ಬಿಡುವ ಗಾಳಿಪಟಗಳು.

ಎಷ್ಟು ಮೃದುವಾಗಿ ಗಾಳಿ ಬೀಸುತ್ತಿದೆ. ನಿಶ್ಶಬ್ದ ಸಂಗೀತದಂತೆ. ಆಕಾಶ ನೋಡುತ್ತ ನಿಂತಾಗೆಲ್ಲ ಮುಂದಾಗುವ ನನಸುಗಳೆಲ್ಲ ಸದ್ಯ ಮಿನುಗು ನಕ್ಷತ್ರಗಳಾಗಿ ನೆಲಕ್ಕಿಳಿಯಲು ಕಾಯುತ್ತಿರುವವೋ ಎಂಬಂತೆ ಕಾಣುವುದು.

ಮನೆ ಹಿಂದಿನ ಗದ್ದೆ. ತುಯ್ಯುವ ಬಂಗಾರದ ತೆನೆಗಳು. ಕೈತೋಟದಲ್ಲಿ ಕಾಲಕಾಲಕ್ಕೆ ಬದಲಾಗುವ ಹೂವು, ಹಣ್ಣು, ಎಲ್ಲಿಂದಲೋ ಬರುವ ಎಲ್ಲಿಗೋ ಹೊರಡುವ, ಅಲ್ಲಿಯೇ ಇರುವ ನಾನಾ ಮೃಗ ಕೀಟ, ಪಶುಪಕ್ಷಿ ಪ್ರಪಂಚ. ಮನೆ ಹತ್ತಿರದ ಹಾಡಿಯಲ್ಲಿ ಹಾವುಗಳಿದ್ದವು ಎಷ್ಟು! ಒಂದು ಹಾವಂತೂ ಸದಾಕಾಲ ಬಚ್ಚಲಿನ ತಂಪಲ್ಲಿ, ಅದೇನು ತನ್ನ ಅಜ್ಜನ ಮನೆಯೋ ಎಂಬಂತೆ ಹಾಯಾಗಿ ಇದ್ದುಬಿಡುತಿತ್ತು! ಇನ್ನು ಮನೆಯ ದನ ಕರುಗಳೋ. ಲೋಕವೆಲ್ಲ ಸುತ್ತಿ ಬಂದರೂ ನಮ್ಮ ದೇಶದ ದನಗಳಷ್ಟು ಚಂದದ ದನಗಳನ್ನು ನಾನಂತೂ ಕಾಣೆ. ಆ ಸಂಕೋಚ, ಮುಗ್ಧತೆ, ಸೊಕ್ಕಿಲ್ಲದ ದೇಹಾಕೃತಿ, ಪ್ರೀತಿ-ಪರಿಚಯ ಸೂಸುವ ಕಣ್ಣುಗಳು. ಕರೆದೊಡನೆ ಹೇಗೆ ಮುಖವಲ್ಲಾಡಿಸಿ ಮುನ್ನೀಡಿ ಏನು ಕರೆದೆ ಎಂಬಂತೆ ನೋಡುತ್ತಿದ್ದವು... ಚಿಕ್ಕಂದಿನಲ್ಲಿ ನಾನವುಗಳೊಡನೆ ಮಾತಾಡುತ್ತ ಎಷ್ಟು ಹೊತ್ತು ಕಳೆಯುತ್ತಿದ್ದೆ!



ಕಪಿಲಾ, ಶ್ಯಾಮಾ, ಶಬಲಿತಾ... ಈಗಲೂ ಗಟ್ಟಿಯಾಗಿ ಅವುಗಳನ್ನು ಕರೆಯೋಣ ಎನಿಸುತ್ತಿದೆ.

••• ••• •••

ಮನೆಯಲ್ಲಿ ಪ್ರತೀದಿನ ಸಂಜೆ, ಸಣ್ಣ ಸಭೆ.

ಸಭೆಗೆ ಅಜ್ಜಿಯೇ ಕೇಂದ್ರ.

ಪುರಾಣ ಗ್ರಂಥ ವಾಚನ, ಚರ್ಚೆ.

ನಡುವೆಯೆಲ್ಲಾದರೂ ಆಕೆ ಎದ್ದುಹೋದರೆ, ನಾನು, ಆಗಿನ್ನೂ ಪುಟ್ಟ ಹುಡುಗಿ, ಅಜ್ಜಿಯ ಪುಳ್ಳಿ, ಓದುವವಳಂತೆ ಕುಳಿತುಕೊಳ್ಳುತ್ತಿದ್ದೆನಂತೆ, ಅವಳ ಜಾಗದಲ್ಲಿ.

ಅಜ್ಜಿ ಕೊಂಡಾಟದಿಂದ ಹೆಮ್ಮೆಯಿಂದಲೂ ಇದನ್ನು ನೆನಪು ಮಾಡಿ ಕೊಳ್ಳುತ್ತಿದ್ದಳು.

ಒಬ್ಬಳೇ ಸ್ವತಂತ್ರ ಗಾಡಿ ಕಟ್ಟಿಸಿಕೊಂಡು, ರೈಲು, ಬಸ್ಸು ಹತ್ತಿ ಇಳಿದು, ಹೋಗಬೇಕೆಂದು ಕಂಡಲ್ಲಿಗೆ ಹೋಗಿ ತಿರುಗಾಡಿಕೊಂಡು ಬರುತಿದ್ದವಳು ನನ್ನ ಅಜ್ಜಿ. ಗಟ್ಟಿ ಗುಂಡಿಗೆಯ ಜಟ್ಟಿ. ಸಂಸಾರಿಯಾಗಿದ್ದೂ ಅಧ್ಯಾತ್ಮದಲ್ಲಿ ಮುಳುಗಿದ್ದ ಅಧ್ಯಾತ್ಮದಲ್ಲಿ ಮುಳುಗಿಯೂ ತಿರುಗಾಟ ಬಂಧು-ಬಾಂಧವ್ಯ ಅಂತ ಎಲ್ಲವನ್ನೂ ಸುಖಿಸಿದವಳು – ಮಗನ ಸಾವಿನೆದುರು ಶಾಂತವಾಗಿ ಕುಳಿತ ಅವಳ ಚಿತ್ರ... ಹೇಗೆ ಮನೋಭಿತ್ತಿಯ ಮೇಲೆ ನಿಂತೇಬಿಟ್ಟಿದೆ. ಚೂರೂ ಮಸಳಿಸದೆ!

ಕುದುರೆಗಾಡಿಯ ಟಕಟಕ ಸದ್ದು... ಕೇಳಿಸುತ್ತಿದೆಯೆ? ಬಸ್ಸಲ್ಲ, ಕಾರಲ್ಲ ಆಗ. ಕುದುರೆ ಗಾಡಿ. ರುಮಾಲು ಧರಿಸಿ ಮನೆಯದೇ ಗಾಡಿ ಏರಿ ಹೊರಡುವ ತಂದೆಯ ಚಿತ್ರ ಈಗ ಕಂಡೆ ಎಂಬಂತಿದೆ. ಅಬ್ಬ! ಅವರ ಗಾಂಭೀರ್ಯವೆ! ಅವರ ಗಾಂಭೀರ್ಯದ ಜೊತೆ -

ಅಮ್ಮನ ಲವಲವಿಕೆ...

... ಎಲ್ಲ ಆ ಮನೆಯ ನೆನಪಿನೊಂದಿಗೆ ಹೇಗೆ ತೇಲಿ ಬರುತ್ತಿದೆ!

ಮನೆಯಲ್ಲಿನ ಕುದುರೆ ಗಾಡಿಯನ್ನು ಬಿಟ್ಟು ನಡೆದುಕೊಂಡೇ ಶಾಲೆಗೆ ಹೋಗುತ್ತಿದ್ದೆ ನಾನು. ಅಮ್ಮ ಎಷ್ಟು ಹೇಳಿದರೂ ಕೇಳದೆ. ದುಡ್ಡಿದ್ದವರು ವಾಹನದಲ್ಲಿ, ದುಡ್ಡಿಲ್ಲದವರು ನಡೆದುಕೊಂಡು ಹೋಗುವುದು ಅಂದರೆ! ಯಾಕೆ? ಈ ತಾರತಮ್ಯ ಆಗಲೇ ನನಗೆ ಸಹಿಸಲಾಗುತ್ತಿರಲಿಲ್ಲ.

ಪಕ್ಕದ ಮನೆಯ ಹುಡುಗನೊಟ್ಟಿಗೆ ಬ್ಯಾಡ್ಮಿಂಟನ್, ಟೆನಿಸ್ ಎಲ್ಲಾ

ಆಡುತ್ತಿದ್ದೆನಪ್ಪಾ ನಾನು. ಅವನ್ನೆಲ್ಲಾ ಆಡಲು ಹುಡುಗಿಯರೇ ಸಿಗುತ್ತಿರಲಿಲ್ಲವಲ್ಲ... ಏನು ಮಾಡಲಿ! ಒಮ್ಮೆ ಒಂದು ಘಟನೆ. ಸೈಂಟ್ ಆ್ಯನ್ಸ್ ಕಾನ್ವೆಂಟಿಗೆ ಹೋಗುತ್ತಿದ್ದ ದಿನವದು. ಓರಿಗೆಯವರೊಡನೆ ಶಾಲೆಗೆ ಹೊರಟಿದ್ದೆ. ದಾರಿಯೋ ಅದು ಇಂದಿನ ಮಂಗಳೂರಲ್ಲ. ಮರ, ಗಿಡ, ನೆರಳು, ತೋಪು. ಕಳ್ಳರಿಂದ ಎಷ್ಟು ಹುಡುಗಿಯರ ಸರ ಹಾರಿಹೋಯಿತೋ? ಒಮ್ಮೆ ಒಬ್ಬಳೇ ಬರುತಿದ್ದವಳು, ಅವನನ್ನು ನೋಡಿದೆ. ಓ, ಈತನೇ, ಮಾಡಿಸುತ್ತೇನೆ ಇವನಿಗೆ ಎಂದುಕೊಂಡೆ. ಬೇಕೆಂದೇ ನಿಧಾನ ನಡೆಯತೊಡಗಿದೆ. ಅವನು ನನ್ನನ್ನು ಹಿಂಬಾಲಿಸಿದ. ನಾನೋ ಪೊಲೀಸ್ ಚೌಕಿಯವರೆಗೂ ಅವನಿಗೆ ಹತ್ತಿರ ಹತ್ತಿರವಾಗುತ್ತ ಇದ್ದೆ. ಚೌಕಿಯಲ್ಲಿ ಪೊಲೀಸನನ್ನು ನೋಡುತ್ತಲೂ ಕಳ್ಳನ ಕಡೆಗೆ ತಿರುಗಿದೆ. ಆತ ಕಸಕ್ಕನೆ ನನ್ನ ಸರ ಕಸಿಯಲು ಕೈ ಹಾಕಿದ್ದ. ಚೀತ್ಕರಿಸುತ್ತ ಪೊಲೀಸರತ್ತ ಓಡಿದೆ. ಪೊಲೀಸ್ ಅವನ ಮೇಲೆ ಮುಗಿಬಿದ್ದು ಹಿಡಿದ. ಮನೆಗೆ ಅಮ್ಮನ ಬಳಿ ಬಂದು ಹೇಳಿದರು. ಅಮ್ಮ ಹೆಮ್ಮೆಯಿಂದ ಬೆನ್ನು ತಟ್ಟಿದಳು.

ಒಂದು ದಿನ ಒಬ್ಬ ಕಳ್ಳ ನನ್ನ ಕುತ್ತಿಗೆಗೆ ಕೈ ಹಾಕಿದ್ದಾನೆ. ಸರ ಕಿತ್ತುಕೊಂಡು ಓಡತೊಡಗಿದಂತೆ ನನಗೆ ಏನು ಎಲ್ಲಿಂದ ಧೈರ್ಯ ಬಂತೊ – ತಕ್ಷಣ ಅವನ ಬೆನ್ನಟ್ಟಿದೆ. ಕಳ್ಳ ಕಳ್ಳ ಅಂತ ಗಟ್ಟಿಯಾಗಿ ಕೂಗುತ್ತ... ಆತ ಓಡುತ್ತಿದ್ದಂತೆ ಕೂಗುತ್ತ ಅವನ ಹಿಂದೆ ನಾನು ಓಡುತ್ತಿದ್ದಂತೆ ದಾರಿಹೋಕರು ಅವನ ಬೆನ್ನಟ್ಟಿದರು. ಹಿಡಿದೇಬಿಟ್ಟರು. ಸರ ಹಿಂದೆ ಬಂತು – ಅಲ್ಲ, ಆ ಧೈರ್ಯ ನಿಜಕ್ಕೂ ನನಗೆಲ್ಲಿಂದ ಬಂತು! ಆ ಕ್ಷಣದಲ್ಲುಂಟಾದ ಆ ಧೈರ್ಯ?...

••• ••• •••

- ರೂಲ್ ಬ್ರಿಟಾನಿಯಾ...

- ಏನಿಲ್ಲ. ಶಾಲೆಯಲ್ಲಿ ಕಲಿಸುತ್ತಿದ್ದ ಹಾಡು. ಆಗ ಅರ್ಥವೇ ಗೊತ್ತಿಲ್ಲದೆ ಹೇಳಿಕೊಟ್ಟಂತೆ ಎಲ್ಲರೂ ಸೇರಿ ಹಾಡುವ ಉಲ್ಲಾಸ ಏನನ್ನಲಿ! ಈಗ ಅದು ಅರ್ಥ-ಅರ್ಥಹೀನತೆಯ ಪರಿಧಿಯನ್ನು ದಾಟಿದ, ಶಾಲಾ ದಿನಗಳನ್ನು ನೆನಪಿಸುವ ಒಂದು ಗುನುಗು ಮಾತ್ರ!

ಹಾಡುತ್ತಿದ್ದೆ ನಾನೂ, ಶಾಲೆಯಲ್ಲಿ. ನನ್ನ ಸಂಗೀತ ಟೀಚರೋ ಅಬ್ದುಲ್ ಕರೀಂಖಾನರ ಶಿಷ್ಯ. ನೇರವಾಗಿ ಖಯಾಲ್ ಕಲಿಸಲು ತೊಡಗಿದರು! ಅಮ್ಮ ಬೇಸರಗೊಂಡರೆ 'ನಿಮ್ಮ ಮಗಳು ಅಬ್ದುಲ್ ಕರೀಂ ಖಾನರ ಹಾಗೆ ಹಾಡಿದರೆ ಸೈಯಲ್ಲ!' – ಎನ್ನುತಿದ್ದರು. ಹಿಂದೂಸ್ಥಾನೀ ಸಂಗೀತದ ಸಾರಂಗಿ – ಗಂಡು



ವಾದ್ಯವಷ್ಟೆ? ನಾನು ಹೋಗಿ ಹೋಗಿ ಅದನ್ನೂ ಕಲಿತೆ! ಕಾರಣ ಕೇಳಿ; ಕಾರಣ ತಿಳಿಯದು.

••• ••• •••

ನನ್ನಮ್ಮ, ಕೇವಲ ಅಮ್ಮನಲ್ಲ. ಹೇಳಿದೆನೆ? ಜೀವಂತಿಕೆ, ಸ್ನೇಹ, ಸ್ಫೂರ್ತಿಯ ಕಾರಂಜಿ ಆಕೆ. ಅಂಧಶ್ರದ್ಧೆ ಭೂತ ಪ್ರೇತ ಭಯಗಳನ್ನು ಆ ಕಾಲದಲ್ಲಿಯೇ ಮೆಟ್ಟಿ ನಿಂತವಳು. ನನ್ನನ್ನೂ ಭೂತ ಪ್ರೇತ ಪಿಶಾಚಿಗಳ ಭಯವಿಲ್ಲದಂತೆ ಬೆಳೆಸಿದಳು. ಒಳ್ಳೆಯ ಓದುಗಳು.

ನಾಟಕ, ಹಾಡುಗಾರಿಕೆ, ಕಸೂತಿ ಕಲೆ ಎಲ್ಲದರಲ್ಲಿಯೂ ಅಂಥಾ ಆಸಕ್ತಿ. ಯಾರೆಷ್ಟೇ ಎಚ್ಚರಿಸಿದರೂ ಲೆಕ್ಕವಿಡದೆ ನಾಟಕ, ಯಕ್ಷಗಾನ, ಹಾಡುಗಾರಿಕೆ, ಎಲ್ಲಿಗೂ ಒಬ್ಬಳೇ ಹೊರಟುಬಿಡುತಿದ್ದಳು.

ಮಂಗಳೂರಿನಲ್ಲಿ ನಡೆದ 'ಮೀರಾ ನಾಟಕ'ದ ಕುರಿತು ಇಲ್ಲಿಯೇ ಹೇಳಬೇಕು. ನ್ಯಾಶನಲ್ ಗರ್ಲ್ಸ್ ಹೈಸ್ಕೂಲು ನನ್ನ ತಾಯಿ ಕೊಟ್ಟ ಮನೆಯಲ್ಲಿ ನಡೆಯುತ್ತ ಇತ್ತು. ಶಾಲೆಗೆ ಹೊಸ ಕಟ್ಟಡ ಬೇಕಿತ್ತು. ಅದಕ್ಕಾಗಿ ಪ್ರಿನ್ಸಿಪಾಲ್ ಮಾರ್ಗರೆಟ್ ಕಸಿನ್ಸ್ ಕೆಲ ಯೋಜನೆ ಹಾಕಿಕೊಂಡರು.

ಅವುಗಳಲ್ಲಿ ಅವರ ಗಂಡನೇ ರಚಿಸಿದ ನಾಟಕ – ಭಕ್ತ ಮೀರಾ ಒಂದು. ಅದರಲ್ಲಿನ ಗಂಡು ಪಾತ್ರಗಳಿಗೆ ಗಂಡಸರು, ಮೀರಾ ಪಾತ್ರಕ್ಕೆ ನಾನು ಅಂತಾಯಿತು.

ಮೀರಾ ಹಾಡುಗಳ ಪ್ರ್ಯಾಕ್ಟೀಸು, ನಾಟಕಕ್ಕೆ ಬೇಕಾದ ಪರಿಕರಗಳ ಸಿದ್ಧತೆ, ಕತ್ರಿ ಗೋಂದು ರಟ್ಟುಗಳಲ್ಲಿ ನಾವು ಮುಳುಗಿ ಹೋಗಿದ್ದೆವು. ಆದರೆ ಸೂಚನೆಯೇ ಕೊಡದೆ ಬಿರುಗಾಳಿಯೊಂದು ಎದ್ದೇ ಬಿಟ್ಟಿತಲ್ಲವೆ.

ಮರ್ಯಾದಸ್ತರ ಮನೆ ಹೆಣ್ಣುಮಗಳು ನಾಟಕದಲ್ಲಿ ಗಂಡಸರೊಡನೆ ಪಾರ್ಟು ಮಾಡುವುದೆಂದರೇನು!

ನಾಟಕವನ್ನು ನಿಷೇಧಿಸುತ್ತೇವೆ.

ಹೇಗೆ ಮಾಡುತ್ತೀರಿ ನೋಡಿಯೇ ಬಿಡುತ್ತೇವೆ.

ಏನು! ಇದು ಮಂಗಳೂರಿನ ಸುಶಿಕ್ಷಿತ ಸಮಾಜದ ಧ್ವನಿಯೆ! ಸಣ್ಣ ಆಶ್ಚರ್ಯವಲ್ಲವದು.

ದೂರದ ಆ್ಯನಿ ಬೆಸೆಂಟರಿಗೂ ಯಾರೋ ದೂರು ಕಾಗದ ಬರೆದ ಪರಿಣಾಮವಾಗಿ ಅವರಿಂದ 'ಶಾಲೆಯ ಭವಿಷ್ಯಕ್ಕೆ ಕುಂದುಂಟಾಗುತ್ತದೆ, ನಾಟಕ ರದ್ದು ಮಾಡಿ' – ಪತ್ರ.

ಇನ್ನೂ ದೊಡ್ಡ ಆಶ್ಚರ್ಯವೆಂದರೆ,

ಆ ಕಾಲದಲ್ಲೇ ನನ್ನನ್ನೂ ಕರೆದುಕೊಂಡು ಬಿಡದೆ ನಾಟಕಗಳಿಗೆ ಹೋಗುತ್ತಿದ್ದ ನನ್ನ ತಾಯಿ, ಹುಟ್ಟಾ ಧೈರ್ಯಸ್ಥೆ, ತನಗೆ ಬಂದ ಬೆದರಿಕೆ ಪತ್ರಗಳಿಗೆ ಹೆದರಿದ್ದು. ಹೆದರಿ, ನನ್ನನ್ನು ಕೋಣೆಗೆ ಹಾಕಿ, ಬೀಗ ಹಾಕಿದ್ದು.

ಒಳ್ಳೆ, ಸಾಕ್ಷಾತ್ ಮೀರಾಬಾಯಿಯೇ ಆಗಿಬಿಟ್ಟೆನಲ್ಲ ನಾನು!

ಅಷ್ಟರಲ್ಲಿ ಆ ಕರುಣಾಮಯಿ ಗಿರಿಧರ ಗೋಪಾಲ ನನ್ನ ಪತಿಯೆನಿಸಿದ್ದ ರಾಠೋಡ್‌ನನ್ನೇ ಯಾರೋ ಹೊತ್ತೊಯ್ಯುವಂತೆ ಮಾಡಿದ. ಸುದ್ದಿ ಕೇಳಿ ಅಮ್ಮ ಕೋಣೆಯಲ್ಲಿದ್ದ ಮೀರಾಳನ್ನು ಬಿಡುಗಡೆಗೊಳಿಸಿದಳು. ಮೀರಾ ಮಾರ್ಗರೆಟ್ ಕಸಿನ್ಸ್ ಮನೆಗೆ ಓಡಿಬಂದಳು. ದುಃಖ, ಅವಮಾನ, ಆಶ್ಚರ್ಯ ಎಲ್ಲ ಒಟ್ಟಾಗಿತ್ತು ಆಕೆಗೆ.

ಕಸಿನ್ಸ್, 'ನಾವು ನಾಟಕ ಮಾಡದೇ ಹೋದರೆ ನಮ್ಮದು ತಪ್ಪಾಯಿತು ಎಂದು ಒಪ್ಪಿಕೊಂಡ ಹಾಗಾಗುತ್ತದೆ' ಎನ್ನುತ್ತ ತಾನೇ ಪುರುಷ ಪಾತ್ರಧಾರಿ ಆದರು.

ಭಕ್ತ ಮೀರಾ ಹೀಗೆ ಮುಕ್ತಳಾದಳು!

••• ••• •••

ಅಮ್ಮ ಪೂಜೆಯಂತೆ, ಭಜನೆಯಂತೆ, ಹರಿಕಥೆಯಂತೆ... ಎಂದು ಒಂದು ಲಾಟೀನು ಹಿಡಿದುಕೊಂಡು ಹೊರಡುವುದು, ಸರಿರಾತ್ರಿ ಹೊತ್ತಿಗೆ ಮರಳುವುದು ಎಲ್ಲ ಸಾಮಾನ್ಯವಾಗಿತ್ತು. ಆಚೀಚಿನ ಜನ 'ಗಂಡಸರಂತೆ ಪೇಟೆಗೆ ಗೀಟೆಗೆಲ್ಲ ಹೋಗುತ್ತಾಳೆ, ಛಿ!' ಎಂದರೂ ಲಕ್ಷ್ಯವಿಲ್ಲದೆ ಮನೆಗೆ ಬೇಕಾದ ಸಾಮಾನು ತರಲು ಸ್ವತಃ ಪೇಟೆಗೆ ಹೋಗುವುದು. ವಿಶೇಷ ಅಂದರೆ ಎಳೆಯ ಹುಡುಗಿಯರೆಲ್ಲ ಅವಳನ್ನೇ ಅನುಸರಿಸಿದರು. ಗಂಡಸರಿಗೆ ಸಾಮಾನು ತರಲು ಏನು ತಿಳಿಯುತ್ತದೆ? – ಎನ್ನುತ್ತ. 'ಸಮಾಜ ಸೇವಕಿ' ಎಂಬ ಹೆಸರು ಇನ್ನೂ ಅಷ್ಟಾಗಿ ಸಾಮಾನ್ಯವಾಗಿಲ್ಲದ ಆ ಕಾಲದಲ್ಲಿ ಸಮಾಜದ ಸೇವೆಗಾಗಿ, ವಿಶೇಷತಃ ಮಹಿಳೆಯರ ಉನ್ನತಿಗಾಗಿ ಸಮಯ ವ್ಯಯಿಸಿದವಳು. ಆಚೀಚಿನ ಮಹಿಳೆಯರನ್ನು ಸೇರಿಸಿ ಅವರೆದುರು ವೃತ್ತಪತ್ರಿಕೆಯನ್ನು ಗಟ್ಟಿಯಾಗಿ ಓದುವಳು. ತಿಲಕರ 'ಕೇಸರಿ'ಯಂತೂ ಮನೆ ಮಂದಿಗಷ್ಟೇ ಅಲ್ಲ, ಅವಳ ಬಳಗಕ್ಕೂ ಬೈಬಲಿನಂತಿತ್ತು. ಆ ಕಾಲದಲ್ಲಿಯೇ ಮಂಗಳೂರಿನಲ್ಲಿ ಭಗಿನೀ ಸಂಘ ಸ್ಥಾಪಿಸಿದ್ದಳು. ಮನೆಮನೆಗೆ ಹೋಗಿ ಹೆಣ್ಣುಮಕ್ಕಳನ್ನು ಶಾಲೆಗೆ ಕಳಿಸಿ ಅಂತ ಕೇಳಿಕೊಳ್ಳುತ್ತಿದ್ದಳು.

ಅಮ್ಮನ ನಾಯಕಿಯರೆಲ್ಲ ಮಹಿಳಾ ವಿಮೋಚನೆಗಾಗಿ ಕಣಕ್ಕಿಳಿದವರು.



ಪಂಡಿತಾ ರಮಾಬಾಯಿ, ಆ್ಯನಿ ಬೆಸೆಂಟ್, ಮಾರ್ಗರೆಟ್ ಕಸಿನ್ಸ್ ಮುಂತಾದವರು. ಪಂಡಿತಾ ರಮಾಬಾಯಿ ಈ ಜಿಲ್ಲೆಯವಳೇ. ಒಂದು ದಿನ ನೀನೂ ಅವಳಂತಾಗಬೇಕು ಎನ್ನುತಿದ್ದಳು. ಆ್ಯನಿ ಬೆಸೆಂಟ್ ಒಮ್ಮೆ ಮಂಗಳೂರಿಗೆ ಬಂದಾಗ ಅಮ್ಮ ನನ್ನನ್ನು ಅವರಲ್ಲಿಗೆ ಕರೆದುಕೊಂಡು ಹೋಗಿ – 'ಆಶೀರ್ವಾದ ಮಾಡಿ. ಇವಳೂ ನಿಮ್ಮಂತೆ ಸ್ವಾತಂತ್ರ್ಯ ಹೋರಾಟಗಾರ್ತಿಯಾಗಲಿ.'

ಆ್ಯನಿ ಬೆಸೆಂಟ್ ನನ್ನ ತಲೆಯ ಮೇಲೆ ಕೈಯಿಟ್ಟರು.

'ಆಶೀರ್ವಾದ ಮಗೂ.'

ಮಿಂಚು ಸಂಚರಿಸಿದಂತೆ, ಶಕ್ತಿ ಒಮ್ಮೆಲೇ ಸಂಚಯಿಸಿದಂತೆ ಆಯ್ತು ನನಗೆ.

ವಿವರಿಸಲಾರೆ. ಅದೊಂದು ಪುಣ್ಯ ಗಳಿಗೆ.

••• ••• •••

ನೆನಪಾಗುತ್ತಿದೆ... ಆನಾನ ಕೊನೆಯ ದಿನಗಳು ಅವು. ನನ್ನನ್ನು ಕರೆದರು ಆನಾ. 'ಮಗೂ, ಏನು ಬೇಕು ನಿನಗೆ?' ಏಳು ವರ್ಷದವಳು ನಾನಿನ್ನೂ. ಬಿಕ್ಕಿಬಿಕ್ಕಿ ಅಳತೊಡಗಿದೆ. ಕೋಣೆಗೆ ಹೋಗಿ ಸ್ಲೇಟಿನ ಮೇಲೆ 'ಸಾವು' ಎಂದು ಬರೆದೆ...

ಎರಡೇ ದಿನಗಳಲ್ಲಿ ಆನಾ ತೀರಿಕೊಂಡರು. ಅದು ಆಕಾಶದಲ್ಲಿ ಹ್ಯಾಲಿ ಧೂಮಕೇತು ಕಾಣಿಸಿಕೊಂಡ ವರ್ಷ. ನನಗದು ಮೊದಲ ಆಘಾತ.

ಆನಾ ಕೇಳಿದ್ದಕ್ಕೆ ನಾನು 'ಸಾವು' ಅಂತ ಬರೆದೆ, ಯಾಕೆ?

ಅವರು ತೀರಿಕೊಂಡರೇಕೆ?

ಅಮ್ಮ ಕುಂಕುಮ ಅಳಿಸಿ ಬಿಳೀ ಸೀರೆಯುಟ್ಟಳೇಕೆ? ಉತ್ತರವೇ ಸಿಗದ ಯಾಕೆಗಳು ಎಷ್ಟಿವೆಯೋ. ಅಥವಾ, ತಬ್ಬಿಬ್ಬು ಆದಾಗೆಲ್ಲ ಆಧರಿಸಿಕೊಳ್ಳಲು ಇರುವ ಒರಗು ಕಂಬವಿರಬಹುದೆ ಅದು?

ವಿಲ್ ಮಾಡದೆ ತೀರಿಕೊಂಡಿದ್ದರು ಆನಾ. ಸಂಸಾರ ಸಮುದ್ರದಲ್ಲಿ ತನ್ನದೇ ತಾನ ಗತಿಯಲ್ಲಿ ಸಾಗುತ್ತಿದ್ದ ಹಡಗು ಅಲ್ಲೋಲಕಲ್ಲೋಲವಾಯಿತು. ಧೀರೆ ನನ್ನಮ್ಮ–ನನ್ನ ಕರಕೊಂಡು ಪುಟ್ಟ ದೋಣಿಯನೇರಿ ಪಯಣ ಮುಂದರಿಸಿದಳು.

– ಹುಟ್ಟು ಹಿಡಿದ ಅವಳ ದೃಷ್ಟಿ ದೂರ ನೆಟ್ಟಿತ್ತು. ದಿಗಂತದಲ್ಲಿ ಭರವಸೆ ಇಟ್ಟು ಸಾಗುತ್ತ ಬಂದಳಾಕೆ. ಸಾಗುವುದೇ ಜೀವನ ಎಂದಾಕೆ. ಚಲಿಸುವುದು ದೇಹವಲ್ಲ, ಮನಸ್ಸು. ಮನಸ್ಸು ನಿಂತಿತೆಂದರೆ ದೇಹ ಚಲಿಸುತ್ತಿದ್ದರೂ ನಿಂತಂತೆಯೇ ಕಾಣುತ್ತದೆ. ಜಡತ್ವದ ತವರಾಗುತ್ತದೆ... ಹೌದೆ?

ಮನದ ತೇಜ ಕಳೆಯದೆ ಕತ್ತಿ ಹಿರಿಯದೆಯೆ ಸಮರ ಎದುರಿಸಿದಳು ಅವಳು.

ಆಸ್ತಿ ವಂಚನೆ ಸಮರ, ಹಕ್ಕು ವಂಚನೆ ಸಮರ, ಒಂಟಿ ಮಹಿಳೆಯ ಸಮರ...

ನಾವು ಹೆಣ್ಣು ಹೆಂಗಸರು – ಆಸ್ತಿ ನಮಗಲ್ಲ. (ಮಲ) ಅಣ್ಣನಿಗೆ... ನಮಗೆ ಯಾವ ಹಕ್ಕೂ ಇಲ್ಲ! ...

ಶ್ರೀಮಂತ ಮನೆಯಿಂದ ಬಂದ ಅಮ್ಮ ಧಾರಾಳ ಖರ್ಚು ಮಾಡುವವಳು. ಈಗ ನಾವು ವಾಸಿಸುವ ಮನೆ ಮತ್ತು ಸಣ್ಣಪುಟ್ಟ ಆಸ್ತಿಯಿಂದ ಬರುವ ಆದಾಯ – ಅಷ್ಟೇ ಉಳಿಯಿತು.

ಆಗೆಲ್ಲ ಹಾಸ್ಟೆಲುಗಳಿರಲಿಲ್ಲವಾಗಿ ಎಷ್ಟು ಮಂದಿ ವಿದ್ಯಾರ್ಥಿಗಳು ನಮ್ಮಲ್ಲಿಗೆ ಊಟಕ್ಕೆ ಬರುತ್ತಿದ್ದರು!

ಈಗ ಇದೆಲ್ಲ ಬದಲಾಗಬೇಕಾಯ್ತು. ತಾಯಿಯೂ ಬದಲಾದಳು. ಸ್ವತಃ ನಿಂತು ಬೇಸಾಯ ಮಾಡಿಸಿದಳು. ಸ್ವತಃ ರೈತರ ಮನೆಗಳಿಗೆ ಹೋಗಿ ಅವರ ಸುಖದುಃಖಕ್ಕೆ ಮಿಡಿದಳು. ಸದಾ ಅವರ ಪರವೇ ಆಗಿದ್ದವಳು ಅವಳು. ಮುಂದೆ ಆಸ್ತಿಯೆಲ್ಲ ಮಾರಿ ನಗರದಲ್ಲೇ ಇದ್ದುಬಿಡಲು ಹೊರಟಾಗ ಅವರೆಲ್ಲ ಸಣ್ಣ ಮಕ್ಕಳಂತೆ ಅತ್ತು ಬೀಳ್ಕೊಟ್ಟ ಗಳಿಗೆ ಈಗ ನೆನೆದರೂ ಜೀವ ಕಲಕುತ್ತದೆ. ಇದನೆಲ್ಲ ನೋಡುತ್ತ ನಿದ್ದೆಯಿಂದ ಎದ್ದಂತಾದೆ ನಾನು. ಸಂಪೂರ್ಣ ಉರಿಯಲ್ಲಿ ಸಿಕ್ಕಿಬಿದ್ದ ತಾಯಿಯನ್ನು ನೋಡುತ್ತ ಜವಾಬ್ದಾರಿ ಕಲಿತೆ.

ಒಂದು ಕಾಲದಲ್ಲಿ ನಾ ಹುಟ್ಟಿ ಬೆಳೆದ ಜಿಲ್ಲೆ ಗ್ರೀಸ್ ರೋಮ್ ಈಜಿಪ್ಟ್ ಮೆಡಿಟರೇನಿಯನ್‌ವರೆಗೂ ಅರಬ್ ದೇಶಗಳೊಡನೆಯೂ ವ್ಯಾಪಾರ ವಹಿವಾಟು ನಡೆಸಿಕೊಂಡಿತ್ತು. ಮಂಗಳೂರಿಗೆ ಸಮೀಪದ ಉಳ್ಳಾಲದಲ್ಲಿ ಪೋರ್ಚುಗೀಸರಿಗೆ ಮೂರು ದಶಕಗಳ ಕಾಲ ಕಪ್ಪ ಕೊಡದೆ ಸೆಣಸಾಡಿ ದಣಿಸಿದ ಅಬ್ಬಕ್ಕ ದೇವಿ ಎಂಬ ಜೈನರಾಣಿ ಇದ್ದಳು. ಅಮ್ಮನ ನೆನಪೆಂದರೆ ನನಗೆ ಅಬ್ಬಕ್ಕ ದೇವಿಯದೇ ನೆನಪು!

••• ••• •••

ಹಾಗೆ ನೋಡಿದರೆ 'ತಂದೆಯ ಮಗಳು' ಆಗಿದ್ದೆ ನಾನು. ಅವರು ತೀರಿಕೊಂಡದ್ದೇ ಏಕಾಕಿಯಾದೆ. ಸೋದರಮಾವನ ಮನೆ ನನ್ನ ಹೊಕ್ಕು ಹೊರಡುವ ತಾಣವಾಯ್ತು. ಮಾವನ ಮನೆಯೋ, ರಾಜಕೀಯದ ಮಂದಿ ಸೇರುವ ಚಾವಡಿ. ಗೋಪಾಲಕೃಷ್ಣ ಗೋಖಲೆ, ರೈಟ್ ಆನರೇಬಲ್ ಶ್ರೀನಿವಾಸ ಶಾಸ್ತ್ರಿ, ಭಂಡಾರ್ಕರ್, ರಮಾಬಾಯಿ, ತೇಜ್ ಬಹದ್ದೂರ್ ಸಪ್ರು, ಸರ್ ಶಂಕರನ್ ನಾಯರ್, ರಾಜಾಜಿ.

—ಬರುವವರು ಸಭೆ ಸೇರುವವರು ಚರ್ಚಿಸುವವರು. ಮಾವನೊಡನಿರುವುದರಿಂದ



ನಾನೂ ಒಂದು 'ಜನ'ವಾಗಿ ಕಂಡಿರಬೇಕು, ಅವರಿಗೆ. ನನ್ನೊಡನೆ ನಾನವರ ಸರಿಸರಿ ಎಂಬಂತೆ ವರ್ತಿಸುತಿದ್ದರು. ಸಣ್ಣ ಹುಡುಗಿ ನಾನಾಗ. ದೊಡ್ಡವಳಂತೆಯೇ ಮಾವನ ಕಾಗದ ಪತ್ರ ನೋಡಿಕೊಳ್ಳುವುದು, ಅತಿಥಿಗಳ ವಿಚಾರಣೆ ಇತ್ಯಾದಿ ಮಾಡುತ್ತಿದ್ದೆ. ಕಾಲ ನನ್ನನ್ನು ರಾಜಕೀಯವಾಗಿ ಪಳಗಿಸಲು ಆಯ್ದ ಉಪಾಯವಿರಬಹುದೇ ಇದು...

ಹ್ಞಂ, ರಾಜಾಜಿ ಮಂಗಳೂರಿಗೆ ಬಂದ ನೆನಪೊಂದಿದೆ, ಹೇಳುತ್ತೇನೆ.

ಅಂತರ್ಜಾತೀಯ ಪ್ರೇಮವಿವಾಹವೊಂದರಲ್ಲಿ ವರನ ತಂದೆಯ ಪಾತ್ರ ವಹಿಸಲು ಬಂದವರು ಅವರು.

ಬ್ರಾಹ್ಮಣ ಹುಡುಗಿ. ಅಬ್ರಾಹ್ಮಣ ಹುಡುಗ. ಹುಡುಗನ ತಂದೆಯ ಪಾತ್ರಕ್ಕೆ ರಾಜಾಜಿ!

ನನ್ನ ಸೋದರಮಾವ ಮತ್ತು ರಾಜಾಜಿಯವರದೇ ಈ ಮದುವೆಗೆ ಮುಂದಾಳ್ತನ.

ಮಾವ ನನ್ನನ್ನು ಕರೆದರು. ರಾಜಾಜಿಯವರಿಗೆ ಗುರುತು ಮಾಡಿಸಿದರು. ನನಗೋ, ಯಾತಕೋ ಏನೊ, ಹಿಂದು ಮುಂದಿಲ್ಲದ ಒಂದು ಬಗೆಯ ಜಂಭ! ಮುಖ ಎತ್ತಿ ನಿಂತೆ.

ರಾಜಾಜಿ: ದೊಡ್ಡವಳಾದ ಮೇಲೆ ಏನು ಮಾಡಬೇಕೆಂದಿದ್ದೀ?

ನಾನು: ಸಮಾಜವನ್ನು, ಅದರಲ್ಲಿಯೂ ಹೆಂಗಸರ ಸ್ಥಿತಿಯನ್ನು, ಬದಲಾಯಿಸುತ್ತೇನೆ.

ರಾಜಾಜಿ: ಓ! ದೊಡ್ಡ ಮಹತ್ವಾಕಾಂಕ್ಷೆ!

ನಾನು: ಆದರೆ ನಾನೇನು ಹೆದರುವವಳಲ್ಲ.

ಆತ ನನ್ನ ತಲೆಯನ್ನು ಮೆಲ್ಲ ತಟ್ಟಿದರು.

– ಸ್ವಾತಂತ್ರ್ಯ ಹೋರಾಟಗಾರರು, ಬದುಕಿನ ಹೋರಾಟಗಾರರು ಮುಂದಿನ ಬಾಗಿಲಲ್ಲಿ ಬರುವವರು, ಹಿಂದಣ ಬಾಗಿಲಲ್ಲಿ ಬರುವವರು

– ತಂದೆಯ ಚಾವಡಿಯವರು, ಅಮ್ಮನ ಜಗಲಿಯವರು

– ಎಲ್ಲರೂ ಬಾಲ್ಯದ ಕರಂಡಕದಲ್ಲಿ ಸೇರಿಹೋದರು.

ಪುಷ್ಟಿಯ ಕಣವಾಗಿ ನನ್ನೊಳಗೆ ಕರಗಿದರು...

••• ••• •••

ರಾಜಾಜಿಯವರಿಗೆ ನಾನಂದು ನೀಡಿದ ಉತ್ತರಕ್ಕೆ ಆಗಲೇ ಸಣ್ಣ ಹಿನ್ನೆಲೆಯಿತ್ತು ಎಂಬುದು ನನಗೆ ಅರಿವಾದದ್ದು ಬಹಳ ಸಮಯದ ನಂತರ.

ಅಕ್ಕ ಲಕ್ಷ್ಮೀ ಸಾಯುವಾಗ, ನಾನಿನ್ನೂ ಚಿಕ್ಕವಳು.

ನನಗಿಂತ ಅವಳ ಮಕ್ಕಳು ದೊಡ್ಡವರು. ಶ್ರೀಮಂತ ಗಂಡನ ಮನೆ ಅವಳಿಗೆ ಸೆರೆಮನೆ ಆಗಿತ್ತು. ಬರೀ ಸೆರೆಮನೆಯಲ್ಲ 'ಸೆರೆ'ಯ ಮನೆಯೂ. ಕುಡಿಯುವ, ಹೊಡೆಯುವ ಗಂಡನೊಟ್ಟಿಗೆ ಚಕಾರವೆತ್ತದೆ ತವರಿಗೂ ಬಾರದೆ ಆರು ಮಕ್ಕಳಿಗೆ ಜನ್ಮವಿತ್ತು ಜಗತ್ತಿಗೆ ತನ್ನ ದುಃಖವನ್ನೇ ತೋರದೆ ಒಂದು ದಿನ ಅವಳು ವಿದಾಯ ಹೇಳಿದಳು!

ಇನ್ನೊಬ್ಬ ಅಕ್ಕ ಸುಗುಣ –

ಬದುಕಿನಲ್ಲಿ ಅವಳಿಗೂ ಎಲ್ಲವೂ ಇತ್ತು (ಪ್ರೀತಿಯೊಂದು ಬಿಟ್ಟು). ಕಾಯಿಲೆ ಮಲಗಿದ ಅವಳನ್ನು ನೋಡಲೆಂದು ಬಂದ ಗಂಡ ಮಕ್ಕಳನ್ನು ಎಳೆದುಕೊಂಡು ಹೋದ ದೃಶ್ಯ ಕೇವಲ ದೃಶ್ಯವಾಗಿ ಉಳಿಯುತ್ತದೇನು?

ಇನ್ನು, ಗಂಡ ಸತ್ತು ನಮ್ಮ ಮನೆ ಸೇರಿದ ಪ್ರೀತಿ 'ಪಚ್ಚಿ'.

ತನ್ನ ಕಷ್ಟದ ಕುಲುಮೆಯಲ್ಲಿ ಬೆಂದು ಇನ್ನೊಬ್ಬರ ಕಷ್ಟ ಅರ್ಥಮಾಡಿಕೊಳ್ಳುವ ಅಪೂರ್ವ ಶಕ್ತಿ ಪಡೆದವಳು. ಸಂಕಟದ ಸಮಯಕ್ಕೆ ನಾನಿದ್ದೇನೆ ಎಂದು ಬಂದವಳು. ಪರೋಪಕಾರವನ್ನು ಯಜ್ಞದಂತೆ ನಡೆಸಿ ದಿವ ಸೇರಿದವಳು. ನಾನೂ ನನ್ನ ಕಷ್ಟಕಾಲದಲ್ಲಿ ಎಷ್ಟು ಸಲ ಅವಳನ್ನು ಕರೆದಿದ್ದೆನೋ.

ಎಲ್ಲ ಎಲ್ಲಿ ಮರೆಯಾದರು. ನೆನಪಿನ ಮನೆ ಹೊಕ್ಕು ಬಾಗಿಲು ಮುಚ್ಚಿದರು.

ನನ್ನ ದೇಶದ ಮಹಿಳೆಯರ ಸ್ಥಿತಿಯನ್ನು ಚಿತ್ರವತ್ತಾಗಿ ಮನವರಿಕೆ ಮಾಡಿಕೊಡಲೆಂದೇ ಬಂದರೆ ಅವರು? ಮನಸು ಅವರ ದಾರುಣ ಬದುಕಿನ, ಸಾವಿನ ಚಿತ್ರ ಕೆತ್ತಿ ತೆಗೆದಿಟ್ಟಿತು.

ಕಣ್ಮುಚ್ಚಿದರೆ ಸಾಕು – ಅದು ಥಕ್ಕನೆ ತೆರೆದುಕೊಳ್ಳುತ್ತದೆ.

ಮುಂದೆ, ನನ್ನ ಕತೆ? ವಿಧಿ ನೋಡುನೋಡುತ್ತಿದ್ದಂತೆ ನನ್ನನ್ನೂ ಅದೇ ವರ್ತುಲದೊಳಗೆ ತಳ್ಳಿತು! ಮದುವೆಯಾದ ಹುಡುಗಿ ಕೈ ಬಳೆ ಕುಲುಕಿ ಕಿವಿಗಿಟ್ಟು ಆಲಿಸುವುದರೊಳಗೆ ವೈಧವ್ಯ ಎದುರಾಯಿತು.

ಈ ಮನೆಯ ಹೆಣ್ಣುಮಕ್ಕಳಿಗೆ ಯಾಕೆ ಹೀಗಾಯ್ತು? ವಿದ್ಯೆ, ಬುದ್ಧಿ, ಶ್ರೀಮಂತಿಕೆ ಎಲ್ಲ ಲಭಿಸಿಯೂ ದಾಂಪತ್ಯದ ಬದುಕೇ ಕಂಟಕವಾಯ್ತು? – ಅಂತೆಲ್ಲ ನಾನು ಕೊರಗುತ್ತಿದ್ದ ಕಾಲವಿತ್ತು. ಆದರೆ ದಿನ ಹೋದಂತೆ ಮನಸ್ಸು ಎಲ್ಲವನ್ನೂ ತನ್ನದೇ ರೀತಿಯಲ್ಲಿ ಗ್ರಹಿಸತೊಡಗಿತು. ತನ್ನ ಮೇಲೆ ತನಗೇ ಹಿಡಿತವಿಲ್ಲದ ಗಂಡನಿಂದ ಹೊರಬರಲು, ಸ್ವತಂತ್ರವಾಗಿ ನಡೆಯಲು, ಅಕ್ಕಂದಿರ ಪಚ್ಚಿಯ ಬದುಕಿನ ಪುಟಗಳೇ ಧೈರ್ಯ ನೀಡಿರಬಹುದು. ಇದು ಮಹಿಳಾ ಜಗತ್ತು. ನನ್ನ ಕಣ್ಣ ಮುಂದೆಯೇ



ಅನಾವರಣಗೊಳ್ಳುತ್ತ ಕೊನೆಗೆ ನನ್ನನ್ನೂ ಸೇರಿಸಿಕೊಂಡೇ ನಡೆದ ಪರಿ. ನೆನೆದರೆ ಈ ದೇಶದ ಸ್ತ್ರೀ ಸಮುದಾಯದ ಸ್ಥಿತಿ ಗತಿ ಕುರಿತು ನನಗೆ ಸಿಕ್ಕ ಪ್ರತ್ಯಕ್ಷ ಪಾಠವಲ್ಲವೆ ಇದು? ಅತಿಕ್ರಮಣ, ಅತ್ಯಾಚಾರ, ದೈಹಿಕ, ಮಾನಸಿಕ ಹಿಂಸೆ, ಇಲ್ಲಿನ ದಿನನಿತ್ಯದ ಪುಟಗಳು. ಶಾಂತಿ ಕಾಲದಲ್ಲೂ, ಯುದ್ಧ ಕಾಲದಲ್ಲೂ.

ಯುದ್ಧದಲ್ಲಂತೂ, ಅದು ಯಾವುದೇ ಯುದ್ಧವಿರಲಿ – ಅಂತಿಮವಾಗಿ ಬಲಿಯಾಗುವುದು ಸ್ತ್ರೀ. ಅವಳ ಶೀಲ, ಅವಳ ದೇಹ. ಕಣ್ಣಾರೆ ನೋಡಿದೆನಲ್ಲ ವಿಭಜನೆಯ ದಿನಗಳಲ್ಲಿ. ಏನಾಗಿಹೋಯ್ತು. ಹೋ. ಅದನ್ನ ಮಾತಿನಂಶಕ್ಕಾದರೂ ಮರುನೆನೆಯಲಾರೆ.

ಹ್ಞಾಂ, ಮನೆಯ ವಿಧವೆಯರ ಸಾಲಿಗೆ ನಾನೂ ಸೇರಿ ಹೋದೆ.

ಅಮ್ಮ ಆಘಾತಗೊಂಡಳು. ಕಾಲದ ತೀರ್ಮಾನವೇ ಬೇರೆ. ಅಜ್ಜಿಯ ವೈಧವ್ಯದ ರೀತಿ ಅಮ್ಮನದಲ್ಲ. ಅಮ್ಮನಂತೆ ನಾನಲ್ಲ. ಅವಳಂತಾಗಲು ಅವಳೇ ಬಿಡಲಿಲ್ಲ! ಮಗಳು ತನ್ನಂತಾಗಬಾರದು. ಕಾಲದೊಂದಿಗೆ ಆಕೆ ಮುಂದೆ ಹೋಗಬೇಕು. ಸುಶಿಕ್ಷಿತೆಯಾಗಬೇಕು...

ಕನಸಿನೊಂದಿಗೆ ಮಗಳ ಕೈಹಿಡಿದುಕೊಂಡು ಮದರಾಸಿಗೆ ಬಂದಳು.

– ಮದರಾಸು... ನನ್ನ ಬದುಕಿನ ಇನ್ನೊಂದೇ ಆಕಾಶವಾಯ್ತು.

••• ••• •••

ಬದುಕು, ನದಿಯಂತೆ ಎನ್ನುತ್ತಾರೆ.

ಎಲ್ಲಿಯೋ ಹುಟ್ಟಿ, ಎಲ್ಲಿಯೋ ಬೆಳೆದು ಎಲ್ಲಿಯೋ ಮುಕ್ತಾಯಗೊಳ್ಳುವ ಮನುಷ್ಯ ಬದುಕು ನದಿಗಿಂತಲೂ ವಿಚಿತ್ರ!

ನದಿಗೆ ಅದರದೇ ಪಾತ್ರ, ಪಥ, ಗುರಿ ಇರುತ್ತದೆ.

ಮನುಷ್ಯ ಜೀವನಕ್ಕೆಲ್ಲಿದೆ ನಿರ್ದಿಷ್ಟತೆ?

ಇಂಥದೇ ಪಾತ್ರ? ಗುರಿ?

ಹೋದದ್ದೇ ದಾರಿ. ತಲುಪಿದ್ದೇ ಗುರಿ.

# ಅಶೀಶ್ ನಂದಿಯವರ ಕ್ರೀಡನೀಯ ಕ್ರಿಯಾಶೀಲತೆ

ಅಕ್ಷರ ಕೆ.ವಿ.

ಸಮಕಾಲೀನ ಭಾರತದ ಪ್ರಮುಖ ಚಿಂತಕ-ಲೇಖಕ ಅಶೀಶ್ ನಂದಿಯವರಿಗೆ ಇದೀಗ ೭೫ ವರ್ಷ ತುಂಬುತ್ತಿರುವ ಸಂದರ್ಭದಲ್ಲಿ ಬರೆಯಲಾದ ಈ ಲೇಖನವು ವಿಜಯಕರ್ನಾಟಕ ಪತ್ರಿಕೆಯಲ್ಲಿ ಪ್ರಕಟವಾಗಿದೆ. ನೀನಾಸಮ್ ಸಂಸ್ಥೆಯ ಗೌರವದ ಕುರುಹಾಗಿ ನಾವಿದನ್ನು ಆಭಾರಪೂರ್ವಕ ಇಲ್ಲಿ ಪುನರ್ಮುದ್ರಿಸುತ್ತಿದ್ದೇವೆ.

ಕಿಟಕಿಯಾಚೆ ಕಾಣುವ ಮರವೊಂದು ನಾವು ನೋಡದೆ ಇರುವ ಸಮಯದಲ್ಲೂ ಕೂಡ ಅಲ್ಲೇ ಇರುತ್ತದೆಯೆ? -- ಎಂಬ ಒಂದು ವಿಚಿತ್ರ ಪ್ರಶ್ನೆಯನ್ನು ಎದುರಿಗಿಟ್ಟುಕೊಂಡು ಅದರ ಪರ ಮತ್ತು ವಿರೋಧವಾಗಿ ತತ್ತ್ವಜ್ಞರು ದೊಡ್ಡ ಜಿಜ್ಞಾಸೆ ನಡೆಸಿದ್ದಾರೆ. ಇಂಥ ಜಿಜ್ಞಾಸೆಗೆ ಉತ್ತರ ಏನೂ ಇರಲಿ, ಇಂಥ ಚರ್ಚೆಗಳಿಂದ ಆಗುವ ಲಾಭ ಅಸಾಧಾರಣವಾದದ್ದು – ಇಂಥದೊಂದು ಪ್ರಸ್ತಾಪವನ್ನು ಎತ್ತುತ್ತಿದ್ದಂತೆಯೇ ಮಲಗಿರುವ ನಮ್ಮ ಮನಸ್ಸು ಹಠಾತ್ತಾಗಿ ಜಾಗೃತಗೊಂಡು ಯೋಚನೆಯೆಂಬ ಕೆಲಸಕ್ಕೆ ತೊಡಗಿಕೊಳ್ಳುತ್ತದೆ; ನಮಗೆ ಚೆನ್ನಾಗಿ ಗೊತ್ತು ಎಂದು ನಾವು ತಿಳಿದ ಸಂಗತಿಗಳು ನಮಗೆ ಅಷ್ಟೇನೂ ನಿಖರವಾಗಿ ಗೊತ್ತಿಲ್ಲ ಎಂದು ಗಾಬರಿಯಾಗುತ್ತದೆ; ಹಲವೊಮ್ಮೆ ನಮ್ಮ ದೃಢನಂಬಿಕೆಗಳ ತಳಪಾಯಗಳೇ ಇಂಥ ಚರ್ಚೆಯಿಂದ ಅಲ್ಲಾಡಲು ಆರಂಭಗೊಳ್ಳುತ್ತವೆ. ಅಷ್ಟೇ ಅಲ್ಲ, ನಾವು ಕ್ರಿಯಾಶೀಲತೆಯೆಂದು ತಿಳಿದು ಈವರೆಗೂ ಮಾತಾಡುತ್ತ ಮಾಡುತ್ತ ಬಂದಿರುವ ಉದ್ಯೋಗಗಳೆಲ್ಲ ಕೇವಲ ಮತ್ಯಾರೋ ಜಗಿದುಗುಳಿದ ತಾಂಬೂಲದ ಮರುಚರ್ವಣ ಮಾತ್ರ – ಎಂದು ಅರಿವಾಗಿ ನಮ್ಮ ಕ್ರಿಯಾಮಾರ್ಗವನ್ನೇ ಪುನರ್ವಿಮರ್ಶೆಗೆ ಒಡ್ಡಿಕೊಳ್ಳುವ ಪ್ರೇರಣೆ ಕೂಡ ಇಂಥ ಪ್ರಶ್ನೆಗಳಿಂದಲೇ ಹುಟ್ಟುತ್ತದೆ. ಯಾವುದೇ ಕಾಲದೇಶಗಳ ಒಂದು ಕ್ರಿಯಾಶೀಲ



ವ್ಯಕ್ತಿತ್ವವು – ಅದು ಸಾಹಿತಿ- ಕಲಾವಿದರದಿರಲಿ, ವಿಜ್ಞಾನಿ-ಚಿಂತಕರದಿರಲಿ – ನಿಜವಾಗಿ ಕ್ರಿಯಾಶೀಲವೆಂಬ ಹಣೆಪಟ್ಟಿಗೆ ಯೋಗ್ಯತೆ ಪಡೆಯುವುದು ಇಂಥ ಪ್ರಶ್ನೆಗಳನ್ನೆತ್ತುವ ಸಾಮರ್ಥ್ಯದಿಂದಲೇ ಸರಿ. ನಮ್ಮ ಕಾಲದಲ್ಲಿ ಬದುಕುತ್ತಿರುವ ಮಹತ್ತ್ವದ ಚಿಂತಕ ಅಶೀಶ್ ನಂದಿಯವರು ಈ ಬಗೆಯ ಕ್ರಿಯಾಶೀಲತೆ ಪಡೆದವರೆಂದು ನಾನು ತಿಳಿದಿದ್ದೇನೆ.

ಹೊಟ್ಟೆ ತುಂಬ ಉಂಡು ಆರಾಮ ಕುರ್ಚಿಯ ಮೇಲೆ ತೂಕಡಿಸುವ ಪ್ರಭೃತಿಗಳು ಮಾತ್ರವೇ ಇಂಥ ಅನುಪಯುಕ್ತ ಚರ್ಚೆಗಳನ್ನು ಹುಟ್ಟುಹಾಕುತ್ತಾರೆ – ಎಂದೇನಾದರೂ ನೀವು ಭಾವಿಸಿಕೊಂಡ ಪಕ್ಷದಲ್ಲಿ, ಅಶೀಶ್ ನಂದಿಯವರ ಕೆಲವೇ ಲೇಖನಗಳನ್ನಾದರೂ ಓದಬೇಕು. ನಂದಿಯವರದು ಆರಾಮ ಕುರ್ಚಿಯ ಚಿಂತನೆ ಅಲ್ಲ; ಬದಲು, ಸಿದ್ಧ-ಸಿದ್ಧಾಂತಗಳೆಂಬ ಆರಾಮ ಕುರ್ಚಿಯಲ್ಲಿ ಒರಗಿದವರನ್ನು ಹೌಹಾರಿಸಿ ಬೀಳಿಸುವ ಚಿಂತನೆ. ಉದಾಹರಣೆಗೆ, ಸೆಕ್ಯುಲರಿಸಮ್ ಮತ್ತು ಕೋಮುವಾದವೆಂಬ ಜೋಡಿ ಪರಿಕಲ್ಪನೆಗಳ ಬಗ್ಗೆ ಅವರು ಹಲವಾರು ಲೇಖನಗಳಲ್ಲಿ ಬರೆದಿರುವುದನ್ನೇ ಗಮನಿಸಬಹುದು. ನಂದಿ ಅವರ ಪ್ರಕಾರ, ಸೆಕ್ಯುಲರಿಸಮ್ ಮತ್ತು ಕೋಮುವಾದಗಳು ಇವತ್ತು ಜನಪ್ರಿಯ ನೆಲೆಯಲ್ಲಿ ಪರಸ್ಪರ ಹೊಡೆದಾಡಿಕೊಳ್ಳುತ್ತಿರುವ ಶತ್ರುಗಳಂತೆ ಬಿಂಬಿತವಾಗುತ್ತಿದ್ದರೂ ಕೂಡ ನಿಜವಾಗಿ ಅವು ವಿರೋಧಿ ಮೂಲದ ಪರಿಕಲ್ಪನೆಗಳಲ್ಲ. ಹಳೆಗಾಲದ ಸಿನೆಮಾಗಳಲ್ಲಿ ರೈಲಿನಿಂದ ಆಚೀಚೆಗೆ ಬಿದ್ದು ಕಳೆದುಹೋದ ಅವಳಿ ಮಕ್ಕಳು ಮುಂದೆ ಕಳ್ಳಪೋಲೀಸರಾಗಿ ಸಿನೆಮಾದ ತುದಿಯವರೆಗೂ ಹೊಡೆದಾಡಿಕೊಳ್ಳುವಂತೆ, ಈ ಸೆಕ್ಯುಲರಿಸಮ್ ಮತ್ತು ಕೋಮುವಾದಗಳು ಮೂಲತಃ ಆಧುನಿಕತೆಯ ಅವ್ಯಕ್ತ ಸಂತಾನಗಳು; ಒಂದೇ ಸೊಂಟವನ್ನು ಹಂಚಿಕೊಂಡಿರುವ ಸಯಾಮಿ ಅವಳಿಗಳು. ಆದ್ದರಿಂದಲೇ ಒಂದೆಡೆ ಸೆಕ್ಯುಲರಿಸಮ್ಮಿನ ಉಗ್ರ ಪ್ರತಿಪಾದನೆ ಹೆಚ್ಚುತ್ತಿದ್ದಂತೆ, ಅದಕ್ಕೆ ಪ್ರತಿಕ್ರಿಯಾತ್ಮಕವಾಗಿ ಇನ್ನೊಂದೆಡೆ ಅಷ್ಟೇ ಪ್ರಬಲವಾದ ಕೋಮುವಾದವೂ ಬಲಗೊಳ್ಳುತ್ತ ಹೋಗುತ್ತದೆ -- ಎಂಬ ಸೂಚನೆಯನ್ನು ನಂದಿಯವರ ಬರಹಗಳು ಮುಂದಿಡುತ್ತವೆ.

ಹಾಗಂತ, ಇಂಥ ಒಂದು ಪ್ರಸ್ತಾಪವನ್ನು ನಂದಿಯವರು ರೋಚಕವಾದ ಒಂದು ರೂಪಕವಾಗಿ ಮಾತ್ರ ಮಂಡಿಸುವುದಿಲ್ಲ ಎಂಬುದನ್ನೂ ನಾವು ಅಗತ್ಯ ಗಮನಿಸಬೇಕು. ಬದಲು, ಇಂಥ ವೈರುದ್ಧ್ಯಗಳು ಹೇಗೆ ಇವತ್ತಿನ ಕಾಲದ ನಮ್ಮ ವಿದ್ಯಮಾನಗಳಲ್ಲಿ ಮೇಲುಗಣ್ಣಿಗೆ ಕಾಣದ ಹಾಗೆ ಕರಗಿಹೋಗಿವೆ ಎಂಬುದನ್ನೂ ಸಾವಧಾನವಾಗಿ, ವಾಸ್ತವಾಂಶಗಳ ಅಧ್ಯಯನಗಳ ಮೂಲಕ ಅವರು ಬಿಚ್ಚಿಡುತ್ತ ಹೋಗುತ್ತಾರೆ. ಉದಾಹರಣೆಗೆ, ತಮ್ಮ ಸಹೋದ್ಯೋಗಿಯ ಜತೆ ಬರೆದಿರುವ ತಮ್ಮೊಂದು ಪುಸ್ತಕದಲ್ಲಿ

ಅವರು ಬಾಬ್ರಿ ಮಸೀದಿ ಕೆಡವಿದ ಅನಂತರದ ಅಯೋಧ್ಯೆ ಮತ್ತು ಭಾರತದ ಕಥನವನ್ನು ಮಾಡುತ್ತ, ಹೇಗೆ ಇಂಥ ವೈರುದ್ಧ್ಯಾತ್ಮಕ ಪರಿಕಲ್ಪನೆ-ಪರಿಭಾಷೆಗಳೇ ಈ ಸಮಸ್ಯೆಗೆ ಮೂಲವೆಂಬುದನ್ನೂ ಮತ್ತು ಅವೇ ಈ ಸಮಸ್ಯೆಯ ಪರಿಹಾರಕ್ಕಿರುವ ತೊಡಕುಗಳೆಂಬುದನ್ನೂ ನಿಜದೃಷ್ಟಾಂತಗಳ ಮೂಲಕ ವಿಶದಪಡಿಸುತ್ತಾರೆ. ಆದ್ದರಿಂದ, ಬಾಬ್ರಿ ಮಸೀದಿಯ ಬಿಕ್ಕಟ್ಟನ್ನು ಒಂದು ರಾಷ್ಟ್ರೀಯ ಸಮಸ್ಯೆಯಾಗಿಯೋ ಸೈದ್ಧಾಂತಿಕ ಸಂಘರ್ಷವಾಗಿಯೋ ಗ್ರಹಿಸದೆ, ಅದನ್ನು ಸ್ಥಳೀಯ ಸಮುದಾಯಗಳ ನೆಲೆಯಿಂದಲೇ ಗ್ರಹಿಸಲು ಸಾಧ್ಯವಾದರೆ, ಅದಕ್ಕೆ ಪರಿಹಾರ ಸಿಕ್ಕೀತೆಂಬ ಸೂಚನೆಯೂ ಆ ಬರಹಗಳಲ್ಲಿದೆ. ದೃಷ್ಟಾಂತಕ್ಕೆ, ಆ ಪುಸ್ತಕದಲ್ಲಿರುವ ಹಲವು ಸ್ವಾರಸ್ಯಕರ ಪ್ರಸ್ತಾಪಗಳಿಂದ ಒಂದೇ ಉಲ್ಲೇಖ ಎತ್ತಿ ಹೇಳುತ್ತೇನೆ – ಬಾಬ್ರಿ ಮಸೀದಿ ಉರುಳಿದ ಹಲವು ತಿಂಗಳ ಅನಂತರ, ಜಿಲ್ಲಾಕೇಂದ್ರ ಫೈಜಾಬಾದಿನ ನ್ಯಾಯಾಲಯದಲ್ಲಿ ನಡೆಯುತ್ತಿದ್ದ ಆ ಖಟ್ಲೆಯಲ್ಲಿ ಪಾಲ್ಗೊಳ್ಳಲಿಕ್ಕೆ ಪರ-ವಿರೋಧದ ಎರಡೂ ಪಕ್ಷದವರೂ ಅಯೋಧ್ಯೆಯಿಂದ ಒಂದೇ ವಾಹನದಲ್ಲಿ ಹೋಗಿಬರುತ್ತಿದ್ದರಂತೆ. ಇದಕ್ಕೆ ಕಾರಣವೇನೆಂದು ಸಂದರ್ಶಕರು ವಿಚಾರಿಸಲಾಗಿ ಅವರು ತುಂಬ ಸಹಜವೆಂಬಂತೆ ಹೇಳಿದರಂತೆ – 'ಮಾತಾಡುತ್ತ ಹೋಗುತ್ತೇವೆ, ಮಾತಾಡುತ್ತ ಬರುತ್ತೇವೆ; ಮತ್ತೆ ಈಗ ಎರಡೆರಡು ವಾಹನ ಮಾಡಿಸಲಿಕ್ಕೆ ಪೆಟ್ರೋಲೂ ದುಬಾರಿಯಾಗಿದೆಯಲ್ಲ!'

ಹೀಗೆ, ನಾವು ಯಾವುದನ್ನು ಸ್ವತಃಸಿದ್ಧ ಸತ್ಯ ಎಂದು ನಂಬಿರುತ್ತೇವೋ ಅದನ್ನು ಬೇರೆ ದಿಕ್ಕಿನಿಂದ ಪರಾಮರ್ಶಿಸಿ, ಅದು ಹಲವೊಮ್ಮೆ ನಮ್ಮ ರೂಢಿಗತ ನಂಬಿಕೆಗಳ ಉತ್ಪನ್ನವಾಗಿರಬಹುದು, ಸಿದ್ಧಮಾದರಿಯ ಚಿಂತನೆಗಳ ಪರಿಣಾಮ ಮಾತ್ರ ಆಗಿರಬಹುದು ಅಥವಾ ಕೆಲವೊಮ್ಮೆ ಕೇವಲ ಬೌದ್ಧಿಕ ಸೋಮಾರಿತನದ ಫಲವಷ್ಟೇ ಆಗಿರಬಹುದು -- ಎಂದು ಯೋಚಿಸಲು ಹಚ್ಚುವುದೇ ಅಶೀಶ್ ನಂದಿಯವರ ಕ್ರಿಯಾಶೀಲತೆಯ ಮೂಲ ಆಶಯವೆಂದು ನಾನು ತಿಳಿಯುತ್ತೇನೆ. ಇದಕ್ಕೆ ಕೆಲವೇ ಉದಾಹರಣೆಗಳನ್ನು ಅವರ ಬರಹಗಳಿಂದ ಹೆಕ್ಕಿ ನಾನಿಲ್ಲಿ ಚುಟುಕಾಗಿ ನಮೂದಿಸುತ್ತೇನೆ. ಸತಿ ಪದ್ಧತಿಯು ಭಾರತದ ಶತಶತಮಾನಗಳ ಹಿಂದುಳಿಯುವಿಕೆಗೆ ಲಾಂಛನವೆಂಬ ನಂಬಿಕೆ ನಮಗೆ ರೂಢಿಗತವಾಗಿ ಬಂದಿದೆ. ಸತಿ ಕುರಿತ ನಂದಿಯವರ ಲೇಖನ ಈ ಆಚರಣೆಯ ಇನ್ನೊಂದು ಆಯಾಮವನ್ನು ನಮ್ಮೆದುರಿಗೆ ವಿವರವಾಗಿ ಬಿಚ್ಚುತ್ತದೆ. ಹೇಗೆ ರಾಜಾ ರಾಮ್‌ಮೋಹನ ರಾಯ್ ಅವರ ಮಾನಸಿಕ-ಸಾಮಾಜಿಕ ಹಿನ್ನೆಲೆಗಳು ಅವರ ಸತಿ ವಿರೋಧಕ್ಕೆ ಪ್ರೇರಣೆಯೊದಗಿಸಿದವು, ಹೇಗೆ ಆಧುನಿಕತೆಯ ಸಂಸರ್ಗದಿಂದ ನಾವು ಕೆಲವು ಬಗೆಯ ಆಚರಣೆಗಳನ್ನು ಭಾರತದ ಮೂಢನಂಬಿಕೆಯ ದ್ಯೋತಕಗಳೆಂದು ತಿಳಿಯಲಾರಂಭಿಸಿದೆವು ಮೊದಲಾದ ಪ್ರಸ್ತಾಪಗಳ ಮೂಲಕ ಈ



ಲೇಖನವು ಸತಿಆಚರಣೆಯೂ ಸೇರಿದಂತೆ ಹಲವು ರೀತಿಯ ವೈರುದ್ಧ್ಯಪೂರ್ಣ ನಂಬಿಕೆ-ನೀತಿಗಳನ್ನು ಒಳಗೊಂಡ ನಮ್ಮ ಸಂಪ್ರದಾಯವನ್ನು ಹೊಸ ಬಗೆಯಿಂದ ನೋಡುವ ದೃಷ್ಟಿಯೊಂದನ್ನು ತೆರೆಸುತ್ತದೆ. ಹಾಗಂತ, ಕೆಲವು ಅವಸರದ ಓದುಗರು ತೀರ್ಮಾನಿಸುವಂತೆ, ನಂದಿಯವರು ಈ ಲೇಖನದಲ್ಲಿ ಸತಿಯ ಸಮರ್ಥನೆ ಮಾಡಿಲ್ಲ ಎಂಬುದನ್ನೂ ಅವಶ್ಯ ಗಮನಿಸಬೇಕು; ಬದಲು, ಈ ಆಚರಣೆಯನ್ನು ಒಂದು ಲಾಂಛನವೆಂದು ಭಾವಿಸುವ ಯೋಚನಾಕ್ರಮವನ್ನು ಅವರು ಪ್ರಶ್ನೆಮಾಡಿದ್ದಾರೆ. ಇನ್ನೊಂದು ಬಗೆಯಿಂದ, ನಂದಿಯವರ ಕ್ರಿಯಾಶೀಲ ಚಿಂತನಮಾರ್ಗದ ವೈಶಿಷ್ಟ್ಯವನ್ನು ಹೀಗೂ ಗುರುತಿಸಬಹುದು – ಅದು ಹೀಗಿದೆ ಎಂದು ವಿವರಿಸುವ ಸಮೀಕ್ಷಣಕಾರ ಅವರಲ್ಲ; ಅದು ಯಾಕೆ ಹೀಗಿದೆ ಎಂದು ವಿಚಾರಿಸುವ ವಿಶ್ಲೇಷಣಕಾರ ಮಾತ್ರರೂ ಅವರಲ್ಲ. ಬದಲು, 'ಅದ'ರ 'ಅದುತನ'ವನ್ನೇ ಅನುಮಾನಿಸುವ 'ತತ್-ತ್ವ-ಜ್ಞ' ಅವರು.

ಅಶೀಶ್ ನಂದಿಯವರ ಹಲವು ಬರಹಗಳ ಇನ್ನೊಂದು ಪ್ರಮುಖ ವಿಶೇಷ – ಕ್ರೀಡನೀಯಕ ಗುಣ. ಚಿಂತನೆಗಳ ಒಜ್ಜೆಯಿಂದ ತಾನೂ ಭಾರವಾಗಿ ನಮ್ಮನ್ನೂ ಬಸವಳಿಯುವಂತೆ ಮಾಡುವ ಬರವಣಿಗೆ ಅವರದಲ್ಲ. ಕ್ರಿಕೆಟ್ಟನ್ನು ಕುರಿತ ಅವರ ಲೇಖನಗಳು, ಜನಪ್ರಿಯ ಸಿನೆಮಾದ ಬಗ್ಗೆ ಅವರು ಮಾಡಿದ ವಿಶ್ಲೇಷಣೆಗಳು ಈ ಗುಣವನ್ನು ಢಾಳಾಗಿ ಕಾಣಿಸುತ್ತವೆ. ಹಾಗಂತ ಈ ಬರಹಗಳು ಕೇವಲ ರಂಜನೀಯ ಸರಸ ಪ್ರಬಂಧಗಳಲ್ಲ. ಹಲವು ವರ್ಷಗಳ ಹಿಂದೆ ಭಾರತದಿಂದ ಪಾಕಿಸ್ತಾನಕ್ಕೆ ವಿಮಾನಾಪಹರಣ ಮಾಡಿದ ಇಬ್ಬರು ಉಗ್ರಗಾಮಿಗಳನ್ನು ಕುರಿತ ಅವರ ಒಂದು ಲೇಖನ ಇಂಥ ರಂಜನೋದ್ದೇಶವೇ ಮುಖ್ಯವಲ್ಲದ ಕ್ರೀಡನೀಯತೆಗೆ ಅತ್ಯುತ್ತಮ ಉದಾಹರಣೆ. ಹೇಗೆ ಈ 'ಹವ್ಯಾಸಿ ಭಯೋತ್ಪಾದಕ'ರು ಈ ವಿಮಾನಾಪಹರಣವನ್ನು ನಿರ್ವಹಿಸಿದರೆಂಬುದನ್ನು ಲಘುಮಾತುಗಳಲ್ಲಿ ವರ್ಣಿಸುತ್ತಹೋಗುವ ಈ ಲೇಖನವು ತನ್ನ ದ್ವಿತೀಯಾರ್ಧದಲ್ಲಿ ತಿರುವು ಪಡೆದು, ಇನ್ನು ಮುಂದೆ ಜಾಗತಿಕ ಭಯೋತ್ಪಾದನೆಯೆಂಬ ಭಾರೀ ಉದ್ಯಮಕ್ಕೆ ಸೇರಲಿರುವ ಈ ದಂಧೆಯು ಇಷ್ಟು ಕ್ರೀಡನೀಯಕವಾಗಿ ಉಳಿಯಲಾರದು ಎಂಬ ಗಂಭೀರ ವಿಷಾದದೊಂದಿಗೆ ಮುಗಿಯುತ್ತದೆ. ಗೋಡ್ಸೆ ಮತ್ತು ಗಾಂಧಿಯವರ ಮುಖಾಮುಖಿ ಕುರಿತ ಅವರ ಪ್ರಸಿದ್ಧ ಲೇಖನದಲ್ಲಿ ಕೂಡ ಅವರು ಈ ಇಬ್ಬರು ವ್ಯಕ್ತಿವಿಶೇಷಗಳ ಮನೋವೈಜ್ಞಾನಿಕ ವಿಶ್ಲೇಷಣೆ ಮಾಡುತ್ತ, ಹೇಗೆ ಒಂದು ಚಾರಿತ್ರಿಕ ಹತ್ಯೆಯೆಂಬುದು ಕೇವಲ ಮಾನವ ವ್ಯಕ್ತಿಗಳಿಂದ ಮಾಡಲ್ಪಡದೆ, ಇಡಿಯ ಸಾಮಾಜಿಕ-ಸಾಂಸ್ಕೃತಿಕ ಸಂದರ್ಭದಿಂದ ರೂಪುಗೊಳ್ಳುತ್ತದೆಯೆಂಬುದನ್ನು ಮನೋಜ್ಞವಾಗಿ ವರ್ಣಿಸುತ್ತಾರೆ.

ಸಿದ್ಧ ಮಾದರಿಗಳ ಈ ಬಗೆಯ ಕ್ರಿಯಾಶೀಲ ನಿರಚನೆಯೇ ನಂದಿಯವರ ಬರವಣಿಗೆಗಳ ಮೂಲಸ್ರೋತ ಆಗಿರುವುದರಿಂದ ಸಹಜವಾಗಿಯೇ ಇವತ್ತಿನ ಭಾರತದ ಬಹುತೇಕ ಎಡಪಂಥೀಯರಿಗೂ ಮತ್ತು ಬಲಪಂಥೀಯರಿಗೂ ಏಕಕಾಲದಲ್ಲಿ ಅವರು ಅಪಥ್ಯರಾಗಿ ಕಂಡಿದ್ದಿದೆ. 'ದಕ್ಷಿಣ ಏಶಿಯಾದ ಬಹುತೇಕರಿಗೆ ಐಡಿಯಾಲಜಿ ಯೆಂಬುದು ಕೇವಲ ಚರ್ಮದಷ್ಟೇ ತೆಳುಪದರದ ಒಂದು ಹೊದಿಕೆ ಮಾತ್ರ' – ಎಂಬ ಮಾತಿನ ಮೂಲಕ ನಂದಿಯವರು ಈ ಟೀಕೆಗೆ ವಿಶಾಲಾರ್ಥದ ಒಂದು ಪ್ರತಿಸ್ಪಂದನೆ ಯನ್ನೂ ಕೊಟ್ಟಿದ್ದಾರೆ. ಮಾತ್ರವಲ್ಲ, ತಾನು ಸಿದ್ಧಸಿದ್ಧಾಂತಗಳನ್ನಾಧರಿಸಿ ಈ ದೇಶದ ಜನ ಹೀಗೆ ಬದುಕಬೇಕೆಂದು ಪರೋಕ್ಷವಾಗಿಯೂ ಶಿಪಾರಸ್ಸು ಮಾಡುವವನಲ್ಲವೆಂದು ಸ್ಪಷ್ಟವಾಗಿ ಅವರು ಹೇಳಿಕೊಂಡಿದ್ದಾರೆ. ವರ್ಷಗಳ ಹಿಂದೆ, ಕನ್ನಡ ನಾಡಿನ ಪತ್ರಿಕಾ ಸಂದರ್ಶನವೊಂದರ ತುದಿಗೆ – 'ಜನಸಮೂಹಕ್ಕೆ ನಿಮ್ಮ ಸಲಹೆ ಏನು' – ಎಂಬರ್ಥದ ಲೋಕಾಭಿರಾಮದ ಪ್ರಶ್ನೆಯನ್ನು ಅವರಿಗೆ ಕೇಳಲಾಗಿತ್ತು. ಅದಕ್ಕೆ ಅವರ ಉತ್ತರ – 'ಹೀಗೆ ಮಾಡಿ ಎಂದು ಜನರಿಗೆ ಶಿಫಾರಸ್ಸು ಮಾಡುವುದು ನನ್ನಂಥವರ ಕೆಲಸವಲ್ಲ; ಬದಲು, ಜನ ಮಾಡುವುದನ್ನು ಎಚ್ಚರದಿಂದ ಗಮನಿಸುತ್ತ, ಯಾಕೆ ಇಂಥ ಕಾಲದೇಶ ಸಂದರ್ಭಗಳಲ್ಲಿ ಅವರು ಹೀಗೆ ಮಾಡುತ್ತಿರಬಹುದು ಎಂಬುದನ್ನು ತಿಳಿಯುವ ಪ್ರಯತ್ನ ನನ್ನದು'. ಅಶೀಶ್ ನಂದಿಯವರ ಕ್ರೀಡನೀಯ ಕ್ರಿಯಾಶೀಲತೆಯ ಪ್ರೇರಣೆ ಪಡೆದವರಿಗೆ ಇಂಥ ಜನಪರ ವಿನಯ ಹುಟ್ಟುವ ಸಾಧ್ಯತೆ ಇರುವುದರಿಂದಲೇ, ನಾನು ನಂದಿಯವರನ್ನು ನಮ್ಮ ಈ ಕಾಲದ ಒಬ್ಬ ಪರಿಣಾಮಕಾರೀ ಚಿಂತಕ – ಎಂದೂ ತಿಳಿದಿದ್ದೇನೆ.

ಇತ್ತೀಚೆಗೆ ನಿಧನರಾದ
ಸಾಂಸ್ಕೃತಿಕ ಸಂಘಟಕ, ಸಮಾಜವಾದಿ ಸಹೃದಯ
**ಶ್ರೀ ಹಾಲ್ಕೆರೆ ಮಂಜುನಾಥ ಭಟ್ಟ**
ಯಕ್ಷಗಾನ ಕಲಾವಿದ
**ಶ್ರೀ ಅನಂತ ಹಾಲ್ಮುಂಡಿಗೇಸರ**
ರಂಗನಟ
**ಶ್ರೀ ಏಣಗಿ ನಟರಾಜ**
ನೀನಾಸಮ್ ಹಿತೈಷಿ
**ಶ್ರೀ ವೆಂಕಟರಾಮು ಮುಂಡಿಗೇಸರ**
ಇವರಿಗೆ ನೀನಾಸಮ್‌ನ ಶ್ರದ್ಧಾಂಜಲಿ

## ನೀನಾಸಮ್ ವರದಿಗಳು

**ನೀನಾಸಮ್ ರಂಗಶಿಕ್ಷಣ ಕೇಂದ್ರ:** ಈ ಸಾಲಿನ ಕೊನೆಯ ಪ್ರಯೋಗವಾಗಿ ಶೂನ್ಯ ಸಂಪಾದನೆಯನ್ನು ಆಧರಿಸಿ ಶ್ರೀ ರಘುನಂದನ ಅವರು ನಿರ್ದೇಶಿಸಿದ 'ಜಂಗಮದ ಹಂಗಿಗ ತಾನೆಂಬ ನುಲಿಯ ಚಂದಯ್ಯಗಳ ಸಂಪಾದನೆ' ಎಂಬ ನಾಟಕವನ್ನು ರಂಗಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳು ಎಪ್ರಿಲ್ ೨೦, ೨೧, ೨೨ ಮತ್ತು ೨೩ರಂದು ಪ್ರದರ್ಶಿಸಿದರು. ಆನಂತರ ಮೇ ೯ರಿಂದ ೧೫ರವರೆಗೆ ವರ್ಷದ ನಡುವೆ ಆಡಿದ ಎಲ್ಲ ನಾಟಕಗಳ ನಾಟಕೋತ್ಸವ ನಡೆಯಿತು. ಈ ಪ್ರದರ್ಶನಗಳ ಎಡೆಯಲ್ಲಿ ರಂಗಶಿಕ್ಷಣ ಕೇಂದ್ರದ ಹಳೆಯ ವಿದ್ಯಾರ್ಥಿ ಶ್ರೀ ತಲಕಾಡು ಗುರುರಾಜು ಅವರು ಶೇಕ್ಸ್‌ಪಿಯರ್‌ನ 'ಕಿಂಗ್ ಲಿಯರ್' ಆಧರಿಸಿ ಪರಸ್ಪರ ಮೈಸೂರು ತಂಡಕ್ಕೆ ನಿರ್ದೇಶಿಸಿದ 'ಒಂದಾನೊಂದು ಕಾಲ್ದಾಗ' ಎಂಬ ನಾಟಕದ ಪ್ರದರ್ಶನವನ್ನೂ ಏರ್ಪಡಿಸಲಾಗಿತ್ತು. ದಿನಾಂಕ ೭ರಿಂದ ೧೫ ಮೇ ೨೦೧೨ರವರೆಗೆ ವಾರ್ಷಿಕ ಪರೀಕ್ಷೆಗಳನ್ನು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ನಡೆಸಿತು.

**ಬೇಸಿಗೆ ರಂಗಶಿಬಿರ:** ಒಂದು ವರ್ಷದ ತರಬೇತಿಗೆ ಅನುಕೂಲವಿಲ್ಲದ ಆಸಕ್ತ ಹವ್ಯಾಸಿ ರಂಗಕರ್ಮಿಗಳಿಗಾಗಿ ೨೧ ದಿನಗಳ ಒಂದು ಕಿರು ರಂಗಶಿಬಿರವನ್ನು ಮೇ ೧೧ರಿಂದ ೩೧ರವರೆಗೆ ನಡೆಸಲಾಯಿತು. ಈ ಶಿಬಿರದಲ್ಲಿ ಕರ್ನಾಟಕದಿಂದ ೨೯ ಮತ್ತು ನೆರೆಯ ತಮಿಳುನಾಡಿನಿಂದ ೪, ಒಟ್ಟು ೩೩ ಮಂದಿ ಭಾಗವಹಿಸಿದ್ದರು. ರಂಗಶಿಕ್ಷಣ ಕೇಂದ್ರದ ಅಧ್ಯಾಪಕರು ಮತ್ತು ಅತಿಥಿ ಉಪನ್ಯಾಸಕರು ಶಿಬಿರದ ತರಗತಿಗಳನ್ನು ನಡೆಸಿಕೊಟ್ಟರು. ಶಿಬಿರದ ಅಂಗವಾಗಿ ಸಿದ್ಧಪಡಿಸಿದ ಎರಡು ನಾಟಕಗಳನ್ನು –ಸಂಸರ 'ವಿಜಯ ನಾರಸಿಂಹ' (ನಿ: ಮಂಜು ಕೊಡಗು) ಮತ್ತು ಎ. ರೇವತಿಯವರ ಆತ್ಮಕತೆಯನ್ನು ಆಧರಿಸಿದ 'ನಡುವೆ ಸುಳಿವಾತ್ಮನ ಬದುಕು ಬಯಲು' (ಅನು: ದು. ಸರಸ್ವತಿ; ನಿ: ಗಣೇಶ ಎಂ.) – ದಿನಾಂಕ ೩೧ರಂದು ಪ್ರದರ್ಶಿಸಲಾಯಿತು.

**ನೀನಾಸಮ್ ಚಟುವಟಿಕೆಗಳು:** ನೀನಾಸಮ್‌ನ ಎಲ್ಲ ವಿಭಾಗಗಳ ಲೆಕ್ಕಪತ್ರ ನಿರ್ವಾಹಕರಿಗೆ ಹಾಗೂ ಸಂಚಾಲಕರಿಗೆ ಅನುಕೂಲವಾಗಲೆಂದು ಚಾರ್ಟರ್ಡ್ ಅಕೌಂಟೆಂಟ್ ಶ್ರೀ ಬಿ.ವಿ. ರವೀಂದ್ರನಾಥರ ನೇತೃತ್ವದಲ್ಲಿ ಗಣಕ ಲೆಕ್ಕಪತ್ರ ಕುರಿತು ೧೦ ದಿನಗಳ ವಿಶೇಷ ಕಾರ್ಯಾಗಾರವೊಂದನ್ನು ಮಾರ್ಚ್ ೨೦೧೨ರ ೧ರಿಂದ ೧೦ವರೆಗೆ ನಡೆಸಲಾಯಿತು. ನೀನಾಸಮ್‌ನ ಆಡಳಿತ ಮಂಡಳಿಯ ಎಲ್ಲ ಸದಸ್ಯರಿಗಾಗಿ ಮತ್ತು ಹತ್ತಿರದ ಇತರ ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳ ಆಡಳಿತ ನಿರ್ವಾಹಕರಿಗಾಗಿ ಡಾ. ವಿಜಯ ಪದಕಿಯವರ ಮಾರ್ಗದರ್ಶನದಲ್ಲಿ ಇಂತಹ ಸಂಸ್ಥೆಗಳ ಸ್ವರೂಪ, ಆಡಳಿತ ಮಂಡಳಿಗಳ ರಚನೆ ಹಾಗೂ ನಿರ್ವಹಣೆಯ ವಿಧಾನಗಳ ಕುರಿತಾಗಿ ಎರಡು ಪ್ರತ್ಯೇಕ ಕಮ್ಮಟಗಳನ್ನು ಏಪ್ರಿಲ್ ೧೭ರಿಂದ ೧೯ರವರೆಗೆ ಮತ್ತು ಜೂನ್ ೨೧–೨೨ರಂದು ನಡೆಸಲಾಯಿತು.

**ಮಾತುಕತೆ ೧೦೨**

ನೀನಾಸಮ್ ಹೆಗ್ಗೋಡು (ಸಾಗರ) ಕರ್ನಾಟಕ ೫೭೭ ೪೧೭

ದೂರವಾಣಿ: ೦೮೧೮೩-೨೬೫೬೪೬

www.ninasam.org

ಖಾಸಗಿ ಪ್ರಸಾರದ ತ್ರೈಮಾಸಿಕ ಸಂಪರ್ಕಪತ್ರ

(ಫೆಬ್ರವರಿ-ಮೇ-ಆಗಸ್ಟ್-ನವೆಂಬರ್)

ಸಂಪಾದಕ: ಬಿ.ಆರ್. ವೆಂಕಟರಮಣ ಐತಾಳ

ಸಂಪಾದಕ ಮಂಡಳಿ: ಟಿ.ಪಿ.ಅಶೋಕ, ಜಶವಂತ ಜಾಧವ್

ವಾರ್ಷಿಕ ವರ್ಗಣಿ: ಎಂಬತ್ತು ರೂಪಾಯಿ

ಅಕ್ಷರ ಜೋಡಣೆ: ಅಕ್ಷರ ಗಣಕ, ಹೆಗ್ಗೋಡು,

ಮುದ್ರಣ: ಸ್ವ್ಯಾನ್ ಪ್ರಿಂಟರ್ಸ್, ಬೆಂಗಳೂರು

**ಮೇ ೨೦೧೨ ವರ್ಷ ಇಪ್ಪತ್ತಾರು ಸಂಚಿಕೆ ಎರಡು**



೧. **ಕುಮಾರವ್ಯಾಸನ ಕೃಷ್ಣ: ಒಂದು ಪ್ರತಿಕ್ರಿಯೆ**
ಡಾ| ಯು.ಆರ್. ಅನಂತಮೂರ್ತಿ — ಪುಟ ೨

೨. **ಭಾರತೀಯ ದರ್ಶನಗಳು ಮತ್ತು ಭಾಷೆ**
ಎಂ.ಎ. ಹೆಗಡೆ — ಪುಟ ೧೩

೩. **ಕಮಲಾದೇವಿ, ಒಂದೊಂದೆ ನೆನಪುಗಳು**
ವೈದೇಹಿ — ಪುಟ ೨೩

೪. **ಆಶೀಶ್ ನಂದಿಯವರ ಕ್ರೀಡನೀಯ ಕ್ರಿಯಾಶೀಲತೆ**
ಅಕ್ಷರ ಕೆ.ವಿ. — ಪುಟ ೩೫

೫. **ನೀನಾಸಮ್ ವರದಿಗಳು** — ಪುಟ ೪೦


second cover ←


**MAATHUKATHE** MAY. 2012 (YEAR 26 ISSUE 2)
NINASAM QUARTERLY NEWSLETTER
PUBLISHED EVERY FEB;MAY;AUG;NOV.
ANNUAL SUBSCRIPTION: Rs.80 (EIGHTY ONLY)
FOR PRIVATE CIRCULATION
**NINASAM HEGGODU (SAGAR) KARNATAKA 577 417**



**ಅಕ್ಷರ ಪ್ರಕಾಶನ**

ಹೆಗ್ಗೋಡು (ಸಾಗರ) ಕರ್ನಾಟಕ - ೫೭೭ ೪೧೭

**ಈಚಿನ ಪ್ರಕಟಣೆಗಳು**

| | |
|---|---|
| **Community and Culture: Selected Essays by K.V. Subbanna;** edited by N. Manu Chakravarthy | ₹ 495 |
| **ಶಬ್ದ ಮತ್ತು ಜಗತ್ತು** (ಬಿಮಲ್ ಕೃಷ್ಣ ಮತಿಲಾಲ್ ಅವರ 'ದಿ ವರ್ಡ್ ಎಂಡ್ ದಿ ವರ್ಲ್ಡ್' ಅನುವಾದ - ಪ್ರೊ. ಎಂ.ಎ. ಹೆಗಡೆ) | ₹ ೧೨೦ |
| **ಮಾಧ್ಯಮ-ಮಾರ್ಗ** (ಸಮಾಜ-ಸಂಸ್ಕೃತಿ-ಸಾಹಿತ್ಯ-ಕಲೆಗಳನ್ನು ಕುರಿತ ಚಿಂತನೆಗಳು - ಎನ್. ಮನು ಚಕ್ರವರ್ತಿ) | ₹ ೩೫೦ |
| **ತಲೆಗಳಿ** (ಕಾದಂಬರಿ - ವಿ.ತೀ. ಶೀಗೇಹಳ್ಳಿ) | ₹ ೩೦೦ |
| **ಸ್ಮೃತಿ-ವಿಸ್ಮೃತಿ: ಭಾರತೀಯ ಸಂಸ್ಕೃತಿ** (ಸಂಸ್ಕೃತಿಗಳ ತುಲನಾತ್ಮಕ ಅಧ್ಯಯನ - ಎಸ್. ಎನ್. ಬಾಲಗಂಗಾಧರ) | ₹ ೪೧೫ |
| **ಚೆರ್ರಿ ತೋಪು** (ಚೆಕಾಫ್ ನಾಟಕ ಅನುವಾದ - ಅಕ್ಷರ ಕೆ.ವಿ.) | ₹ ೬೫ |
| **ಹೊಸ ಶತಮಾನಕ್ಕೆ ಹೊಸ ಪರಿಭಾಷೆಗಳು** (ಮರುಮುದ್ರಣ) | ₹ ೧೮೦ |
| **ಅರೆಶತಮಾನದ ಅಲೆಬರಹಗಳು** (ಕೆ.ವಿ. ಸುಬ್ಬಣ್ಣ ಸಮಗ್ರ ಬರಹಗಳು) | ₹ ೫೮೦ |
| **ಪುಸ್ತಕ ಸಮಯ** (ವಿಮರ್ಶೆಯ ಬರಹಗಳು - ಟಿ.ಪಿ. ಅಶೋಕ) | ₹ ೧೮೫ |
| **ಇನ್ನೂ ಒಂದು** (ಕಾದಂಬರಿ - ವಿವೇಕ ಶಾನಭಾಗ - ಮರುಮುದ್ರಣ) | ₹ ೮೦ |
| **ಎತ್ತ ಹಾರಿದೆ ಹಂಸ** (ನಾಟಕ - ರಘುನಂದನ) | ₹ ೭೦ |
| **ಸ್ವರ್ಗಸಾಧನೆಯ ಉತ್ಕಟ ಬಯಕೆ: ಸಂದೇಹಿ ಮುಸ್ಲಿಮನ ಯಾತ್ರೆಗಳು** (ಜಿಯಾವುದ್ದೀನ್ ಸರದಾರ್ - ಕನ್ನಡಕ್ಕೆ: ಮಾಧವ ಚಿಪ್ಪಳಿ) | ₹ ೨೩೦ |
| **ಸಂಗೀತ ಸಂವಾದ** (ಭಾಸ್ಕರ ಚಂದಾವರ್ಕರ್ - ವೈದೇಹಿ) | ₹ ೧೪೦ |
| **ಶಿಶಿರ ವಸಂತ** (ಶೇಕ್ಸ್ಪಿಯರ್‌ನ 'ದಿ ವಿಂಟರ್ಸ್ ಟೇಲ್'ಅನುವಾದ) ಅಕ್ಷರ ಕೆ.ವಿ. | ₹ ೭೫ |
| **ಅಂತಃಪಠ್ಯ ಮತ್ತು ಇತರ ಪ್ರಬಂಧಗಳು** – ಅಕ್ಷರ ಕೆ.ವಿ. | ₹ ೧೮೦ |
| **ಸಾಹಿತ್ಯ ಸಂಚಾರ** (ವಿಮರ್ಶೆಯ ಬರಹಗಳು - ಟಿ.ಪಿ. ಅಶೋಕ) | ₹ ೨೬೦ |
| **ರವೀಂದ್ರನಾಥ ಠಾಕೂರ್ ಅವರ ಎರಡು ನಾಟಕಗಳು** (ಕೆಂಪು ಕಣಗಿಲೆ ಹಾಗೂ ರಾಜ ಮತ್ತು ರಾಣಿ ಅನುವಾದ) ಕೆ.ವಿ. ಸುಬ್ಬಣ್ಣ | ₹ ೧೦೦ |
| **ಯಃಕಶ್ಚಿತ್ ಹುಳದ ಕಥೆ** (ಎರಡು ಕಥನ ಕಾವ್ಯಗಳು) ಗ.ಸು. ಭಟ್ಟ ಬೆತ್ತಗೇರಿ | ₹ ೫೦ |
| **ನಾಟ್ಯಶಾಸ್ತ್ರ** (ಕನ್ನಡ ಅನುವಾದ) ಅನು: ಆದ್ಯ ರಂಗಾಚಾರ್ಯ | ₹ ೪೦೦ |
| **ರಂಗಪ್ರಯೋಗ** (ರಂಗ ಅಭಿನಯ, ರಂಗತಂತ್ರಗಳು ಮತ್ತು ರಂಗಸಿದ್ಧತೆಯ ಪರಿಚಯ) ಅಕ್ಷರ ಕೆ.ವಿ. | ₹ ೨೧೦ |


Third cover →